ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 2 ಶನಿವಾರ 2023

ಸಂಪುಟ: 44 | ಸಂಚಿಕೆ: 138 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಹುಣಸೂರಿನ ವೀರನಹೊಸಳ್ಳಿ ಗೇಟ್ ಬಳಿ ಮೈಸೂರು ಉಸ್ತುವಾರಿ ಸಚಿವ ಡಾ.ಮಹದೇವಪ್ಪರಿಂದ

ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಗಜಪಯಣಕ್ಕೆ ಚಾಲನೆ

ಸುರಕ್ಷಿತವಾಗಿ ಮೈಸೂರು ತಲುಪಿದ ಗಜಪಡೆ

ಹುಣಸೂರು, ಸೆ.1(ಎಂಟಿವೈ, ಕೆಕೆ)–ಈ ಬಾರಿಯ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಗಜಪಡೆಯ ಮೊದಲ ತಂಡದ ಒಂಭತ್ತು ಆನೆಗಳು ಶುಕ್ರವಾರ ಸಂಜೆ ಸುರಕ್ಷಿತವಾಗಿ ಮೈಸೂರು ತಲುಪಿದ್ದು, ಇದೀಗ ಅಶೋಕಪುರಂನಲ್ಲಿರುವ ಅರಣ್ಯ ಭವನದ ಆವರಣದಲ್ಲಿ ಬೀಡು ಬಿಟ್ಟಿವೆ.

ಮೊದಲ ತಂಡದಲ್ಲಿ ಮತ್ತಿಗೋಡು ಶಿಬಿರದಿಂದ ಗಜಪಡೆ ನಾಯಕ ಅಭಿಮನ್ಯು ನೇತೃತ್ವದಲ್ಲಿ ಭೀಮ, ಮಹೇಂದ್ರ, ಬಳ್ಳೆ ಶಿಬಿರದಿಂದ ಗಜಪಡೆಯ ಹಿಂದಿನ ನಾಯಕ ಅರ್ಜುನ, ದುಬಾರೆಯಿಂದ ಧನಂಜಯ, ಗೋಪಿ, ಕಂಜನ್, ಹೆಣ್ಣಾನೆ ವಿಜಯ ಹಾಗೂ ಭೀಮನಕಟ್ಟೆಯಿಂದ ವರಲಕ್ಷ್ಮಿ ಮೈಸೂರಿಗೆ ಆಗಮಿಸಿವೆ.

ಗಜಪಯಣಕ್ಕೆ ಸಾಂಪ್ರದಾಯಿಕ ಚಾಲನೆ: ದಸರಾ ಮಹೋತ್ಸವದ ಮೊದಲ ಕಾರ್ಯಕ್ರಮವಾದ ಗಜಪಯಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರು ಹುಣಸೂರು ತಾಲೂಕು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಹಳ್ಳಿ ಗೇಟ್‌ನಲ್ಲಿ ಶುಕ್ರವಾರ ಬೆಳಗ್ಗೆ ಚಾಲನೆ ನೀಡಿದರು.

ಬಳಿಕ ಮಂಗಳವಾದ್ಯ, ಪೂರ್ಣಕುಂಭ ಕಳಸ ಹೊತ್ತ ಮಹಿಳೆಯರು, ವೀರಗಾಸೆ, ಕಂಸಾಳೆ, ಗೊರವರ ಕುಣಿತ, ಚಂಡೆ ಮದ್ದಳೆ, ಡೊಳ್ಳು ಕುಣಿತ, ಗೊಂಬೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಗಜಪಡೆ ನಾಯಕ ಅಭಿಮನ್ಯು ನೇತೃತ್ವದಲ್ಲಿ 9 ಆನೆಗಳನ್ನು ಆಶ್ರಮ ಶಾಲೆ ಸಮೀಪದ ಮೈದಾನದವರೆಗೂ ಮೆರವಣಿಗೆಯಲ್ಲಿ ಕರೆತರಲಾಯಿತು. ಈ ವೇಳೆ ಗಜಪಯಣ ವೀಕ್ಷಣೆಗೆ ವಿವಿಧೆಡೆಯಿಂದ ಆಗಮಿಸಿದ್ದ ನೂರಾರು ಮಂದಿ ಮೆರವಣಿಗೆಗೆ ಮೆರಗು ● 3ನೇ ಪುಟಕ್ಕೆ



ಹುಣಸೂರು ತಾಲೂಕು ವೀರನಹೊಸಹಳ್ಳಿ ಗೇಟ್‌ನಲ್ಲಿ ಈ ಬಾರಿಯ ದಸರಾದಲ್ಲಿ ಪಾಲ್ಗೊಳ್ಳುವ ಗಜಪಡೆಯ ಮೊದಲ ತಂಡದ ಒಂಭತ್ತು ಆನೆಗಳಿಗೆ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು.

ಈ ಬಾರಿ 4 ಹೊಸ ಆನೆಗಳಿಗೆ ಅವಕಾಶ

ಮೈಸೂರು, ಸೆ.1(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಈ ಬಾರಿ ಪಾಲ್ಗೊಳ್ಳುವ 14 ಆನೆಗಳಲ್ಲಿ ನಾಲ್ಕು ಆನೆಗಳು ಇದೇ ಮೊದಲ ಬಾರಿಗೆ ಜಂಬೂ ಸವಾರಿ ಮೆರವಣಿಗೆಯಲ್ಲಿ ಭಾಗವಹಿಸಲು ಅವಕಾಶ ಗಿಟ್ಟಿಸಿಕೊಂಡಿವೆ.

ಅ.15ರಿಂದ 24ರವರೆಗೆ ನಡೆಯುವ ದಸರಾ ಮಹೋತ್ಸವವನ್ನು ಈ ಬಾರಿ ಅದ್ಧೂರಿಯಾಗಿ ಆಚರಿಸಲಾಗುತ್ತಿದ್ದು, ಈ ಬಾರಿ 10 ಗಂಡಾನೆ ಹಾಗೂ ನಾಲ್ಕು ಹೆಣ್ಣಾನೆಗಳನ್ನು ಕರೆತರಲಾಗುತ್ತಿದೆ. ಮೊದಲ ತಂಡದಲ್ಲಿ ಒಂದು ಹೊಸ ಗಂಡಾನೆ ಸೇರಿದಂತೆ ಒಟ್ಟು 9 ಆನೆಗಳನ್ನು ಗಜಪಯಣದ ಮೂಲಕ ಮೈಸೂರಿಗೆ ಕರೆತರಲಾಗಿದೆ. ಎರಡನೇ ತಂಡದಲ್ಲಿ ಎರಡು ಹೆಣ್ಣಾನೆ ಸೇರಿದಂತೆ 5 ಆನೆಗಳು ತಿಂಗಳಾಂತ್ಯದಲ್ಲಿ ಕರೆತರಲಾಗುತ್ತದೆ. ಈ ಬಾರಿ ದುಬಾರೆ ಕ್ಯಾಂಪ್‌ನ 24 ವರ್ಷದ ಕಂಜನ್, ರಾಂಪುರ ಕ್ಯಾಂಪ್‌ನ 21 ವರ್ಷದ ರೋಹಿತ್, ದೊಡ್ಡಹರವೆ ಕ್ಯಾಂಪ್‌ನ 52 ವರ್ಷದ ಲಕ್ಷ್ಮಿ ಹಾಗೂ ರಾಂಪುರ 46 ವರ್ಷದ ಹಿರಣ್ಯ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿವೆ. ಮೊದಲ ತಂಡದಲ್ಲಿ ಗಜಪಡೆಯ ನಾಯಕ ಅಭಿಮನ್ಯು (ಮತ್ತಿಗೂಡು) ● 3ನೇ ಪುಟಕ್ಕೆ

ದಿಗ್ವಿಜಯ ನ್ಯೂಸ್ ಈಗ 'ರಿಪಬ್ಲಿಕ್ ಕನ್ನಡ'

ಬೆಂಗಳೂರು, ಸೆ. 1– ವಿಆರ್‌ಎಲ್ ಸಮೂಹ ಸಂಸ್ಥೆಯ 'ದಿಗ್ವಿಜಯ ನ್ಯೂಸ್' ಸುದ್ದಿ ವಾಹಿನಿಯನ್ನು ಅರ್ನಬ್ ಗೋಸ್ವಾಮಿ ನೇತೃತ್ವದ 'ರಿಪಬ್ಲಿಕ್ ಮೀಡಿಯಾ ನೆಟ್‌ವರ್ಕ್' ಸಮೂಹ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ದಿಗ್ವಿಜಯ ನ್ಯೂಸ್ ಇನ್ನು ಮುಂದೆ 'ರಿಪಬ್ಲಿಕ್ ಕನ್ನಡ' ಹೆಸರಿನಲ್ಲಿ ಪ್ರಸಾರವಾಗಲಿದೆ.

ಸೂರ್ಯಯಾನ: ಇಸ್ರೋದ ಆದಿತ್ಯಾ ಎಲ್–1

ಉಪಗ್ರಹ ಉಡಾವಣೆಗೆ ಕ್ಷಣಗಣನೆ



ಸಮಯ:	2–9–2023ರ ಬೆಳಗ್ಗೆ 11.50
ವಾಹಕ:	ಪಿಎಸ್‌ಎಲ್‌ವಿ–ಸಿ57
ಸ್ಥಳ:	ಸತೀಶ್ ಧವನ್ ಉಡಾವಣೆ ಕೇಂದ್ರ, ಶ್ರೀಹರಿಕೋಟಾ
ದೂರ:	1.5 ಮಿಲಿಯನ್ ಕಿಮೀ.
ಅವಧಿ:	ನಾಲ್ಕು ತಿಂಗಳು
ಒಟ್ಟು ವೆಚ್ಚ;	ಅಂದಾಜು 400 ಕೋಟಿ ರೂ.

ಶ್ರೀಹರಿಕೋಟ, ಸೆ.1– ಸೂರ್ಯ ಕಿರಣಗಳೇ ಬೀಳದ ಚಂದ್ರನ ಕತ್ತಲೆಯ ದಕ್ಷಿಣ ಧ್ರುವ ಪ್ರದೇಶದಲ್ಲಿ ಲ್ಯಾಂಡರ್ ಅನ್ನು ಯಶಸ್ವಿಯಾಗಿ ಇರಿಸಿದ ನಂತರ ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋ, ಇದೀಗ ತನ್ನ ಮುಂದಿನ ಬಾಹ್ಯಾಕಾಶ ಸಾಹಸಕ್ಕೆ ಸಿದ್ದವಾಗಿದ್ದು, ಬಹು ನಿರೀಕ್ಷೆಯ ಆದಿತ್ಯಾ ಎಲ್–1 ಉಪಗ್ರಹ ಉಡಾವಣೆಗೆ ಕ್ಷಣಗಣನೆ ಆರಂಭವಾಗಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ದೇಶದ ಮೊದಲ ಸೌರ ಮಿಷನ್ ಆದಿತ್ಯ–ಐ1ಗಾಗಿ ಸಕಲ ರೀತಿಯಲ್ಲೂ ಸಿದ್ಧವಾಗಿದ್ದು, ಈಗಾಗಲೇ ● 7ನೇ ಪುಟಕ್ಕೆ

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಆಯ್ಕೆ ಅಸಿಂಧು

- ರಾಜ್ಯ ಹೈಕೋರ್ಟ್ ಏಕಸದಸ್ಯ ಪೀಠ ಮಹತ್ವದ ತೀರ್ಪು
- ಪ್ರತಿ ಸ್ಪರ್ಧಿ ಬಿಜೆಪಿ ಅಭ್ಯರ್ಥಿಯಾಗಿದ್ದ ಎ.ಮಂಜು, ಮತದಾರ ಎಂ.ದೇವರಾಜ್‌ಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ

ಬೆಂಗಳೂರು, ಸೆ.1(ಕೆಎಂಶಿ)– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮೊಮ್ಮಗ ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರ ಆಯ್ಕೆಯನ್ನು ರಾಜ್ಯ ಹೈಕೋರ್ಟ್ ಅಸಿಂಧುಗೊಳಿಸಿ ಮಹತ್ವದ ಆದೇಶ ಹೊರಡಿಸಿದೆ.



ಜೆಡಿಎಸ್ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿಯುವಾಗ ಚುನಾವಣಾ ಆಯೋಗಕ್ಕೆ ಆಸ್ತಿ ವಿಚಾರವಾಗಿ ತಪ್ಪು ಮಾಹಿತಿ ನೀಡಿದ್ದು, ಚುನಾವಣಾ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಅವರು ಲೋಕಸಭಾ ಸದಸ್ಯ ಸ್ಥಾನಕ್ಕೆ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಿದೆ. ಪ್ರಜ್ವಲ್ ಪ್ರತಿಸ್ಪರ್ಧಿ ಯಾಗಿ ಕಣಕ್ಕಿಳಿದಿದ್ದ ಬಿಜೆಪಿ ಅಭ್ಯರ್ಥಿ, ಹಾಲಿ ಅರಕಲಗೂಡು ಜೆಡಿಎಸ್ ಶಾಸಕ ಎ. ಮಂಜು ಹಾಗೂ ಸ್ಥಳೀಯ ಮತದಾರ ಎಂ.ದೇವರಾಜ್ ಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ವಿಚಾರಣೆ ಕೈಗೆತ್ತಿಕೊಂಡಿದ್ದ ನ್ಯಾಯಮೂರ್ತಿ ಕೆ.ನಟರಾಜನ್ ಅವರ ಏಕಸದಸ್ಯ ಪೀಠ ಈ ಮಹತ್ವದ ತೀರ್ಪು ನೀಡಿದೆ. ಎ.ಮಂಜು, ಹಾಸನ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ವಿರುದ್ಧ ಸ್ಪರ್ಧಿಸಿ, ಸೋತಿದ್ದರು. ನಂತರ ಪ್ರಜ್ವಲ್ ರೇವಣ್ಣ ಅವರ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಿದ್ದರು. ಪ್ರಜ್ವಲ್ ರೇವಣ್ಣ ಅಕ್ರಮ ● 7ನೇ ಪುಟಕ್ಕೆ

> “ನ್ಯಾಯಾಲಯದ ತೀರ್ಪನ್ನು ಗೌರವಿಸುತ್ತೇವೆ. ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು. ಸುಪ್ರೀಂನಲ್ಲಿ ಪ್ರಜ್ವಲ್ ರೇವಣ್ಣರಿಗೆ ನ್ಯಾಯ ದೊರೆಯುವ ವಿಶ್ವಾಸವಿದೆ.
> –ಹೆಚ್.ಡಿ.ರೇವಣ್ಣ, ಮಾಜಿ ಸಚಿವ



> “ನನ್ನ ಮೇಲೆ ಹಲವಾರು ಆರೋಪಗಳನ್ನು ಮಾಡಲಾಗಿದೆ. ಯಾವ ಆರೋಪದಡಿ ಹೈಕೋರ್ಟ್ ನನ್ನನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿದೆ ಎಂಬುದು ತೀರ್ಪಿನ ಪ್ರತಿಯನ್ನು ನೋಡಿದ ನಂತರವೇ ಗೊತ್ತಾಗಲಿದೆ. ಚುನಾವಣೆ ಸಂದರ್ಭದಲ್ಲಿ ಎಲ್ಲಾ ಮಾಹಿತಿಗಳನ್ನೂ ನೀಡಲಾಗಿದೆ. ಮುಂದಿನ ನಡೆ ಬಗ್ಗೆ ತಾತ ಹೆಚ್.ಡಿ.ದೇವೇಗೌಡ ಹಾಗೂ ತಂದೆ ಹೆಚ್.ಡಿ.ರೇವಣ್ಣರ ಜೊತೆ ಚರ್ಚಿಸಲಾಗುವುದು. ಹೈಕೋರ್ಟ್ ತೀರ್ಪಿನ ಬಗ್ಗೆ ವಕೀಲರೊಂದಿಗೆ ಚರ್ಚೆ ನಡೆಸುತ್ತಿದ್ದು, ಕಾನೂನು ಹೋರಾಟವನ್ನಂತೂ ನಡೆಸುತ್ತೇನೆ. –ಪ್ರಜ್ವಲ್ ರೇವಣ್ಣ, ಸಂಸದ

ರಾಯರ ಆರಾಧನಾ ಮಹೋತ್ಸವ; ಶಾಸಕ ಹರೀಶ್‌ಗೌಡರಿಂದ ಭಕ್ತರಿಗೆ ತುಳಸಿ ಗಿಡ ವಿತರಣೆ



ಮೈಸೂರು, ಸೆ.1–ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಮೈಸೂರು ಯುವ ಬಳಗದ ವತಿಯಿಂದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಗುರು ರಾಘವೇಂದ್ರ ಮಠದಲ್ಲಿ ಶಾಸಕ ಹರೀಶ್‌ಗೌಡರು ಭಕ್ತರಿಗೆ ತುಳಸಿ ಗಿಡ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಗುರು ರಾಘವೇಂದ್ರ ರಾಯರು ಕಲಿಯುಗದ ಕಾಮಧೇನು, ಕಲ್ಪತರು ಎಂದೇ ಖ್ಯಾತಿ ಪಡೆದಿದ್ದಾರೆ. ರಾಯರು ತಿರುಪತಿ ವೆಂಕಟೇಶ್ವರ ಕೃಪೆಯಿಂದ ಜಾತಿಮತ ಧರ್ಮದ ಭೇದವಿಲ್ಲದೆ ಸಕಲ ಜೀವರಾಶಿಗೂ ಸಲುಹುತ್ತಿದ್ದಾರೆ ಎಂದರು.

ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ಮಾದೇವಣ್ಣ, ರಾಜೀವ್, ರವಿಚಂದ್ರ, ನಂಜುಂಡಿ, ಲೋಕೇಶ್, ವಾಟರ್ ವರ್ಕ್ಸ್ ಬಸವರಾಜು, ನಾಗರಾಜ್, ವರುಣ ಮಹದೇವ್, ಕಾಂತಿಲಾಲ್, ಆನಂದ, ಮಂಜುಳಾ, ಶಾಂತಿ, ಮಂಗಳ, ಜಗದೀಶ್, ವಿಘ್ನೇಶ್ವರ ಭಟ್, ನವೀನ ಹಾಗೂ ಇನ್ನಿತರರು ಹಾಜರಿದ್ದರು.



ಮೈಸೂರಿನ ವರುಣಾ ಹೋಬಳಿ ಎಂ.ಬಿ.ಹಳ್ಳಿ ರಸ್ತೆಯ ಜಂತಗಳ್ಳಿ ಕಲ್ಪವೃಕ್ಷ ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ರಾಯರ ಆರಾಧನೆ ಅಂಗವಾಗಿ ವಿಶೇಷ ಪೂಜೆ, ಅಭಿಷೇಕ, ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನೆರವೇರಿತು. ರಾಯರ ಆರಾಧನೆಯ ಅಂಗವಾಗಿ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿಯಿಂದ ವಿದೂಷಿ ಆರತಿ ವಿಜಯೀಂದ್ರ ಮತ್ತು ಸಂಗಡಿಗರಿಂದ ದಾಸರ ಪದಗಳ ಭಜನೆ ನಡೆಯಿತು.



ಶ್ರೀ ಸುತ್ತೂರು ಮಠದಲ್ಲಿ ನಡೆದ 258ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದುಷಿ ಸ್ಫೂರ್ತಿ ರಾವ್ ಗಾಯನ ಪ್ರಸ್ತುತಪಡಿಸಿದರು. ವಿದ್ವಾನ್ ಕೆ.ವಿ. ಪ್ರಸಾದ್, ವಿದ್ವಾನ್ ಶರತ್ ಕೌಶಿಕ್ ಹಾಗೂ ವಿದುಷಿ ಸಿ.ವಿ.ಶ್ರುತಿ ಸಹಕಾರ ನೀಡಿದ್ದಾರೆ.

ರಕ್ಷೆಯ ಜೊತೆಗೆ ದೇಶ ರಕ್ಷಣೆಯ ಸಂಕಲ್ಪ ಮಾಡೋಣ



ಮೈಸೂರು, ಸೆ.1–ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣ ಧಾಮದಲ್ಲಿ ರಕ್ಷಾ ಬಂಧನವನ್ನು ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ರಕ್ಷೆ ಕಟ್ಟುವ ಮೂಲಕ ಆಚರಿಸಿದರು. ಬಳಿಕ ಮಾತನಾಡಿದ ಹೋಟೆಲ್ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿ ಶಾಸ್ತ್ರಿ, ನಮ್ಮ ಪುರಾಣ ಕಾಲದಿಂದಲೂ ರಕ್ಷಾ ಬಂಧನಕ್ಕೆ ವಿಶಿಷ್ಟವಾದ ಮಹತ್ವವಿದೆ. ಪರಿಸರ, ಸಮಾಜ ಹಾಗೂ ದೇಶದ ರಕ್ಷಣೆ ಈ ರಕ್ಷಾಬಂಧನದ ಮೂಲ ಉದ್ದೇಶವಾಗಿದೆ.

ಸಹೋದರತೆಯ ಸಂಕೇತದ ಹಬ್ಬವಾಗಿ ಆಚರಿಸುವ ರಕ್ಷಾ ಬಂಧನದ ರಕ್ಷೆಯ ಸಮಾಜದಲ್ಲಿ ಮೇಲು ಕೀಳು ಎಂಬ ಭಾವನೆಗಳನ್ನು ಅಳಿಸಿ ಒಗ್ಗಟ್ಟಿನಿಂದ ರಾಷ್ಟ್ರೀಯವಾದಿ ಚಿಂತನೆಯ ಸಮಾಜದ ನಿರ್ಮಾಣದ ಮೂಲಕ ದೇಶದ ಅಭಿವೃದ್ಧಿಗೆ ಪ್ರೇರಣೆಯಾಗಲಿ ಎಂದರು. ಶ್ರೀ ಕೃಷ್ಣ ಮಿತ್ರ ಮಂಡಳಿಯ ಕೃಷ್ಣದಾಸ್ ಪುರಾಣಿಕ್, ಜಟ್ಟಪ್ಪಾಜಿ, ವಿಶ್ವ ಹಿಂದೂ ಪರಿಷತ್ ಉಪಾಧ್ಯಕ್ಷರು ಜಗದೀಶ್ ಹೆಬ್ಬಾರ್, ಕಾರ್ಯದರ್ಶಿ ಮಧುಶಂಕರ್, ವಿಶ್ವ ಹಿಂದೂ ಪರಿಷತ್ ವಿಭಾಗ ಸಂಯೋಜಕಿ ಸವಿತಾ ಘಾಟ್ಕೆ, ಎನ್. ಭಾರತಿ, ಪ್ರತಿಭಾ ಗುರುರಾಜ್, ಅಂಬಿಕಾ, ಕುಮಾರಿ, ಪ್ರೇಮಾ, ಭಾಗ್ಯ ಲಕ್ಷ್ಮಿ, ಸಂಗೀತಾ, ದರ್ಶಿನಿ, ಸುರೇಶ್ ಗೋಲ್ಡ್, ಶಿವು, ಹಾಗೂ ಇನ್ನಿತರರು ಭಾಗವಹಿಸಿದ್ದರು.



ಮೈಸೂರಿನಲ್ಲಿ ನೆಲೆಸಿರುವ ಕೇಂದ್ರ ರಕ್ಷಣೆ ಸಂಶೋಧನಾ ಸಂಸ್ಥೆಯ ನಿವೃತ್ತ ಸಾರ್ವಜನಿಕ ಸಂಪರ್ಕಾಧಿಕಾರಿ, ಸಾಹಿತಿ ಹಾಗೂ ವಿಷಯ ತಜ್ಞ ಕೆ.ಜಯಪ್ರಕಾಶ್ ರಾವ್ ತಮ್ಮ ಹಾಗೂ ತಮ್ಮ ಮಕ್ಕಳ ಹುಟ್ಟುಹಬ್ಬವನ್ನು ಜೆ.ಪಿ.ನಗರದ ಹಿರಿಯರ ವಿಶ್ರಾಂತಿ ಧಾಮದಲ್ಲಿ ಆಚರಿಸಿಕೊಂಡರು. ಈ ಸಂಬಂಧ ಆಶ್ರಮವಾಸಿಗಳೊಂದಿಗೆ ನಡೆದ ಮಧ್ಯಾನದ ಭೋಜನ ಕಾರ್ಯಕ್ರಮದ ವೇಳೆ ರಾವ್, ಸಮಾಜ ಸೇವಕ ಡಾ.ರಘುರಾಮ ವಾಜಪೇಯಿ ಅವರು ಶಾಲು ಹೊದಿಸಿ ಶ್ರೀ ಕೃಷ್ಣನ ವಿಗ್ರಹ ನೀಡಿ ಅಭಿನಂದಿಸಿದರು. ಶ್ರೀಧಾಮದ ಗೌರವ ಕಾರ್ಯದರ್ಶಿ ಗುರುನಾಥ್ ಇದ್ದಾರೆ.

ಅನನ್ಯ ಭಟ್, ಭೂಮಿಕ ಕೌಂಡಿನ್ಯ ಅವರಿಂದ ಭಕ್ತಿಭಾವಗೀತೆ



ಮೈಸೂರು, ಸೆ. 1–ಉಡುಪಿ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಪಾದಂಗಳವರ 36ನೇ ಚಾತುರ್ಮಾಸ್ಯದ ಪ್ರಯುಕ್ತ ಅನನ್ಯ ಭಟ್ ಮತ್ತು ಭೂಮಿಕ ಕೌಂಡಿನ್ಯ ಅವರಿಂದ ಭಕ್ತಿಭಾವಗೀತೆ ಕಾರ್ಯಕ್ರಮವನ್ನು ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಸೆ.2 ಶನಿವಾರದಂದು ಸಂಜೆ 7 ಗಂಟೆಗೆ ಆಯೋಜಿಸಲಾಗಿದೆ ಎಂದು ಚಾತುರ್ಮಾಸ್ಯ ಸಮಿತಿಯ ಕಾರ್ಯಾಧ್ಯಕ್ಷರಾದ ರವಿಶಾಸ್ತ್ರಿ ತಿಳಿಸಿದ್ದಾರೆ.

ಹೈಕೋರ್ಟ್ ಆದೇಶದ ನಂತರವೂ ತಡವಾಗಿ

ತಾಯಿಗೆ ಜೀವನಾಂಶ ಕಲ್ಪಿಸಿದ ಪುತ್ರರು!

ಮೈಸೂರು ಉಪ ವಿಭಾಗದ ಉಪ ವಿಭಾಗಾಧಿಕಾರಿ ರಕ್ಷಿತ್ ತ್ವರಿತ ಕ್ರಮ; ನೊಂದ ಜೀವಕ್ಕೆ ನೆಮ್ಮದಿ

ಮೈಸೂರು, ಸೆ.1(ಆರ್‌ಕೆ)–ಹೈಕೋರ್ಟ್ ಆದೇಶದಂತೆ ಹಿರಿಯ ನಾಗರಿಕರಾದ ಮೈಸೂರಿನ ಕೆಸರೆಯ ಕುರಿಮಂಡಿ ಸರ್ಕಲ್ ನಿವಾಸಿ ಲೇಟ್ ಯಲ್ಲಯ್ಯ ಅವರ ಪತ್ನಿ ಶ್ರೀಮತಿ ವೆಂಕಟಮ್ಮ ಅವರಿಗೆ ಮೈಸೂರು ಉಪ ವಿಭಾಗಾಧಿಕಾರಿ ಕೆ.ಆರ್.ರಕ್ಷಿತ್ ಅವರು ಮಾಸಿಕ 5000 ರೂ. ಜೀವನಾಂಶದ ಹಣವನ್ನು ಪುತ್ರರಿಂದ ಕೊಡಿಸುವಲ್ಲಿ ಯಶಸ್ವಿಯಾದರು.

2023ರ ಜುಲೈ 12ರಂದು ರಾಜ್ಯ ಉಚ್ಚ ನ್ಯಾಯಾಲಯವು ವೃದ್ಧ ತಾಯಿ ಎಲ್ಲಮ್ಮ ಅವರಿಗೆ ಪುತ್ರರಾದ ಗೋಪಾಲ್ ಮತ್ತು ಮಹೇಶ್ ಅವರು ಪ್ರತೀ ತಿಂಗಳೂ ಒಟ್ಟು 5000 ರೂ. ಜೀವನಾಂಶ ನೀಡಬೇಕೆಂದು ಆದೇಶ ನೀಡಿತ್ತು. ಅದರನ್ವಯ ಪುತ್ರರು ಕ್ರಮ ವಹಿಸದಿದ್ದ ಕಾರಣ, ಮೈಸೂರು ಉಪ ವಿಭಾಗದ ಉಪ ವಿಭಾಗಾಧಿಕಾರಿ ಹಾಗೂ ದಂಡಾಧಿಕಾರಿಯಾದ ಕೆ.ಆರ್.ರಕ್ಷಿತ್ ಅವರು ಆಗಸ್ಟ್ 8ರಂದು ಆರೋಪಿತ ಪುತ್ರರಿಬ್ಬರಿಗೂ ವಾರಂಟ್ ಜಾರಿ ಮಾಡಿ, ತಮ್ಮ ನ್ಯಾಯಾಲಯದ ಮುಂದೆ ಹಾಜರಾಗುವಂತೆ ನಿರ್ದೇಶಿಸಿದ್ದರು.



ಮೈಸೂರು ಉಪ ವಿಭಾಗಾಧಿಕಾರಿ ಕೆ.ಆರ್.ರಕ್ಷಿತ್ ಅವರು ಹಿರಿಯ ನಾಗರಿಕರಾದ ವೆಂಕಟಮ್ಮ ಅವರಿಗೆ ಮಕ್ಕಳಿಂದ ಜೀವನಾಂಶ ಕೊಡಿಸಿದರು.

ವಾರಂಟ್ ಸಂಬಂಧ ಹೈಕೋರ್ಟ್ ಆದೇಶ ಪಾಲಿಸದೇ ಅಪರಾಧದ ಆರೋಪಣೆಗೆ ಗುರಿಯಾಗಿರುವ ಗೋಪಾಲ್ ಮತ್ತು ಮಹೇಶ್‌ರನ್ನು ಬಂಧಿಸಿ ಆಗಸ್ಟ್ 23ರಂದು ತಮ್ಮ ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಎನ್.ಆರ್.ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಆಗಸ್ಟ್ 19ರಂದು ನಿರ್ದೇಶಿಸಿದ್ದರಾದರೂ ಅಂದು ಹಾಜರುಪಡಿಸದ ಕಾರಣ ಸೆಪ್ಟೆಂಬರ್ 1(ಇಂದು)ರಂದು ಹಾಜರುಪಡಿಸುವಂತೆ ಆಗಸ್ಟ್ 23ರಂದು ಮತ್ತೆ ಅರೆಸ್ಟ್ ವಾರಂಟ್ ನೀಡಿದ್ದರು.

ಅದರನ್ವಯ ಪೊಲೀಸರು ಕಡೆಗೂ ಇಬ್ಬರನ್ನೂ ಬಂಧಿಸಿ ಇಂದು ಎಸಿ ಕೋರ್ಟ್ ಮುಂದೆ ಹಾಜರುಪಡಿಸಿದಾಗ ವಿಚಾರಣೆ ನಡೆಸಿದ ಉಪ ವಿಭಾಗಾಧಿಕಾರಿ ರಕ್ಷಿತ್ ಅವರು ಗೋಪಾಲ್ ಮತ್ತು ಮಹೇಶ್‌ರಿಂದ ಅವರ ವಯಸ್ಸಾದ ತಾಯಿ ವೆಂಕಟಮ್ಮ ಅವರಿಗೆ 5,000 ರೂ. ಜೀವನಾಂಶದ ಹಣ ಕೊಡಿಸಿ, ಮುಂದೆ ಪ್ರತೀ ತಿಂಗಳೂ ಹಣ ನೀಡುವಂತೆ ತಾಕೀತು ಮಾಡಿ ಕಳುಹಿಸಿಕೊಟ್ಟರು.

ತಂದೆ–ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ–ಪೋಷಣೆ ಮತ್ತು ಯೋಗಕ್ಷೇಮ ಅಧಿನಿಯಮ 2007ರ ಕಲಂ 5(8)ರನ್ವಯ ಮಕ್ಕಳಿಂದ ಜೀವನಾಂಶ ಕೊಡಿಸುವಂತೆ ವೆಂಕಟಮ್ಮ ಅವರು ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಎಸಿ ಕೋರ್ಟ್ 2019ರ ಮೇ 22ರಂದು ನೀಡಿದ ಆದೇಶದಂತೆ 2022ರ ಮೇ 25ರಂದು ಜಿಲ್ಲಾಧಿಕಾರಿಗಳೂ ಆದೇಶ ಹೊರಡಿಸಿದ್ದರು. ನಂತರ 2023ರ ಜುಲೈ 12ರಂದು ಈ ಎರಡೂ ಆದೇಶಗಳನ್ನು ಪುರಸ್ಕರಿಸಿ ರಾಜ್ಯ ಉಚ್ಚ ನ್ಯಾಯಾಲಯವು ಅದೇಶ ಹೊರಡಿಸಿತ್ತು. ಆದರೆ, ಈವರೆಗೂ ಜೀವನಾಂಶ ನೀಡಿಲ್ಲ ಹಾಗೂ ಜೀವನ ನಡೆಸಲು ತೊಂದರೆಯಾಗಿದೆ ಎಂದು ವೆಂಕಟಮ್ಮ ಅವರು 2023ರ ಮಾರ್ಚ್ 27ರಂದು ಉಪ ವಿಭಾಗಾಧಿಕಾರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಮನವಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕಾವೇರಿ ಕೊಳ್ಳದ ಶಾಸಕರ ಸಭೆ ಕರೆಯಲು ಸಿಎಂಗೆ ಎಂಎಲ್‌ಸಿ ಮರಿತಿಬ್ಬೇಗೌಡ ಒತ್ತಾಯ



ಮೈಸೂರು, ಸೆ. 1– ಪ್ರಸಕ್ತ ಸಂಕಷ್ಟ ಪರಿಸ್ಥಿತಿಯಲ್ಲಿ ಕಾವೇರಿ ಕೊಳ್ಳದ ನಾಲ್ಕು ಜಲಾಶಯಗಳಲ್ಲಿರುವ ನೀರನ್ನು ಮುಂಗಾರು ಬೆಳೆಗೆ, ಕೆರೆಗಳನ್ನು ತುಂಬಿಸಲು ಹಾಗೂ ಕುಡಿಯುವ ನೀರಿನ ಅಗತ್ಯತೆ ಪೂರೈಸುವ ಸಂಬಂಧ ಮುಖ್ಯಮಂತ್ರಿಗಳು ಕಾವೇರಿ ಕೊಳ್ಳದ ಎಲ್ಲಾ ಶಾಸಕರ ಸಭೆ ಕರೆಯಬೇಕೆಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಒತ್ತಾಯಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ನೀಡಿರುವ ಅವರು, ಮುಂಗಾರು ಮಳೆ ಶೇ. 50ಕ್ಕೂ ಅಧಿಕ ಪ್ರಮಾಣದಲ್ಲಿ ಕಡಿಮೆ ಆಗಿರುವುದರಿಂದ ಕೆಆರ್‌ಎಸ್, ಹಾರಂಗಿ, ಕಬಿನಿ, ಹೇಮಾವತಿ ಜಲಾಶಯಗಳಲ್ಲಿ ನೀರಿನ ಶೇಖರಣೆ ಗಣನೀಯವಾಗಿ ಕುಸಿದಿದೆ. ಇದರಿಂದಾಗಿ ಕಾವೇರಿ ಜಲಾನಯನ ಪ್ರದೇಶದ ವ್ಯಾಪ್ತಿಗೆ ಬರುವ ಜಿಲ್ಲೆಗಳಾದ ಮೈಸೂರು, ಮಂಡ್ಯ, ಹಾಸನ, ಕೊಡಗು, ತುಮಕೂರು, ಚಾಮರಾಜನಗರ, ರಾಮನಗರ, ಬೆಂಗಳೂರು ಪ್ರದೇಶಗಳಲ್ಲಿ ಹಾಲಿ ಇರುವ ಬೆಳೆಗೂ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಪ್ರದೇಶಗಳ ಕೆರೆಗಳು ಒಣಗಿರುವ ಕಾರಣ ಅಂತರ್ಜಲ ಮಟ್ಟ ಕುಸಿದಿದ್ದು, ರೈತರು ಮತ್ತು ಜನಸಾಮಾನ್ಯರು ತೊಂದರೆಗೊಳಗಾಗಿದ್ದಾರೆ. ಸುಪ್ರೀಂಕೋರ್ಟ್ ಹಾಗೂ ನೀರಾವರಿ ಪ್ರಾಧಿಕಾರದ ಸೂಚನೆಯಂತೆ ತಮಿಳುನಾಡಿಗೆ ನೀರು ಬಿಡಲಾಗುತ್ತಿದೆ. ಆದರೆ, ನಮ್ಮ ರೈತರ ಮುಂಗಾರು ಬೆಳೆಗೆ ನೀರು ಬಿಡದೇ ಇರುವುದು ದುರದೃಷ್ಟಕರ ಎಂದಿರುವ ಅವರು, ಕಾವೇರಿ ಕೊಳ್ಳದ ರೈತರು ತಮಿಳುನಾಡಿಗೆ ನೀರು ಬಿಡುವುದನ್ನು ವಿರೋಧಿಸಿ ಚಳುವಳಿ ಮಾಡುತ್ತಿರುವುದನ್ನು ಮುಖ್ಯಮಂತ್ರಿಗಳು ಮನಗಾಣಬೇಕು ಎಂದು ಮರಿತಿಬ್ಬೇಗೌಡ ತಿಳಿಸಿದ್ದಾರೆ.

ಡೈಮಂಡ್ ಲೀಗ್ ಫೈನಲ್ಸ್‌ಗೆ ನೀರಜ್ ಚೋಪ್ರಾ ಅರ್ಹ: 15 ಸೆಂಟಿಮೀಟರ್‌ನಿಂದ ತಪ್ಪಿದ ಚಿನ್ನ



ಜ್ಯೂರಿಚ್: ಜಾವೆಲಿನ್ ಥ್ರೋನಲ್ಲಿ ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸಿದ ನಾಲ್ಕೇ ದಿನಗಳ ಅಂತರದಲ್ಲಿ ಪ್ರತಿಷ್ಠಿತ ಡೈಮಂಡ್ ಲೀಗ್‌ನ ಜ್ಯೂರಿಚ್ ಚರಣದಲ್ಲಿ ಕಣಕ್ಕಿಳಿದಿದ್ದ ಭಾರತದ ಚಿನ್ನದ ಹುಡುಗ ನೀರಜ್ ಚೋಪ್ರಾ 85.71 ಮೀಟರ್ ಭರ್ಜಿ ಎಸೆದು ಬೆಳ್ಳಿ ಪದಕ ಜಯಿಸಿದ್ದಾರೆ. ಕೇವಲ 15 ಸೆಂಟಿಮೀಟರ್ ಅಂತರದಿಂದ ಅವರು ಚಿನ್ನದ ಪದಕದಿಂದ ವಂಚಿತರಾದರು. ಹಾಲಿ ವರ್ಷದ ಡೈಮಂಡ್ ಲೀಗ್ 3ನೇ ಚರಣದಲ್ಲಿ ಪದಕ ಸಾಧನೆ ಮಾಡಿದ ನೀರಜ್ ಚೋಪ್ರಾ, ಸೆಪ್ಟೆಂಬರ್ 17ರಂದು ಅಮೆರಿಕದಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಫೈನಲ್ಸ್‌ಗೆ ಅರ್ಹತೆ ಸಂಪಾದಿಸಿದ್ದಾರೆ. ಇದಕ್ಕೂ ಮುನ್ನ ದೋಹಾ ಹಾಗೂ ಲೌಸನ್ನೆ ಚರಣದಲ್ಲಿ ಅಗ್ರಸ್ಥಾನದೊಂದಿಗೆ ಚಿನ್ನದ ಪದಕ ಜಯಿಸಿದ್ದರು. ಲಾಂಗ್ ಜಂಪ್‌ನಲ್ಲಿ ಭಾರತದ ಮುರಳಿ ಶ್ರೀಶಂಕರ್ ಐದನೇ ಸ್ಥಾನಕ್ಕೆ ತೃಪ್ತಿಪಟ್ಟರು. ಗುರುವಾರ ತಡರಾತ್ರಿ ನಡೆದ ಲೀಗ್‌ನ ನಾಲ್ಕನೇ ಚರಣದಲ್ಲಿ ಮೊದಲ ಮೂರು ಪ್ರಯತ್ನದಲ್ಲಿ 25 ವರ್ಷದ ನೀರಜ್ ಚೋಪ್ರಾ, ಗರಿಷ್ಠ 80.79 ಮೀ. ಭರ್ಜಿ ಎಸೆಯಲಷ್ಟೇ ಶಕ್ತರಾದರು. 2 ಮತ್ತು 3ನೇ ಯತ್ನದಲ್ಲಿ ಅವರು ಫೌಲ್ ಮಾಡಿದರು. ಉಳಿದ ಮೂರು ಎಸೆತಗಳಲ್ಲಿ 4ನೇ ಯತ್ನದಲ್ಲಿ 85.22 ಮೀ. ಎಸೆದರೆ, 5ನೇ ಯತ್ನದಲ್ಲಿ ಮತ್ತೆ ಫೌಲ್ ಮಾಡಿದರು. 6ನೇ ಹಾಗೂ ಕೊನೇ ಪ್ರಯತ್ನದಲ್ಲಿ 85.71 ಮೀ ಭರ್ಜಿ ಎಸೆದು ಎರಡನೇ ಸ್ಥಾನ ಪಡೆದರು. ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ಜೆಕ್ ಗಣರಾಜ್ಯದ ಜೇಕಬ್ ವಡ್ಲೆಚ್ 85.86 ಮೀ ಸಾಧನೆಯೊಂದಿಗೆ ಚಿನ್ನದ ಪದಕ ಗೆದ್ದರೆ, ಜರ್ಮನಿಯ ಜೂಲಿಯನ್ ವೆಬರ್ 85.04 ಮೀ. ಎಸೆತ ದೊಂದಿಗೆ ಮೂರನೇ ಸ್ಥಾನಕ್ಕೆ ತೃಪ್ತಿ ಪಟ್ಟರು. ಗಾಯದ ಸಮಸ್ಯೆಯಿಂದಾಗಿದ ಮೊನಾಕೊ ಲೀಗ್‌ನಿಂದ ಹೊರಗುಳಿದಿದ್ದ ನೀರಜ್ ಚೋಪ್ರಾ ಪಾಲಿಗೆ ಇದು ಮೂರನೇ ಲೀಗ್ ಆಗಿದೆ. ಒಲಿಂಪಿಕ್ಸ್ ಚಾಂಪಿಯನ್ ನೀರಜ್ ಮೂರು ಕೂಟದಿಂದ 23 ಅಂಕ ಕಲೆಹಾಕಿ ಮೂರನೇ ಸ್ಥಾನದೊಂದಿಗೆ ಫೈನಲ್‌ಗೆ ಅರ್ಹತೆ ಗಿಟ್ಟಿಸಿಕೊಂಡರು. ಡೈಮಂಡ್ ಲೀಗ್‌ನ 4 ಚರಣದಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಗ್ರ ಆರು ಜಾವೆಲಿನ್ ಎಸೆತಗಾರರು ಮಾತ್ರ ಫೈನಲ್‌ಗೆ ಅರ್ಹತೆ ಸಂಪಾದಿಸಿದರು. ವಡ್ಲೆಚ್ (29 ಅಂಕ) ಹಾಗೂ ಜೂಲಿಯನ್ ವೆಬರ್ (25) ಕ್ರಮವಾಗಿ ಮೊದಲೆರಡು ಸ್ಥಾನ ಪಡೆದುಕೊಂಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.8.2023 ಶನಿವಾರ, ಮಳೆ ನಕ್ಷತ್ರ: ಪುಬ್ಬ 31.08.2023 ರಿಂದ 13.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಉತ್ತರಭಾದ್ರ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಡಿ. ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆ

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಕ್ಲಾಸಿಕ್, ಸಿಕೆಸಿ ಅಲ್ಯೂಮ್ನಿ ಅಸೋಸಿಯೇಷನ್ :** ಉಚಿತ ಕಣ್ಣಿನ ತಪಾಸಣಾ ಶಿಬಿರ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಲಯನ್ ಎನ್.ಸುಬ್ರಮಣ್ಯ, ಸ್ಥಳ: ಕ್ರೈಸ್ಟ್ ದ ಕಿಂಗ್ ಕಾನ್ವೆಂಟ್, ಲಕ್ಷ್ಮೀಪುರಂ, ಬೆಳಗ್ಗೆ 9.30 ರಿಂದ.

■ **ಸರ್ಕಾರಿ ನೇಚರ್ ಕ್ಯೂರ್ ಮತ್ತು ಯೋಗಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ :** ಪದವೀಧರರ ದಿನಾಚರಣೆ, ಉದ್ಘಾಟನೆ : ಬೆಂಗಳೂರು ಎಸ್‌ವಿವೈಎಎಸ್‌ಎ ಕುಲಪತಿ ಡಾ. ಬಿ.ಆರ್.ಆರ್. ಕೃಷ್ಣ, ಮುಖ್ಯ ಅತಿಥಿಗಳು : ಡಾ. ವೆಂಕಟರಮಣ ಹೆಗ್ಡೆ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ. ಜಿ. ಗಜಾನನ ಹೆಗ್ಡೆ, ಸ್ಥಳ: ಮೈಸೂರು ಮೆಡಿಕಲ್ ಕಾಲೇಜು ಅಲ್ಯೂಮ್ನಿ ಅಸೋಸಿಯೇಷನ್ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಪೋಡಾರ್ ಇಂಟರ್‌ನ್ಯಾಷನಲ್ ಸ್ಕೂಲ್, ಹೆಬ್ಬಾಳು :** ಬಿಜ್ ಕಿಡ್ಸ್ ಬಜಾರ್, ಉದ್ಘಾಟನೆ : ಉದ್ಯಮಿ ಡಾ. ಶ್ವೇತಾ ಮಾಡಪ್ಪಾಡಿ, ಸ್ಥಳ: ಶಾಲೆ ಆವರಣ, ಬೆಳಗ್ಗೆ 9.30 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಥೈರಾಯಿಡ್ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಜೀವನದಿ ಕಾವೇರಿ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ : ಡಯಟ್ ಪ್ರಾಚಾರ್ಯ ಪುರುಷೋತ್ತಮ್, ಮುಖ್ಯ ಅತಿಥಿಗಳು : ಸಾಹಿತಿ ಬನ್ನೂರು ಕೆ. ರಾಜು, ಪ್ರಶಸ್ತಿ ಪ್ರದಾನ : ಕಲಾವಿದೆ ಡಾ. ಜಮುನಾ ರಾಣಿ ಮಿರ್ಲೆ, ಗೀತಾ ಗಾಯನ : ಗಾಯಕಿ ಶ್ರೀಮತಿ ಪ್ರತಿಮಾ ಅವರಿಂದ, ಸ್ಥಳ: ಅಕ್ಕನ ಬಳಗ ಸಭಾಂಗಣ, ತ್ಯಾಗರಾಜ ರಸ್ತೆ, ಅಗ್ರಹಾರ, ಮಧ್ಯಾಹ್ನ 3.30ಕ್ಕೆ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು :** ಶತೋತ್ತರ–ಸುವರ್ಣ–ರಜತ ಮಹೋತ್ಸವ, ಉದ್ಘಾಟನೆ : ಚಿಂತಕರಾದ ಡಾ. ವೀಣಾ ಬನ್ನಂಜೆ, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪ್ರೊ. ವಿ.ಕೆ. ಗೋಪಾಲಾಚಾರ್, ಉಪಸ್ಥಿತರು : ಉಪಾಧ್ಯಕ್ಷ ಸಿ.ಆರ್. ನಾಗರಾಜ್, ಕಾರ್ಯದರ್ಶಿ ಪ್ರೊ. ಎಂ.ಎಸ್.ಕೆ. ನರಹರಿ ಬಾಬು, ಸಹ ಕಾರ್ಯದರ್ಶಿ ಪ್ರೊ. ಕೆ.ಎಸ್. ಹಿರಿಯಣ್ಣ, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಮಹಾಜನ ಕಾನೂನು ಕಾಲೇಜು :** ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಡಾ. ಶ್ರುತಿಗೌಡ, ಅಧ್ಯಕ್ಷತೆ : ಆಡಳಿತಾಧಿಕಾರಿ ಪ್ರೊ. ಪಿ. ಸರೋಜಮ್ಮ, ಸ್ಥಳ: ಸುಬ್ಬಲಕ್ಷ್ಮಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ :** ಶ್ರೀ ವಾಸುದೇವ ಮಹಾರಾಜರ 16ನೇ ಆರಾಧನಾ ಮಹೋತ್ಸವ, ವಿವಿಧ ಕ್ಷೇತ್ರಗಳ ಸಾಧಕರಿಗೆ ಶ್ರೀ ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸಂಸ್ಕೃತಿ ಚಿಂತಕ ಡಾ.ಗುರುರಾಜ ಪೋಶೆಟ್ಟಿಹಳ್ಳಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 4.30ಕ್ಕೆ.

■ **ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿ ಮಠ, ನಾಡಪ್ರಭು ಕೆಂಪೇಗೌಡರ ಯುವ ಬಳಗ :** ಶ್ರೀ ರಾಘವೇಂದ್ರ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಕಿಡಗಣ್ಣಮ್ಮ ಬಡಾವಣೆ, ಕುಂಬಾರಕೊಪ್ಪಲು.

■ **ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ, ಸೋಮನಾಥಪುರ :** ಶ್ರೀ ಗುರುರಾಘವೇಂದ್ರ ಸ್ವಾಮಿಗಳವರ 352ನೇ ಆರಾಧನಾ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀ ಗುರುವಾಯು ಹವನ, 11.30ಕ್ಕೆ ಶ್ರೀ ಸತ್ಯನಾರಾಯಣ ಪೂಜೆ, ಸಂಜೆ 6 ರಿಂದ ವಿದುಷಿ ಎಂ.ಎಸ್. ಕೀರ್ತನಾ ಮತ್ತು ತಂಡದವರಿಂದ ದೇವರ ನಾಮಗಳು, ಸಂಜೆ 7 ರಿಂದ ಪಂಡಿತ್ ಕುಮಾರ್ ಮರಡೂರ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಶ್ರೀರಾಮ ಭಟ್–ಹಾರ್ಮೋನಿಯಂ, ಪಂಡಿತ್ ರಾಜೇಂದ್ರ ನಾಕೋಡ–ತಬಲಾ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನ, ಸೋಮನಾಥನಗರ.

■ **ಸಂಸ್ಕೃತ ಭಾರತೀ:** ಸಂಸ್ಕೃತ ಸಪ್ತಾಹ, ವೇದಂ ಅರವಿಂದ ಪ್ರಸಾದ ಅವರಿಂದ ಆಧುನಿಕ ಸಮಸ್ಯೆಗಳಿಗೆ ಸಂಸ್ಕೃತದ ಸಮಾಧಾನ ಕುರಿತು ಪ್ರವಚನ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ, ಲಕ್ಷ್ಮೀಪುರಂ, ಸಂಜೆ 5.30 ರಿಂದ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾ ವಿದ್ಯಾಪೀಠ, ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಪ್ರವಚನ, ವಾಚನ–ಕಾರ್ಯಪಾಲಕ ಅಭಿಯಂತರರಾದ ವಿದ್ವಾನ್ ಕೃ.ರಾಮಚಂದ್ರ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ. ಸಾಮೂಹಿಕ ಪ್ರಾರ್ಥನೆ: ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಕೆ. ವೆಂಕಟರಾಜು ಚಾಮರಾಜನಗರ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ –ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು, 8.30 ವಿಶಿಷ್ಟ ವ್ಯಕ್ತಿ –ವಿಶೇಷ ಯತ್ನ, ಬಾನುಲಿ ಸರಣಿ– ಅಕ್ಷಯ ಆಹಾರ ಜೋಳಿಗೆಯ ಹೆಚ್.ಆರ್. ರಾಜೇಂದ್ರ ಅವರೊಂದಿಗೆ ಸಂವಾದ ಇವರೊಂದಿಗೆ ಭಾಗವಹಿಸುವವರು –ದಿವಾಕರ ಹೆಗಡೆ, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00ವಿ. ವಂಶಿಧರ್–ವೇಣುವಾದನ, 11.00 "ಸ್ವರಾಜ್"– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ

ಮಧ್ಯಾಹ್ನ: 12.30 ದೇವರನಾಮ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 12.45 ಜನಪದಗೀತೆ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ– ಮೈಸೂರಿನ ಬೋಗಾದಿಯಲ್ಲಿರುವ ಅಮೃತಾ ವಿದ್ಯಾಲಯದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.30 ನೆನಪಿನಂಗಳ–ಖ್ಯಾತ ಕಾದಂಬರಿಗಾರ್ತಿ ದೇವಕಿ ಮೂರ್ತಿ ಅವರೊಂದಿಗೆ ಜಿ. ರಾಜಲಕ್ಷ್ಮಿ ಶ್ರೀಧರ್ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ–ತೋರಣ ಹೂರಣ, ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಡಾ. ಮೈಸೂರು ಉಮೇಶ್, ಆರ್. ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ –ಬಾನುಲಿ ಸರಣಿ, 9.30 ಸ್ಥಳೀಯ ಪತ್ರಿಕೆಗಳ ಅಸ್ತಿತ್ವ –ಅಗತ್ಯ ಕುರಿತು ಪ್ರತಿನಿಧೆ ಪತ್ರಿಕೆಯ ಸಂಪಾದಕ ಮಹೇಂದ್ರ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪದ್ಮಾವತಿ ಸಾರನಾಥನ್ – ಹಾಡುಗಾರಿಕೆ

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ (ಶ್ರೀ ರಾಘವೇಂದ್ರಸ್ವಾಮಿ ಮಠ) :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5.30ಕ್ಕೆ ಸುಪ್ರಭಾತ, 7 ರಿಂದ ಮಹಾ ಪಂಚಾಮೃತ ಅಭಿಷೇಕ, ಬೆಳಗ್ಗೆ 8ರಿಂದ ಕನಕಾಭಿಷೇಕ, ಸರ್ವಸೇವೆ, ಮ. 12ಕ್ಕೆ ಮಹಾಮಂಗಳಾರತಿ, ಸಂಜೆ 6.30 ರಿಂದ ವಿದುಷಿ ರಕ್ಷಿತಾ ರಮೇಶ್ ಅವರಿಂದ ವೀಣೆ, ವಿದುಷಿ ಸಿ.ವಿ. ಶೃತಿ–ವಯೋಲಿನ್, ವಿದ್ವಾನ್ ಕೇಶವಚಂದ್ರ–ಕೊಳಲು, ವಿದ್ವಾನ್ ಅನೂರ್ ವಿನೋದ್ ಶ್ಯಾಮ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ.

■ **ನಂಜನಗೂಡು ಶ್ರೀರಾಘವೇಂದ್ರಸ್ವಾಮಿಗಳವರ ಮಠ :** ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವ, ಬೆಳಗ್ಗೆ 7ಕ್ಕೆ ಉತ್ಸವರಾಯರಿಗೆ ಪಾದಪೂಜೆ, ಪಂಚಾಮೃತ, ಬೆಳಗ್ಗೆ 9ಕ್ಕೆ ರಾಜಬೀದಿಗಳಲ್ಲಿ ಮಹಾರಥೋತ್ಸವ, ಹಸ್ತೋದಕ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5 ರಿಂದ ಶ್ರೀಮತಿ ರೇಖಾ ಭಟ್ ಅವರಿಂದ ದಾಸವಾಣಿ, ಸಂಜೆ 8 ರಿಂದ ಶ್ರೀಮತಿ ಪ್ರತೀಕ್ಷಾ ಜಿ. ರಾವ್ ಅವರಿಂದ ದಾಸವಾಣಿ, ಸ್ಥಳ: ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಾರಾಯಣಶಾಸ್ತ್ರಿ ರಸ್ತೆ.

■ **ಶ್ರೀ ಮಹಾ ಗಣಪತಿ ನವಗ್ರಹ ದೇವಸ್ಥಾನದ ಅಭಿವೃದ್ಧಿ ಸಮಿತಿ :** 33ನೇ ವಾರ್ಷಿಕೋತ್ಸವ, ಅರಳೀಕಟ್ಟೆ ಗಣಪತಿ ಸನ್ನಿಧಿಯಲ್ಲಿ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ಹುಡ್ಕೋ 1ನೇ ಹಂತ, ಬನ್ನಿಮಂಟಪ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** ಶ್ರಾವಣ ಮಾಸದ ಪ್ರಯುಕ್ತ ಶನಿಶಾಂತಿ, ಆದಿತ್ಯಾದಿ, ನವಗ್ರಹ ಪೂರ್ವಕ, ಗುರುಶಾಂತಿ ಹೋಮ, ಮಹಾಸಂಕಲ್ಪ, ಪುಣ್ಯಾಹಃ ವಿಶ್ವಕ್ಸೇನಾರಾಧನೆ, ಗಣಪತಿ ಪೂಜೆ, ಶನಿಶಾಂತಿ, ನವಗ್ರಹ ಹೋಮ, ಗುರುಶಾಂತಿ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಇರ್ವಿನ್ ರಸ್ತೆ.

■ **ರಂಗವಲ್ಲಿ :** ಕೆ.ವಿ.ಅಕ್ಷರ ರಚಿಸಿರುವ 'ಸಂಸಾರದಲ್ಲಿ ಸನಿದಪ' (ಮೂಲ: ನೊಬೆಲ್ ಪ್ರಶಸ್ತಿ ಪುರಸ್ಕೃತ ನಾಟಕಕಾರ ದಾರಿಯೋ ಫೋ ರಚಿಸಿರುವ 'ದಿ ವರ್ಚುವಸ್ ಬರ್ಗ್‌ಲರ್) ನಾಟಕ, ವಸ್ತ್ರ ವಿನ್ಯಾಸ : ಹರಿಪ್ರಸಾದ್, ಬೆಳಕಿನ ವಿನ್ಯಾಸ ಕೃಷ್ಣಕುಮಾರ್ ನಾರ್ಣಕಜೆ, ಪ್ರಸಾದನ : ಸರಿತಾ ರಾಜೇಶ್, ರಾಘವೇಂದ್ರ ಬೂದನೂರ್, ಸಂಗೀತ ನಿರ್ವಹಣೆ – ಮಂಜು ಮಂಗಲ, ನಿರ್ದೇಶನ – ರವಿ ಪ್ರಸಾದ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ, ಸಂಜೆ 7ಕ್ಕೆ.

■ **ಶ್ರೀ ಕೃಷ್ಣಧಾಮ :** ಉಡುಪಿ ಪೇಜಾವರ ಮಠದ ಶ್ರೀ ಶ್ರೀ ವಿಶ್ವ ಪ್ರಸನ್ನ ತೀರ್ಥ ಪಾದಂಗಳರವರ 36ನೇ ಚಾತುರ್ಮಾಸ್ಯದ ಪ್ರಯುಕ್ತ ಅನನ್ಯ ಭಟ್ ಮತ್ತು ಭೂಮಿಕ ಕೌಂಡಿನ್ಯ ಅವರಿಂದ ಭಕ್ತಿಭಾವಗೀತೆ ಕಾರ್ಯಕ್ರಮ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 7ಕ್ಕೆ.

ಸಜ್ಜೆಹುಂಡಿಯಲ್ಲಿಂದು, ಮೈಸೂರು ತಾಲೂಕು

■ **ಶ್ರೀ ಶನೇಶ್ವರಸ್ವಾಮಿ ಭಕ್ತ ಮಂಡಲಿ:** 14ನೇ ವರ್ಷದ ಶ್ರೀ ಶನೇಶ್ವರಸ್ವಾಮಿ ಶ್ರಾವಣ ಮಾಸದ ಆರಾಧನಾ ಮಹೋತ್ಸವ, ಬೆಳಗ್ಗೆ 4.30ಕ್ಕೆ ಶ್ರೀ ಸ್ವಾಮಿಗೆ ಪಂಚಾಮೃತಾಭಿಷೇಕ, ತಿಲಅಭಿಷೇಕ, ಫಲಪಂಚಾಮೃತಾಭಿಷೇಕ, ನವಗ್ರಹ ಸಹಿತ ಶ್ರೀ ಶನೇಶ್ವರ, ಪರಿವಾರ ದೇವತೆಗಳ ಹೋಮ ಹವನ, ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ರಾತ್ರಿ 9ಕ್ಕೆ ಬದನವಾಳು ಬಿ. ಚಂದ್ರಶೇಖರ ಶಾಸ್ತ್ರಿ ಅವರಿಂದ ಶನಿಪ್ರಭಾವ ಅಥವಾ ರಾಜಾವಿಕ್ರಮ ಹರಿಕಥೆ.

ದಸರಾ ಮಹೋತ್ಸವ ನಮ್ಮ ಸಂಸ್ಕೃತಿ ಬಿಂಬಿಸುವ ಆಚರಣೆ





ಹುಣಸೂರು, ಸೆ.1(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಕೇವಲ ಕುಣಿತಕ್ಕೆ, ಸಂತೋಷಕ್ಕೆ ಸೀಮಿತವಾಗಿರದೆ, ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಆಚರಣೆಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಹುಣಸೂರು ತಾಲೂಕಿನ ನಾಗರಹೊಳೆ ಅಭಯಾರಣ್ಯದ ವೀರನಹೊಸಳ್ಳಿ ಗೇಟ್ ಬಳಿ ಶುಕ್ರವಾರ ಗಜಪಯಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಾಡಿನ ಸಂಸ್ಕೃತಿಯನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಆಚರಿಸುತ್ತಿರುವುದರಿಂದಲೇ ದಸರಾ ವಿಶ್ವ ವಿಖ್ಯಾತಿ ಪಡೆದಿದೆ. ಆನೆ ಮೇಲೆ 750 ಕೆ.ಜಿ.ತೂಕದ ಚಿನ್ನದ ಅಂಬಾರಿಯನ್ನು ಕೂರಿಸಿ ಮೆರವಣಿಗೆ ಮಾಡುವ ಮೂಲಕ ನಮ್ಮ ಸಂಸ್ಕೃತಿಯನ್ನು ಬಿಂಬಿಸಲಾಗುತ್ತಿದೆ. ರಾಜಪ್ರಭುತ್ವದಲ್ಲಿ ಅಂಬಾರಿ ಮೇಲೆ ಮಹಾರಾಜರು ಸಾಗುತ್ತಿದ್ದರು. ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೊಂಡ ಬಳಿಕ ಅಂಬಾರಿ ಮೇಲೆ ನಾಡದೇವಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯನ್ನು ಕೂರಿಸಿ ಮೆರವಣಿಗೆ ಮಾಡಲಾಗುತ್ತಿದೆ. ದಸರಾ ಕಾರ್ಯಕ್ರಮಗಳ ಮೂಲಕ ಇಡೀ ದೇಶದ ಎಲ್ಲ ಜನರೂ ಒಂದೇ ಎಂಬ ಸಂದೇಶ ಸಾರಲಾಗುತ್ತಿದೆ ಎಂದು ತಿಳಿಸಿದರು.

ಜನರು ತಾವು ನಂಬಿದ ಧರ್ಮದ ಆಚಾರ–ವಿಚಾರದ ಜೊತೆಗೆ ಬದುಕುವುದಕ್ಕೆ ಅವಕಾಶ ನೀಡಿರುವ ಸಂವಿಧಾನ ಆಶಯಕ್ಕೆ ಅನುಗುಣವಾಗಿ ನಾಡಿನ ಜನರು ನಾಡದೇವತೆ ಚಾಮುಂಡೇಶ್ವರಿಯನ್ನು ಚಿನ್ನದ ಅಂಬಾರಿಯಲ್ಲಿಟ್ಟು ಆ ಮುಖೇನ ನಾವೆಲ್ಲರೂ ಭಾರತೀಯರು, ಕನ್ನಡಿಗರು ಎಂಬುದನ್ನು ಎಲ್ಲಾ ರಾಜ್ಯ, ದೇಶ, ವಿದೇಶದಿಂದ ಆಗಮಿಸುವ ಪ್ರವಾಸಿಗರಿಗೆ ಸಾರಬೇಕು ಎಂದು ಹೇಳಿದರು.

ಬಹುಮುಖ ಪ್ರತಿಭೆಯ ತವರೂರಾದ ಮೈಸೂರಲ್ಲಿ ಎಲ್ಲರೂ ಸೇರಿ ಇಲ್ಲಿನ ಸಾಂಸ್ಕೃತಿಕ ಬದುಕನ್ನು, ಜನ ಜೀವನವನ್ನು, ಚಾರಿತ್ರಿಕ ಹಿನ್ನೆಲೆಯ ಜೊತೆಗೆ ಕಲೆ, ಕ್ರೀಡೆ, ಸಂಗೀತ, ಸಾಹಿತ್ಯ, ಶ್ರೇಷ್ಠತೆ, ಪ್ರೌಢಿಮೆಯನ್ನು ದೇಶದ ಉದ್ದಗಲಕ್ಕೆ ಮತ್ತು ಪ್ರಪಂಚದಾದ್ಯಂತ ಪ್ರದರ್ಶನ ಮಾಡಲು ಇರುವಂತಹ ದೊಡ್ಡ ಅವಕಾಶ ನಾಡಹಬ್ಬ ದಸರಾವಾಗಿದೆ ಎಂದು ತಿಳಿಸಿದರು.

ನಾವೆಲ್ಲರೂ ಕಾಡನ್ನು ರಕ್ಷಣೆ ಮಾಡಿದರೆ, ಕಾಡು ನಮ್ಮನ್ನು ರಕ್ಷಣೆ ಮಾಡುತ್ತದೆ. ಕಾಡು ನಾಶವಾದರೆ ಮನುಷ್ಯ ನಾಶವಾಗುತ್ತಾನೆ. ವನ್ಯಸಂಪತ್ತು ದೇಶದ ಸಂಪತ್ತು. ನಿಯಮಾನುಸಾರ ಶೇ.33ರಷ್ಟು ಅರಣ್ಯ ಪ್ರದೇಶವಿರಬೇಕು. ಆದರೆ ನಮ್ಮಲ್ಲಿ ಶೇ.21 ರಷ್ಟು ಮಾತ್ರ ಅರಣ್ಯವಿದೆ. ಪ್ರಕೃತಿಯ ಸಂಪತ್ತಿನ ಸಮತೋಲನ ಕಾಪಾಡಲು ಕಾಡಿನ ರಕ್ಷಣೆ, ಅಭಿವೃದ್ಧಿ, ವಿಸ್ತರಣೆ ನಮ್ಮೆಲ್ಲರ ಜವಾಬ್ದಾರಿ ಮತ್ತು ಹೊಣೆಗಾರಿಕೆ. ಇದೆಲ್ಲವನ್ನೂ ಗಮನದಲ್ಲಿಟ್ಟು ದಸರಾ ಉತ್ಸವದಲ್ಲಿ ದೇಶವನ್ನು ಸಮೃದ್ಧ ನಾಡನ್ನಾಗಿ ಕಟ್ಟುವ ಶಪಥ ಮಾಡಬೇಕಾಗಿದೆ ಎಂದರು.

ಪ್ರಕೃತಿ ರಕ್ಷಣೆಗೆ ಪಣ ತೊಡಬೇಕು: ಗಜಪಯಣದ ಸಭಾ ಕಾರ್ಯಕ್ರಮದಲ್ಲಿ ಮೊದಲ ಹಾಗೂ ಎರಡನೇ ತಂಡದ ಆನೆಗಳ ಪಟ್ಟಿ ಮತ್ತು ಕಿರು ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಪ್ರಕೃತಿ ಮತ್ತು ಪರಿಸರವನ್ನು ಉಳಿಸಬೇಕು. ಇಲ್ಲದಿದ್ದರೆ ತಾಪಮಾನ ಹೆಚ್ಚಳವಾಗಿ ಹವಾಮಾನ ವೈಪರೀತ್ಯ ಉಂಟಾಗುತ್ತದೆ. ಕೊರೊನಾ ಸಂದರ್ಭದಲ್ಲಿ ಆಮ್ಲಜನಕ ಸಿಗದೆ ಹಲವರು ಸತ್ತಿದ್ದಾರೆ. ಹೆಚ್ಚು–ಹೆಚ್ಚು ಮರ, ಗಿಡಗಳನ್ನು ಬೆಳೆಸಿದರೆ ಪರಿಸರ ಉಳಿಯುವ ಜತೆಗೆ ಆಮ್ಲಜನಕವೂ ಸಿಗುತ್ತದೆ. ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದೆ. ಪ್ರಾಣಿ ಮತ್ತು ಮಾನವ ಸಂಘರ್ಷ ನಡೆಯುತ್ತಿದ್ದು, ಇದನ್ನು ತಡೆಯಬೇಕು. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ ಕಾರ್ಯ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಮೇಯರ್ ಶಿವಕುಮಾರ್ ಮಾತನಾಡಿ, ಮೈಸೂರು ಅರಸರು ದಸರಾ ಆಚರಣೆಯನ್ನು ಜಾರಿಗೆ ತಂದರು. 100 ವರ್ಷಗಳ ಹಿಂದೆಯೇ ಮೈಸೂರು ನಗರ ವಿದ್ಯುತ್ ವ್ಯವಸ್ಥೆ ಪಡೆದಿತ್ತು. ರಾಜರು ಮೈಸೂರನ್ನು ಉತ್ತಮ ನಗರವಾಗಿ ನಿರ್ಮಾಣ ಮಾಡಿದರು. ಉತ್ತಮ ರಸ್ತೆ ನಿರ್ಮಾಣ ಮಾಡಿದರು. ಮೈಸೂರು ಬೆಳವಣಿಗೆಗೆ ಮೈಸೂರು ರಾಜರ ಕೊಡುಗೆಯನ್ನು ನಾವೆಲ್ಲರೂ ನೆನೆಯಬೇಕು ಎಂದು ತಿಳಿಸಿದರು.

ಶಾಸಕ ಜಿ.ಡಿ.ಹರೀಶ್ ಗೌಡ ಮಾತನಾಡಿ, ಸಿದ್ದರಾಮಯ್ಯ ಅವರು ಈ ಬಾರಿಯ ದಸರಾವನ್ನು ಅದ್ದೂರಿಯಾಗಿ ಆಚರಣೆ ಮಾಡಲು ತೀರ್ಮಾನಿಸಿದ್ದಾರೆ. ದಸರಾ ಆಚರಣೆಯ ಪ್ರಮುಖ ಆಕರ್ಷಣೆ ಜಂಬೂಸವಾರಿ. ಇದನ್ನು ನೋಡಲು ವಿಶ್ವದ ವಿವಿಧ ಭಾಗಗಳಿಂದ ಜನರು ಆಗಮಿಸುತ್ತಾರೆ ಎಂದರು.

ಹುಣಸೂರು ತಾಲೂಕು ಕಾಡಿನ ಗಡಿಯನ್ನು ಹೆಚ್ಚಾಗಿ ಹೊಂದಿದೆ. ಇಲ್ಲಿ ಪ್ರಾಣಿ ಹಾಗೂ ಮಾನವ ಸಂಘರ್ಷ ನಡೆಯುತ್ತಿದೆ. ಇದನ್ನು ತಡೆಯಲು ರೈಲ್ವೆ ಬ್ಯಾರಿಕೇಡ್ ಅಳವಡಿಸಬೇಕು ಎಂದು ಅರಣ್ಯ ಸಚಿವರಲ್ಲಿ ಮನವಿ ಮಾಡಿದಾಗ 5 ಕೋಟಿ ರೂ. ಅನುದಾನ ನೀಡಲಾಗುವುದು ಎಂದು ತಿಳಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಫಲ–ತಾಂಬೂಲ ನೀಡಿ ಆಹ್ವಾನ: ದಸರಾ ಮಹೋತ್ಸವದಲ್ಲಿ ಭಾಗಿಯಾಗಿರುವ ಮೊದಲ ತಂಡದ 9 ಆನೆಗಳ ಮಾವುತರು, ಕಾವಾಡಿಗಳಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಹಾಗೂ ಶಾಸಕ ಜಿ.ಡಿ.ಹರೀಶ್ ಗೌಡ, ಮೇಯರ್ ಶಿವಕುಮಾರ್ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಫಲ ತಾಂಬೂಲ ನೀಡಿ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ದೊಡ್ಡಹೆಜ್ಜೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ಅಂಬಿಕಾ ಲೋಕೇಶ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಬಾನೋತ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಜೀವ್ ರಂಜನ್, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶಾಶ್ವತಿ ಮಿಶ್ರಾ, ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಡಿಸಿಎಫ್‌ಗಳಾದ ಸೌರಭ್ ಕುಮಾರ್, ಬಸವರಾಜು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಗಣ್ಯರ ಗೈರು: ಗಜಪಯಣ ಕಾರ್ಯಕ್ರಮಕ್ಕೆ ಬಹುತೇಕ ಜನ ಪ್ರತಿನಿಧಿಗಳು ಗೈರಾಗಿದ್ದರು. ಆಹ್ವಾನ ಪತ್ರಿಕೆಯಲ್ಲಿ ಹೆಸರಿದ್ದ ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಸುಮಲತಾ ಅಂಬರೀಷ್, ಸಚಿವರಾದ ಶಿವರಾಜ್ ಸಂಗಪ್ಪ ತಂಗಡಗಿ, ಕೆ.ವೆಂಕಟೇಶ್, ಶಾಸಕರಾದ ಜಿ.ಟಿ.ದೇವೇಗೌಡ, ಡಿ.ರವಿಶಂಕರ್, ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ ಹಾಗೂ ವಿಧಾನ ಪರಿಷತ್ ಸದಸ್ಯರು ಗೈರಾಗಿದ್ದರು.

ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ

ಸೆ.5ಕ್ಕೆ ಅರಮನೆ ಅಂಗಳಕ್ಕೆ ಗಜಪಡೆ ಪ್ರವೇಶ

ಸೆ.5ರಂದು ಮಧ್ಯಾಹ್ನ 12.01 ರಿಂದ 12.51ರವರೆಗೆ ಸಲ್ಲುವ ಶುಭ ಅಭಿಜಿನ್ ಲಗ್ನದಲ್ಲಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಮೊದಲ ತಂಡದ 9 ಆನೆಗಳು ಜಯಮಾರ್ತಾಂಡ ದ್ವಾರದ ಮೂಲಕ ಮೈಸೂರು ಅರಮನೆಯನ್ನು ಪ್ರವೇಶಿ ಸಲಿವೆ. ಇದಕ್ಕೂ ಮುನ್ನ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಎಲ್ಲಾ ಆನೆಗಳಿಗೂ ಅರಣ್ಯ ಇಲಾಖೆಯ ವತಿಯಿಂದ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಬೀಳ್ಕೊಡಲಾಗುತ್ತದೆ. ಅಲ್ಲಿಂದ ಬಲ್ಲಾಳ್ ವೃತ್ತ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ ಗನ್‌ಹೌಸ್ ಮೂಲಕ ಜಯಮಾರ್ತಾಂಡ ದ್ವಾರದವರೆಗೆ ಮೆರವಣಿಗೆಯಲ್ಲಿ ಆನೆಗಳನ್ನು ಬಿಗಿ ಪೊಲೀಸ್ ಬಂದೋ ಬಸ್ತ್‌ನಲ್ಲಿ ಕರೆತರಲು ನಿರ್ಧರಿಸಲಾಗಿದೆ.

ಮೈಸೂರು ಅರಣ್ಯ ಭವನದ ಅಂಗಳದಲ್ಲಿ ಗಜಪಡೆ




ಅಂಬಾರಿ ಆನೆ 'ಅಭಿಮನ್ಯು'ವನ್ನು ಹತ್ತಿರದಿಂದ ಕಣ್ತುಂಬಿಕೊಂಡ ಜನ



ನೀರಾಟದಲ್ಲಿ ಮೈಮರೆತಿರುವ 'ಧನಂಜಯ'



ಮೈಸೂರಿನ ಅರಣ್ಯ ಭವನ ಆವರಣದಲ್ಲಿ 'ಮಹೇಂದ್ರ'ನಿಗೆ ಮಜ್ಜನ.



ದಸರಾಗೆ ಮೊದಲ ಬಾರಿ ಆಗಮಿಸಿರುವ 'ಕಂಜನ್' ಜೊತೆ ಮಾವುತ ವಿಜಯ ಹಾಗೂ ಕಾವಾಡಿ ಮಣಿಕಂಠ

ಪಾರ್ಶ್ವ  ವಾಯು

ಜೀವಕ್ಕೆ ಅತೀ ಅಪಾಯ; ಬೇಗ ಚಿಕಿತ್ಸೆ ಇದಕ್ಕೆ ಉಪಾಯ



ಡಾ.ಸುಶ್ರುತ ಗೌಡ
ಅಮೆರಿಕನ್ ಬೋರ್ಡ್–ಪ್ರಮಾಣೀಕೃತ ನ್ಯೂರಾಲಜಿಸ್ಟ್
ವ್ಯವಸ್ಥಾಪಕ ನಿರ್ದೇಶಕರು
ನ್ಯೂರೋರ್ಥೋನ್ ಮತ್ತು ಗೋಪಾಲಗೌಡ
ಶಾಂತವೇರಿ ಸ್ಮಾರಕ ಆಸ್ಪತ್ರೆ, ಮೈಸೂರು

ಇತ್ತೀಚೆಗೆ ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ ಅವರು ಲಘು ಪಾರ್ಶ್ವವಾಯುಗೆ ತುತ್ತಾಗಿ, ಅದೃಷ್ಟವಶಾತ್ ಅವರು ನಾಲ್ಕೈದು ಗಂಟೆಯೊಳಗೆ ಆಸ್ಪತ್ರೆಗೆ ದಾಖಲಾಗಿ ಜೀವರಕ್ಷಕ ಔಷಧಿಯನ್ನು ಪಡೆದರು. ಅವರು, ಈ ರಕ್ತ ಹೆಪ್ಪುಗಟ್ಟುವಿಕೆ ನಿರೋಧಕ ಔಷಧಿಯನ್ನು ತಕ್ಷಣವೇ ಪಡೆದು ಮುಂದಾಗಬಹುದಾಗಿದ್ದ ತೋಳು ಮತ್ತು ಕಾಲುಗಳ ಊನತೆಯಿಂದ ಪಾರಾದರು.

ಭಾರತದಲ್ಲಿ ಸ್ಟ್ರೋಕ್ ಅಥವಾ ಪಾರ್ಶ್ವವಾಯುವಿಗೆ ಒಳಗಾಗುವ ಜನರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಜಾಸ್ತಿಯಾಗುತ್ತಿದೆ. ನಮ್ಮ ದೇಶದಲ್ಲಿ ವರ್ಷಕ್ಕೆ ಸುಮಾರು 17 ಲಕ್ಷ ಮಂದಿ ಪಾರ್ಶ್ವವಾಯುವಿಗೆ ತುತ್ತಾಗುತ್ತಿದ್ದಾರೆ. ಕಳೆದ 30 ವರ್ಷಗಳಲ್ಲಿ ಭಾರತದಂತಹ ದೇಶದಲ್ಲಿ ಪಾರ್ಶ್ವವಾಯು ಸಂಭವವು ಶೇ.100 ಕ್ಕಿಂತ ಜಾಸ್ತಿಯಾಗಿರುವುದು ಆಘಾತ ತರುವಂತಹ ಸಂಗತಿ. ಹಾಗಾಗಿ ಭಾರತದಲ್ಲಿ ಅಂಗವೈಕಲ್ಯಕ್ಕೆ ಪಾರ್ಶ್ವವಾಯು ಆರನೇ ಪ್ರಮುಖ ಕಾರಣವಾಗಿದೆ.

ಪಾರ್ಶ್ವವಾಯು ಮತ್ತು ಹೃದಯಾಘಾತಕ್ಕೆ ನಾಲ್ಕು ಪ್ರಮುಖ ಕಾರಣಗಳಿವೆ

i) ಮಧುಮೇಹ ii) ಅಧಿಕ ರಕ್ತದೊತ್ತಡ
iii) ಅಧಿಕ ಕೊಲೆಸ್ಟ್ರಾಲ್ iv) ಧೂಮಪಾನ

ಮಧುಮೇಹ: ಹೃದಯಾಘಾತ ಮತ್ತು ಪಾರ್ಶ್ವವಾಯುವಿನ ಅಪಾಯವನ್ನು ಎರಡರಿಂದ ಮೂರು ಪಟ್ಟು ಹೆಚ್ಚಿಸುತ್ತದೆ. ಭಾರತದಲ್ಲಿ ಸುಮಾರು 7.7 ಕೋಟಿ ಜನರು ಮಧುಮೇಹದಿಂದ ಬಳಲುತ್ತಿದ್ದು, ಇನ್ನೂ 2.5 ಕೋಟಿ ಜನರು ಈ ಬಾಧೆಯ ಸಂಭವನೀಯ ಗುಂಪಿನಲ್ಲಿದ್ದಾರೆ. ಮೂತ್ರಪಿಂಡ, ಕಣ್ಣು ಮತ್ತು ನರಗಳ ಹಾನಿ ಮಧುಮೇಹದಲ್ಲಿ ಸರ್ವೇ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಗಂಭೀರ ಪರಿಣಾಮಗಳು.

ಅಧಿಕ ರಕ್ತದೊತ್ತಡ

ಅಧಿಕ ರಕ್ತದೊತ್ತಡ (ಹೈ ಬಿಪಿ– ಇದೊಂದು ರೀತಿ ಸೈಲೆಂಟ್ ಕಿಲ್ಲರ್), ಪ್ರಪಂಚದಾದ್ಯಂತ ಸುಮಾರು 128 ಕೋಟಿ ಜನ ಇದರಿಂದ ಬಾಧಿತರಾಗಿದ್ದಾರೆ. ಈ ರೋಗಿಗಳಲ್ಲಿ ಹೆಚ್ಚಿನವರು ಭಾರತದಂತಹ ದೇಶಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ, ಆತಂಕಕಾರಿ ವಿಷಯವೆಂದರೆ, ಅಧಿಕ ರಕ್ತದೊತ್ತಡ ಮತ್ತು ಮಧುಮೇಹ ಹೊಂದಿರುವ ಅರ್ಧಕ್ಕಿಂತ ಹೆಚ್ಚು ಜನರಿಗೆ ತಮಗೆ ಈ ಕಾಯಿಲೆ ಇದೆ ಎಂಬ ಸತ್ಯದ ಅರಿವಿಲ್ಲ!

ಅಧಿಕ ಕೊಲೆಸ್ಟ್ರಾಲ್

ಇದು ರಕ್ತನಾಳಗಳ ಅಡಚಣೆಯನ್ನು ಉಂಟುಮಾಡುವುದಲ್ಲದೆ ಪಾರ್ಶ್ವವಾಯು ಮತ್ತು ಹೃದಯಾಘಾತಕ್ಕೆ ದಾರಿ ಮಾಡಿಕೊಡುತ್ತದೆ.

ಧೂಮಪಾನ

ಭಾರತದಲ್ಲಿ ಸುಮಾರು 26.7 ಕೋಟಿ ಜನರು ಧೂಮಪಾನಿಗಳಾಗಿದ್ದು, ಈ ಅಂಶ ಕೂಡ ಹೃದಯಾಘಾತ ಮತ್ತು ಪಾರ್ಶ್ವವಾಯುವಿಗೆ ಎಡೆ ಮಾಡಿಕೊಡುವ ಅತೀ ಪ್ರಮುಖ ಕಾರಣವಾಗಿದೆ. ಪಾರ್ಶ್ವವಾಯುವಿನಲ್ಲಿ ಸಾಮಾನ್ಯವಾಗಿ ಮಾತಿನ ಅಡಚಣೆಗಳು, ದೃಷ್ಟಿ ಸಮಸ್ಯೆಗಳು, ಜೊತೆಗೆ ಮುಖ ಜೋಲುವುದು, ತೋಳು ಮತ್ತು ಕಾಲಿನ ಒಂದು ಬದಿ ಬಲಹೀನಗೊಳ್ಳುತ್ತದೆ.

ಹಠಾತ್ ಪಾರ್ಶ್ವವಾಯುವಿನ ಲಕ್ಷಣಗಳು

ಸಮತೋಲನ ಕಳೆದುಕೊಳ್ಳುವುದು	ದೃಷ್ಟಿ ಬದಲಾವಣೆ	ಮುಖ ಜೋಲುವುದು	ತೋಳಿನ ದುರ್ಬಲತೆ	ಮಾತು ತೊದಲುವುದು



ಸ್ಟ್ರೋಕ್ ರೋಗಲಕ್ಷಣಗಳನ್ನು ಹೊಂದಿರುವವರು 4–5 ಗಂಟೆಗಳ ಒಳಗೆ ಆಸ್ಪತ್ರೆಗೆ ಬಂದರೆ, ಅವಶ್ಯಕತೆ ಇದ್ದಲ್ಲಿ ರಕ್ತ ಹೆಪ್ಪುಗಟ್ಟುವಿಕೆ ನಿರೋಧಕ ಔಷಧಿ ಇಲ್ಲವೇ ಹೆಪ್ಪುಗಟ್ಟುವಿಕೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆಗೊಳಪಡಿಸಬಹುದು. ಆ ಮೂಲಕ ಸ್ಟ್ರೋಕ್‌ನಿಂದ ಪಾರಾಗುವ, ಚೇತರಿಸಿಕೊಳ್ಳುವ ಸಾಧ್ಯತೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು. ಪ್ರತಿ ನಿಮಿಷಕ್ಕೂ ಮೆದುಳಿಗೆ ಹರಿಯುವ ರಕ್ತದ ಹರಿವಿನ ಕೊರತೆಯು ಲಕ್ಷಾಂತರ ನರ ಕೋಶಗಳ ನಷ್ಟವನ್ನು ಉಂಟುಮಾಡಬಹುದು. ಆದ್ದರಿಂದ ಉತ್ತಮ ಔಷಧಿಗಳನ್ನು ಬಳಸಿ ಮೆದುಳಿಗೆ ರಕ್ತದ ಹರಿವನ್ನು ಪುನಃಸ್ಥಾಪಿಸುವುದು ಪಾರ್ಶ್ವವಾಯುವಿನಿಂದ ಸಂಪೂರ್ಣ ಚೇತರಿಕೆಗೆ ಬಹಳ ಮುಖ್ಯವಾದ ಮಾರ್ಗವಾಗಿದೆ.

ಸೂಕ್ತ ಸಮಯಕ್ಕೆ ಕೈಗೊಳ್ಳುವಂತಹ ಮುನ್ನೆಚ್ಚರಿಕೆ ಕ್ರಮಗಳನ್ನೇ ಇಂಗ್ಲೀಷಿನಲ್ಲಿ **"ಟೈಮ್ ಈಸ್ ಬ್ರೇನ್"** ಎನ್ನುತ್ತಾರೆ. ಸಮಯದ ಮಹತ್ವವನ್ನು ಮನವರಿಕೆ ಮಾಡಲು ಈ ಮಾತು ತುಂಬಾ ಸೂಕ್ತವಾಗಿದೆ. ಇದರ ಅರ್ಥ ನೀವು ಅಥವಾ ನಿಮ್ಮವರು ಸ್ಟ್ರೋಕ್ ರೋಗಲಕ್ಷಣಗಳನ್ನು ಹೊಂದಿದ್ದರೆ ತಕ್ಷಣ ಆಸ್ಪತ್ರೆಗೆ ಸೇರಿಸುವುದು ಅವಶ್ಯವಾಗಿದೆ.

ಪಾರ್ಶ್ವವಾಯು ತಡೆಗಟ್ಟುವುದು

ನೀವು ಇವುಗಳತ್ತ ಎಚ್ಚರ ವಹಿಸಿದರೆ ಪಾರ್ಶ್ವವಾಯು ತಡೆಗಟ್ಟುವುದು ಸುಲಭ

- ರಕ್ತದೊತ್ತಡ <140/90 ಇರಬೇಕು.
- ಮಧುಮೇಹ (ಸರಾಸರಿ ರಕ್ತದಲ್ಲಿನ ಸಕ್ಕರೆ ಅಂಶ HbA1C<7)
- ಕೊಲೆಸ್ಟ್ರಾಲ್ (ಕೆಟ್ಟ ಕೊಲೆಸ್ಟ್ರಾಲ್ LDL<100)
- ಧೂಮಪಾನ ತಕ್ಷಣ ತ್ಯಜಿಸಿ.
- ವ್ಯಾಯಾಮ(ದಿನಕ್ಕೆ ಕನಿಷ್ಠ 30 ನಿಮಿಷ ವೇಗದ ನಡಿಗೆ)
- ನಾರಿನಂಶವುಳ್ಳ ಆಹಾರ, ಕಡಿಮೆ ಕಾರ್ಬೋಹೈಡ್ರೇಟ್ ಸೇವನೆ
- ಯೋಗ, ಧ್ಯಾನ, ಉತ್ತಮ ನಿದ್ರೆ ಮತ್ತು ಒತ್ತಡ–ಮುಕ್ತ ಜೀವನಶೈಲಿ

ಸುರಕ್ಷಿತವಾಗಿ ಮೈಸೂರು ತಲುಪಿದ ಗಜಪಡೆ

ಒಂದನೇ ಪುಟದಿಂದ

ತುಂಬಿದರು. ಸುಮಾರು ಒಂದೂವರೆ ಕಿ.ಮೀ.ವರೆಗೆ ನಡೆದ ಮೆರವಣಿಗೆ ಮಿನಿ ಜಂಬೂಸವಾರಿಯಂತೆ ಭಾಸವಾಯಿತು.

ಇದಕ್ಕೂ ಮುನ್ನ ವೀರನಹೊಸಳ್ಳಿ ಗೇಟ್ ಬಳಿ ಶುಕ್ರವಾರ ಬೆಳಗ್ಗೆ 7.30ರಿಂದಲೇ ಮೊದಲ ತಂಡದ ಎಲ್ಲಾ 9 ಆನೆಗಳಿಗೆ ಅಲಂಕಾರ ಮಾಡುವ ಪ್ರಕ್ರಿಯೆ ಆರಂಭಿಸಲಾಯಿತು. ಬಳಿಕ ಕಳೆದ 26 ವರ್ಷಗಳಿಂದ ಪೂಜೆ ಮಾಡುತ್ತಾ ಬಂದಿರುವ ಅರ್ಚಕ ಎಸ್.ವಿ.ಪ್ರಹ್ಲಾದ ರಾವ್ ಅವರು ಎಲ್ಲಾ ಆನೆಗಳಿಗೆ ಬೆಳಗ್ಗೆ 9 ಗಂಟೆಯಿಂದಲೇ ಪಾದ ತೊಳೆದು ಅರಿಶಿನ, ಕುಂಕುಮ, ಗಂಧ ಹಚ್ಚಿ, ಅಕ್ಷತೆ ಹಾಕಿದರು. ನಂತರ ವಿವಿಧ ಬಗೆಯ ಹೂವು, ವಿಭೂತಿ, ಪತ್ರೆ ಇಟ್ಟು ಸಿದ್ಧತೆ ಮಾಡಿಕೊಂಡಿದ್ದರು. ನಿಗದಿತ ಮುಹೂರ್ತದಂತೆ ಬೆಳಗ್ಗೆ 9.45ರಿಂದ 10.15ರೊಳಗೆ ಸಲ್ಲುವ ಶುಭ ತುಲಾ ಲಗ್ನದಲ್ಲಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಈಶ್ವರ್ ಖಂಡ್ರೆ, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ಇನ್ನಿತರರು ಆನೆಗಳಿಗೆ ಪೂಜೆ ಸಲ್ಲಿಸಿದರು. ಈ ವೇಳೆ ಅರ್ಚಕ ಪ್ರಹ್ಲಾದ್‌ರಾವ್ ಆನೆಗಳಿಗೆ ಗಣಪತಿ ಪೂಜೆ ನೆರವೇರಿಸಿ, ನೈವೇದ್ಯ ಮಾಡಿದರು. ಪುಷ್ಪಾರ್ಚನೆ ಬಳಿಕ ಆನೆಗಳಿಗೆ ಚಕ್ಕಲಿ, ಕೋಡುಬಳೆ, ಮೋದಕ, ಪಂಚಫಲ, ಕಡಬು, ಹೋಳಿಗೆ, ರವೆ ಉಂಡೆ ಹಾಗೂ ವಿವಿಧ ಬಗೆಯ ಹಣ್ಣು, ಕಬ್ಬು, ಬೆಲ್ಲ, ತೆಂಗಿನ ಕಾಯಿ ನೀಡಲಾಯಿತು. ಗಜಪೂಜೆ ನೆರವೇರಿದ ಬಳಿಕ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಬೂದು ಕುಂಬಳಕಾಯಿಯಿಂದ ಆನೆಗಳಿಗೆ ದೃಷ್ಟಿ ತೆಗೆಸಿ, ಒಡೆಯಲಾಯಿತು.

ಕಳೆ ಕಟ್ಟಿದ ವ್ಯಾಪಾರ: ಪ್ರತಿವರ್ಷವೂ ಗಜಪಯಣ ಕಾರ್ಯಕ್ರಮಕ್ಕೆ ನಾಗಾಪುರ ಹಾಡಿ, ಪಕ್ಷಿರಾಜಪುರ, ಯಶೋಧರಪುರ ಸೇರಿದಂತೆ ವಿವಿಧೆಡೆ ನೆಲೆಸಿರುವ ಆದಿವಾಸಿ ಪಂಗಡ ಹಾಗೂ ಸ್ಥಳೀಯ ಗ್ರಾಮಗಳ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದು ವಾಡಿಕೆ. ಈ ವರ್ಷವೂ ಸ್ಥಳೀಯರು ಮಾತ್ರವಲ್ಲದೆ, ವಿವಿಧೆಡೆಗಳಿಂದ ನೂರಾರು ಮಂದಿ ಆಗಮಿಸಿದ್ದರು. ಜಾತ್ರೋಪಾದಿಯಲ್ಲಿ ನೆರವೇರಿದ ಗಜಪಯಣದ ಅಂಗವಾಗಿ ರಸ್ತೆ ಬದಿ ಹಲವು ಮಾರಾಟ ಅಂಗಡಿಗಳು ತಲೆ ಎತ್ತಿದ್ದವು. ಐಸ್‌ಕ್ರೀಮ್, ಸಿಹಿ ತಿನಿಸು, ಆಟಿಕೆ ಮಾರಾಟ ಸೇರಿದಂತೆ ವಿವಿಧ ಮಾರಾಟ ಮಳಿಗೆಗಳು ಗಜಪಯಣಕ್ಕೆ ಜಾತ್ರಾ ಮೆರಗು ಹೆಚ್ಚಿಸಿದವು.

ಸಾಂಸ್ಕೃತಿಕ ಕಾರ್ಯಕ್ರಮ: ಗಜಪಯಣದ ಸಭಾ ಕಾರ್ಯಕ್ರಮದಲ್ಲಿ ಬುಡಕಟ್ಟು ಸಮುದಾಯ ಮಕ್ಕಳು, ಟಿಬೇಟಿಯನ್ ಕ್ಯಾಂಪ್ ಮಕ್ಕಳು ಹಾಗೂ ಸ್ಥಳೀಯ ಸರ್ಕಾರಿ ಶಾಲೆಗಳ ಮಕ್ಕಳು ನೃತ್ಯ ಪ್ರದರ್ಶಿಸಿ ಗಮನ ಸೆಳೆದರು.

ಈ ಬಾರಿ 14ರಲ್ಲಿ 4 ಹೊಸ ಆನೆಗಳಿಗೆ ಅವಕಾಶ

ಹಿರಣ್ಯ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿವೆ. ಮೊದಲ ತಂಡದಲ್ಲಿ ಗಜಪಡೆಯ ನಾಯಕ ಅಭಿಮನ್ಯು (ಮತ್ತಿಗೂಡು) ನೇತೃತ್ವದಲ್ಲಿ ಭೀಮ, ಮಹೇಂದ್ರ, ಬಳ್ಳೆ ಶಿಬಿರದಿಂದ ಮಾಜಿ ನಾಯಕ ಅರ್ಜುನ, ದುಬಾರೆಯಿಂದ ಧನಂಜಯ, ಗೋಪಿ, ಕಂಜನ್, ಹೆಣ್ಣಾನೆಗಳಾದ ವಿಜಯ (ದುಬಾರೆ) ಹಾಗೂ ಭೀಮನಕಟ್ಟೆಯಿಂದ ವರಲಕ್ಷ್ಮೀ ಆನೆ ಮೈಸೂರಿಗೆ ಆಗಮಿಸಿವೆ. 2ನೇ ತಂಡದಲ್ಲಿ ದುಬಾರೆ ಕ್ಯಾಂಪ್‌ನ ಪ್ರಶಾಂತ, ಸುಗ್ರೀವ, ರಾಂಪುರ ಕ್ಯಾಂಪ್‌ನ ರೋಹಿತ್, ಹಿರಣ್ಯ ಆಗಮಿಸಲಿವೆ. ಎರಡನೇ ತಂಡದ ಆನೆಗಳ ಆಗಮನದ ದಿನಾಂಕ ಇನ್ನು ನಿಗದಿ ಮಾಡಿಲ್ಲ.



ಗಜಪಯಣದ ಸಂದರ್ಭದಲ್ಲಿ ವೀರಗಾಸೆ ಕುಣಿತ ನೆರೆದಿದ್ದವರ ಗಮನ ಸೆಳೆಯಿತು

ನಕ್ಕರೆ ಅದೇ ಸ್ವರ್ಗ

ಅವರು : "ಈ ಓಟದ ಅಭ್ಯಾಸ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವುದಕ್ಕೇನು?"
ಇವರು : "ಅದಕ್ಕಲ್ಲಾ ಈ ಅಭ್ಯಾಸ, ದಿನಾ ಸಿಟಿ ಬಸ್ ಹಿಡೀಬೇಕಲ್ಲಾ...!"

ಮೈಸೂರು ಮಿತ್ರ

ಶನಿವಾರ, 2 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಒಳ್ಳೆಯ ಕೆಲಸವನ್ನು ಮಾಡುವವನು ಯಾವತ್ತೂ ದುರ್ಗತಿಯನ್ನು ಹೊಂದುವುದಿಲ್ಲ – ಭಗವದ್ಗೀತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದು ಹೋಳಿಗೆ ಕೊಟ್ಟರೆ ಬೆಲ್ಲ ಸಾಲದು ಎಂದನಂತೆ

ನಿಮ್ಮ ಪತ್ರಗಳು

■ ಪ್ರೀಮಿಯರ್ ಸ್ಟುಡಿಯೋ ಪಕ್ಕದ ಜಾಗ ನವಿಲುಗಳ ಆವಾಸ ಸ್ಥಾನ ರಕ್ಷಿಸಿ



ಮಾನ್ಯರೆ,

ಮೈಸೂರು ಮಿತ್ರ ಪತ್ರಿಕೆಯ ದಿನಾಂಕ 22.12.2022ರ 'ನಿಮ್ಮ ಪತ್ರಗಳು' ವಿಭಾಗದಲ್ಲಿ 'ಜಾಗ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಪ್ರಾಣಿ ಪಕ್ಷಿಗಳ ಬಗ್ಗೆ ಗಮನ ಅಗತ್ಯ' ಶಿರೋನಾಮೆಯಡಿಯ ನನ್ನ ಪತ್ರವನ್ನು ಪ್ರಕಟವಾಗಿತ್ತು. ಹುಣಸೂರು ರಸ್ತೆಯ ಪ್ರಿಮೀಯರ್ ಸ್ಟುಡಿಯೋ ಪಕ್ಕದ ವಿಶಾಲ ಖಾಲಿ ಜಾಗ ಗಿಡಮರ, ಪೊದೆಗಳಿಂದ ಕೂಡಿದೆ. ಆ ಜಾಗ ಹಲವಾರು ಸರಿಸೃಪಗಳ, ಪ್ರಾಣಿ ಪಕ್ಷಿಗಳ, ನವಿಲುಗಳ ಆವಾಸ ಸ್ಥಾನವಾಗಿದೆ. ಈ ಹಿಂದೆ ಮುಂದಾಲೋಚನೆಯಿಲ್ಲದೆ ಗಿಡಗಂಟಿಗಳನ್ನು ಕತ್ತರಿಸಿ ಸ್ವಚ್ಛಗೊಳಿಸಿದಾಗ ಸರಿಸೃಪಗಳ, ಪಕ್ಷಿಗಳ ಮೊಟ್ಟೆ ಹಾಗೂ ಮರಿಗಳ ಹನನವಾಗಿದ್ದು, ಅಲ್ಲಿ ವಾಸವಿದ್ದ ನವಿಲುಗಳು ಅತಂತ್ರವಾಗಿರುವ ಬಗ್ಗೆ ಬರೆದಿದ್ದೆ. ಈಗ ಪುನಃ ಗಿಡಗಂಟಿಗಳು ಮೊದಲಿನಂತೆಯೇ ಬೆಳೆದಿದ್ದು ನವಿಲುಗಳು ಬೀಡುಬಿಟ್ಟಿವೆ. ಮುಂಜಾನೆ ಮತ್ತು ಸಂಜೆ ವೇಳೆ ಅವುಗಳ ಓಡಾಟ ಮತ್ತು ಕೂಗನ್ನು ಕೇಳಬಹುದು. ಅವುಗಳಲ್ಲಿ ಕೆಲವು ಶುಕ್ರವಾರ (ಸೆ.1) ಮುಂಜಾನೆ ವಿಜಯನಗರ ಒಂದನೇ ಹಂತದ ಎರಡನೇ ಮುಖ್ಯ ರಸ್ತೆಯಲ್ಲಿ ಓಡಾಡುವ ಸುಂದರ ದೃಶ್ಯವನ್ನು ಕಣ್ತುಂಬಿಕೊಂಡು ಸಂತೋಷವಾಯಿತು. ಆದುದರಿಂದ ಮುಂದೆ ಏನಾದರೂ ಗಿಡಗಂಟಿಗಳನ್ನು ಕತ್ತರಿಸುವ ಸಂದರ್ಭ ಬಂದಲ್ಲಿ ಮುಂಜಾಗರೂಕತೆಯಿಂದ ಇವುಗಳ ರಕ್ಷಣೆಯ ಬಗ್ಗೆ ಗಮನ ಹರಿಸಲು ಸಂಬಂಧಪಟ್ಟವರಲ್ಲಿ ನನ್ನ ಮನವಿ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.

■ ಪುರುಷರಿಗೆ ಉಚಿತ ಬಸ್ ಪ್ರಯಾಣ ಕಲ್ಪಿಸಲಿ

ಮಾನ್ಯರೆ,

ಹಾಲಿ ಕಾಂಗ್ರೆಸ್ ಸರ್ಕಾರ ಸಮಾನತೆ ಬಗ್ಗೆ ಉದ್ದಗಲ ಭಾಷಣ ಮಾಡುತ್ತದೆ. ಆದರೆ ಸಮಾನತೆ ಕಾರ್ಯರೂಪಕ್ಕೆ ತರುವ ವಿಷಯದಲ್ಲಿ ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಎಂಬಂತೆ ಕರ್ನಾಟಕದ ಎಲ್ಲಾ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ದೊರಕಿಸಿದೆ. ಇದು ಖಂಡನೀಯ. ಕರ್ನಾಟಕದ ಶೇ. 80ರಷ್ಟು ಪುರುಷರು ಕಾಂಗ್ರೆಸ್‌ಗೆ ಬಹುಮತ ನೀಡಿ ಅಧಿಕಾರ ಚುಕ್ಕಾಣಿ ಹಿಡಿಯಲು ಕಾರಣರಾಗಿದ್ದಾರೆ. ಕಾಂಗ್ರೆಸ್ ಸರ್ಕಾರ ಇದನ್ನು ಮರೆತಿರುವುದು ವಿಷಾದನೀಯ. ಕೂಡಲೇ ಎಲ್ಲಾ ವಯೋಮಿತಿಯ ರಾಜ್ಯದ ಪುರುಷರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ದೊರಕಿಸಲಿ.

– ನೊಂದ ಅಸಂಖ್ಯಾತ ಪುರುಷರು, ಮೈಸೂರು.

■ ನಂದಿನಿ ಕೇಂದ್ರದಲ್ಲಿ ಸುಲಿಗೆ ತಪ್ಪಿಸಿ

ಮಾನ್ಯರೆ,

ಮೈಸೂರಿನ ಕೆ.ಆರ್. ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆಗೆ ಪ್ರತಿದಿನ ಸಾವಿರಾರು ಮಂದಿ ರೋಗಿಗಳು ಅವರ ಜೊತೆಯಲ್ಲಿ ಜನರು ಭೇಟಿ ನೀಡುತ್ತಾರೆ. ಆಸ್ಪತ್ರೆಯ ಒಳಭಾಗದಲ್ಲಿರುವ ನಂದಿನಿ ಮಳಿಗೆಯಲ್ಲಿ ಮಜ್ಜಿಗೆ, ಲಸ್ಸಿ ಇತ್ಯಾದಿ ಉತ್ಪನ್ನಗಳಿಗೆ ನಿಗದಿತ (ಎಂಆರ್‌ಪಿ) ದರಕ್ಕಿಂತ ಹೆಚ್ಚಿನ ಹಣ ಪಡೆಯುತ್ತಿದ್ದಾರೆ. ಮೊದಲೇ ನಂದಿನಿ ಉತ್ಪನ್ನಗಳ ಬೆಲೆ ಹೆಚ್ಚಾಗಿದೆ. ಇವರೂ ಅದಕ್ಕಿಂತಲೂ ಹೆಚ್ಚಿನ ಬೆಲೆ ಪಡೆದು ಬಡ ರೋಗಿಗಳ ಸುಲಿಗೆ ಮಾಡುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಬೇಕಾಗಿ ಮನವಿ. **– ನೊಂದ ರೋಗಿಗಳು, ಮೈಸೂರು.**

■ ಸಮಸ್ಯೆ!

ಮಾನ್ಯರೆ,

("... ಉದಯರವಿ ರಸ್ತೆ ಸಂಬಂಧ ಪಾಲಿಕೆ ಸಭೆಯಲ್ಲಿ ಗೊಂದಲ"
(ಮಿತ್ರ, ಆ. 23)

ಸಮಸ್ಯೆ ಇಲ್ಲದೆಡೆ ಸಮಸ್ಯೆ ಸೃಷ್ಟಿಸುವುದು, ಎಲ್ಲವನ್ನೂ ರಾಜಕೀಯಗೊಳಿಸುವುದು ಈಚಿನ ಪ್ರವೃತ್ತಿ. ಇದು ಅದಕ್ಕೊಂದು ಒಳ್ಳೆಯ (ಕೆಟ್ಟ?) ನಿದರ್ಶನ!" ಉದಯರವಿ ಯಾರು?" ಎಂದು ಕೇಳುವವರೂ ಇದ್ದಾರಲ್ಲ, ಏನು ಹೇಳುವುದು?

ಕೆಂಪು ನಿಶಾನೆ!

(ಕ್ರಾಂತಿಕಾರಿ ಕವಿ ದಿ. ಗದ್ದರ್ ಬಹಳ ಹಿಂದೆ ಮೈಸೂರಿಗೆ ಬಂದಿದ್ದಾಗ ನಾನು ಬರೆದ ಕವನವಿದು:)

ತುಟಿಯಂಚಿನ ವೈಚಾರಿಕತೆ, ಹುಸಿ ಬಂಡಾಯ
ಗಳ ಗದ್ದಲದ ಮಧ್ಯೆ, ಅದೋ, ಅಲ್ಲೊಬ್ಬ ಎದ್ದು
ಕಾಣುತ್ತಾನೆ: ಗದ್ದರ್ ಎಂಬ ಮನುಷ್ಯ ! ಅವ್ಯಭಿಚಾರಿ
ದಂಗೆಯುರಿ; ಬಾಯ್ತೆರೆದ ಅಗ್ನಿಗಿರಿ; ಮೊರೆ ಮೊರೆವ
ಜಂಝಾವಾತ; ಸಮುದಾಯದ ಪ್ರಚಂಡ ಹಸಿವಿಗೆ
ಗುಂಡು ತಿಂದಾತ; ವ್ಯವಸ್ಥೆಯ ಭೂಕಂಪ; ವಿಪ್ಲವದ ಹೆಜ್ಜೆ
ಗೆಜ್ಜೆದನಿ! ಕಮರಿದ ಕೋಟಿ ಬದುಕುಗಳಿಗೆಲ್ಲಿ ಬನ್ನಿ?
ಮೇಲೇಳುತ್ತದೆ ಪ್ರಶ್ನೆ ಸ್ವಾತಂತ್ರ್ಯದ ಹೊನ್ನ ಹಬ್ಬ ದಬ್ಬರದ
ನಡುವೆ ಚಿನ್ನವೂ ಇಲ್ಲ, ಬೆಳ್ಳಿಯೂ ಇಲ್ಲ; ಬೆಳೆ ಬೆಳೆದು
ಹಬ್ಬುತ್ತಿದೆ ಪಾಪಾಸು ಕಳ್ಳಿ! ಹಳ್ಳಿ ಹಳ್ಳಿಗೂ ಚಾಚಿದ
ರಾಜಕೀಯ ರಾಕ್ಷಸನ ತೋಳು : ಮುಟ್ಟಿದ್ದೆಲ್ಲ ಹೋಳು!
ಗದ್ದರ್ ಸವಾಲು; ಸಡ್ಡು ಹೊಡೆದು ಕುಣಿ ಕುಣಿಯುತ್ತಾನೆ,
ಹಾಡುತ್ತಾನೆ: ಜೋಗುಳವಲ್ಲ, ಅಲ್ಲವೇ ಅಲ್ಲ ಸೋಬಾನೆ;
ತ್ರಿವರ್ಣ ಧ್ವಜವನ್ನಣಕಿಸುವ ಎತ್ತರದ ಕಂಪು ನಿಶಾನೆ!!

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.

ದಿಕ್ಕುದೆಸೆ



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ಭಾರತಕ್ಕೆ ದೂರದ ಅಮೆರಿಕಾ ಸ್ನೇಹಕ್ಕೆ ಬದಲು ಸನಿಹದ ಆಪ್ತಮಿತ್ರ ರಷ್ಯಾ ಸ್ನೇಹವೇ ಲಾಭದಾಯಕ!

ಜಾಗತಿಕ ರಾಜಕಾರಣದಲ್ಲಿ ತನ್ನ ಪ್ರಭಾವ ಕ್ಷೀಣಿಸುತ್ತಿರುವುದು ಅಮೆರಿಕಕ್ಕೆ ಮನವರಿಕೆಯಾಗಿದೆ. ಇದಕ್ಕೆ ಸಾಕ್ಷಿ ಎಂಬಂತೆ ಅಮೇರಿಕವು ಭಾರತಕ್ಕೆ ನ್ಯಾಟೋ ಪ್ಲಸ್ ರಕ್ಷಣಾ ವ್ಯವಸ್ಥೆಗೆ ಸೇರಲು ಆಹ್ವಾನಿಸಲಿದೆ ಎಂಬ ಮಾಹಿತಿ ಬರುತ್ತಿದೆ. ಜಾಗತಿಕ ಮಟ್ಟದಲ್ಲಿ ಆರ್ಥಿಕ ಮತ್ತು ಮಿಲಿಟರಿ ಶಕ್ತಿಯಾಗಿರುವ ಚೀನಾ ವೈಶ್ವಿಕ ರಾಜಕಾರಣದಲ್ಲಿ ಅಮೇರಿಕವನ್ನು ಮೀರಿಸಿ ದೊಡ್ಡಣ್ಣನಾಗಬೇಕೆಂಬ ಉತ್ಸಾಹದಲ್ಲಿದೆ. ಈ ಉದ್ದೇಶಕ್ಕಾಗಿ ಚೀನಾ ತೋರುತ್ತಿರುವ ಆಕ್ರಮಣಕಾರಿ ನಿಲುವಿನಿಂದ ಅಮೇರಿಕ ಆತಂಕಗೊಂಡಿದೆ. ಚೀನಾ ಪ್ರಭಾವ ನಿಯಂತ್ರಿಸಿ ಶೂನ್ಯಗೊಳಿಸಲು ಅಮೇರಿಕವು ತನ್ನ ಮಿತ್ರಕೂಟ ಬಲಪಡಿಸುವ ಯತ್ನದಲ್ಲಿದೆ. ಈ ಹಿನ್ನೆಲೆಯಲ್ಲಿ ಇದೇ ಮೊದಲ ಬಾರಿಗೆ ಭಾರತವನ್ನು ನ್ಯಾಟೋ (NATO) ಪ್ಲಸ್ ಗುಂಪಿಗೆ ಸೇರಿಸುವ ಉತ್ಸಾಹದಲ್ಲಿದೆ. ಅಮೆರಿಕದ ಆಹ್ವಾನಕ್ಕೆ ಭಾರತವು ಸಕಾರಾತ್ಮಕವಾಗಿ ಸ್ಪಂದಿಸಿದಲ್ಲಿ ಜಾಗತಿಕ ರಾಜಕೀಯ, ಭೌಗೋಳಿಕ ಚಿತ್ರಣದಲ್ಲಿ ಸಾಕಷ್ಟು ಬದಲಾವಣೆಯಾಗುವ ಸಾಧ್ಯತೆಗಳಿವೆ. ಹೊಸ ಅವಕಾಶಗಳು, ರಾಜಕೀಯ ಸಮೀಕರಣಗಳು, ಸವಾಲುಗಳು ಹಾಗೂ ರಾಜತಾಂತ್ರಿಕ ಬದಲಾವಣೆಗಳನ್ನು ತರುವ ಸಂಭಾವ್ಯತೆಗಳಿವೆ.

ನ್ಯಾಟೋ ಸ್ಥಾಪನೆ

ನ್ಯಾಟೋದ ವಿಸ್ತೃತ ರೂಪ ಉತ್ತರ ಅಟ್ಲಾಂಟಿಕ್ ಸಂಧಿ ಸಂಘಟನೆಯು ವಿಶ್ವದ ಮೂವತ್ತೊಂದು ರಾಷ್ಟ್ರಗಳು ರಚಿಸಿಕೊಂಡಿರುವ ಅಂತರರಾಷ್ಟ್ರೀಯ ಸಂಘಟನೆಯಾಗಿದೆ. ಯೂರೋಪಿಯನ್ ದೇಶಗಳಾದ ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂ, ಲಕ್ಸೆಂಬರ್ಗ್ ಹಾಗೂ ನೆದರ್‌ಲ್ಯಾಂಡ್‌ಗಳು ತಮ್ಮ ಭದ್ರತೆ ಮತ್ತು ಸುರಕ್ಷತೆಗಾಗಿ 1949, ಮಾರ್ಚ್ 17 ರಂದು ಬ್ರುಸೆಲ್ಸ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕುವುದರೊಂದಿಗೆ ನ್ಯಾಟೋ ಅಸ್ತಿತ್ವಕ್ಕೆ ಬಂತು. ಆರ್ಥಿಕವಾಗಿ ಸಮೃದ್ಧವಾಗಿದ್ದರೂ, ಸಾಮರಿಕ ದೃಷ್ಟಿಯಿಂದ ಬಲಿಷ್ಠ ಕಮ್ಯೂನಿಸ್ಟ್ ರಷ್ಯಾವನ್ನು ಎದುರಿಸುವುದು ಕಷ್ಟ ಸಾಧ್ಯವೆಂದು ಅರಿತ ಈ ದೇಶಗಳು ನ್ಯಾಟೋ ಕೂಟಕ್ಕೆ ಅಮೆರಿಕವನ್ನು ಆಹ್ವಾನಿಸಿದರು. 1949ರ ಏಪ್ರಿಲ್ 4 ರಂದು ಅಮೇರಿಕದ ವಾಷಿಂಗ್‌ಟನ್‌ನಲ್ಲಿ ಅಮೇರಿಕ, ಕೆನಡಾ, ಇಟಲಿ, ಪೋರ್ಚುಗಲ್, ನಾರ್ವೆ, ಡೆನ್ಮಾರ್ಕ್, ಐಸ್‌ಲ್ಯಾಂಡ್ ಮತ್ತು ಹಳೆ ಸದಸ್ಯರು ಒಪ್ಪಂದಕ್ಕೆ ಬರುವ ಮೂಲಕ ವಿಸ್ತಾರಿತ ರೂಪದಲ್ಲಿ ಅಧಿಕೃತವಾಗಿ ನ್ಯಾಟೋ ಅಸ್ತಿತ್ವಕ್ಕೆ ಬಂತು. ಇದೊಂದು ಅಂತರ್ ಸರ್ಕಾರಿ ಮೈತ್ರಿಕೂಟವಾಗಿದ್ದು, ಸೇನೆ ಮತ್ತು ರಾಜಕೀಯ ಸಹಕಾರದ ಮೂಲಕ ಈ ಕೂಟದ ಸದಸ್ಯ ದೇಶಗಳ ಸ್ವಾತಂತ್ರ್ಯ ಮತ್ತು ಭದ್ರತೆಯನ್ನು ಖಾತ್ರಿಪಡಿಸುವ ಉದ್ದೇಶ ಹೊಂದಿದೆ.

ಭಾರತ ನ್ಯಾಟೋ ಏಕೆ ಸೇರಲಿಲ್ಲ

ನ್ಯಾಟೋ ರೂಪುಗೊಂಡ ನಂತರ ಜಗತ್ತಿನ ಅನೇಕ ದೇಶಗಳು ಅಮೆರಿಕ ಮತ್ತು ಸೋವಿಯತ್ ರಷ್ಯಾ ಬಣಗಳಲ್ಲಿ ಸೇರುವ ಮೂಲಕ ಶೀತಲಯುದ್ಧ (Cold war) ಆರಂಭವಾಯಿತು. ಈ ಸಂದರ್ಭದಲ್ಲಿ ಯಾವುದೇ ಬಣ ಸೇರಲಿಚ್ಛಿಸದ ಭಾರತವು ಇನ್ನಿತರ ಸಮಾನ ಮನೋಭಾವದ ದೇಶಗಳೊಂದಿಗೆ ಸೇರಿ ಅಲಿಪ್ತ ಚಳುವಳಿ ಆರಂಭಿಸಿತು. ಆಲಿಪ್ತ ಚಳವಳಿಯೂ ಯಾವುದೇ ದೇಶದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪಿಸದಿರುವುದು ಮತ್ತು ಬೃಹತ್ ಶಕ್ತಿ ದೇಶಗಳ ಆಕ್ರಮಣಕಾರಿ ನಿಲುವು ಮತ್ತು ಬ್ಲಾಕ್ ರಾಜಕೀಯ ವಿರೋಧಿಸುವ ಉದ್ದೇಶ ಹೊಂದಿತ್ತು. ಆದರೆ ಸೋವಿಯತ್ ರಷ್ಯಾ ಪತನದೊಂದಿಗೆ ಶೀತಲಯುದ್ಧ ಸಮಾಪ್ತಿಯ ನಂತರ ಆಲಿಪ್ತ ಚಳವಳಿ ಮಹತ್ವ ಕಳೆದುಕೊಂಡಿತು. ಆ ನಂತರ ಭಾರತವು ಮಿಲಿಟರಿ ಶಕ್ತಿಯಾಗಿದ್ದ ರಷ್ಯಾದೊಂದಿಗೆ ತನ್ನ ಸಂಬಂಧ ಸದೃಢಗೊಳಿಸಿತು.



ಜೋ ಬಿಡೆನ್



ನರೇಂದ್ರ ಮೋದಿ



ವ್ಲಾಡಿಮಿರ್ ಪುಟಿನ್

ಭಾರತವು ನ್ಯಾಟೋ ಆಹ್ವಾನವನ್ನು ಸಾರಾ ಸಗಟಾಗಿ ತಿರಸ್ಕರಿಸಿದಲ್ಲಿ ಅಮೇರಿಕ ಹಾಗೂ ನ್ಯಾಟೋ ರಾಷ್ಟ್ರಗಳೊಂದಿಗಿರುವ, ಆರ್ಥಿಕ, ವಾಣಿಜ್ಯ, ಶೈಕ್ಷಣಿಕ ಹಾಗೂ ರಾಜಕೀಯ ಸಂಬಂಧಗಳಿಗೆ ಧಕ್ಕೆಯಾಗುವ ಸಾಧ್ಯತೆಗಳಿವೆ. ಭಾರತಕ್ಕೆ ರಷ್ಯಾ ಮತ್ತು ಅಮೇರಿಕದೊಡನಿರುವ ಸ್ನೇಹ ಸಂಬಂಧದಲ್ಲಿ ಸಮತೋಲನ ಕಾಯ್ದುಕೊಳ್ಳಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ಭಾರತವು ಈ ಆಹ್ವಾನವನ್ನು ತತ್‌ಕ್ಷಣಕ್ಕೆ ಒಪ್ಪಿಕೊಳ್ಳುವ ಸಾಧ್ಯತೆಗಳಿಲ್ಲದಿದ್ದರೂ ಭವಿಷ್ಯದಲ್ಲಿ ಸೇರಬೇಕಾದ ಅನಿವಾರ್ಯತೆ ಉದ್ಭವಿಸಬಹುದು. ಆದ್ದರಿಂದ ಅಂತರರಾಷ್ಟ್ರೀಯ ಸ್ನೇಹ ಸಂಬಂಧಗಳ ವಿಚಾರಗಳಲ್ಲಿ ಅತ್ಯಂತ ಚಾಣಾಕ್ಷತನದ ಮುತ್ಸದ್ದಿತನ ತೋರುತ್ತಿರುವ ಪ್ರಧಾನಿ ಮೋದಿಯವರು ಇದಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸಿ ಭಾರತದ ಸ್ವತಂತ್ರ ಧೋರಣೆಯನ್ನು ರಕ್ಷಿಸುವ ನಿರ್ಣಯ ಕೈಗೊಳ್ಳಬಹುದು.

ನ್ಯಾಟೋಗೆ ಸವಾಲಾದ ಚೀನಾ

ದಶಕಗಳ ಕಾಲ ಅಮೇರಿಕ ನೇತೃತ್ವದ ನ್ಯಾಟೋ ಸಂಘಟನೆ ಜಗತ್ತಿಗೆ ಭದ್ರತೆ ಒದಗಿಸುವ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಶ್ರಮಿಸುವ ಗುಂಪಾಗಿ ಕಾರ್ಯನಿರ್ವಹಿಸುತ್ತಿತ್ತು. ಆದರೆ ಆರ್ಥಿಕ, ಮಿಲಿಟರಿ, ತಂತ್ರಜ್ಞಾನ ಶಕ್ತಿಯಾಗಿದ್ದ ಅಮೆರಿಕವು ನ್ಯಾಟೋ ಸಂಘಟನೆಯ ಬಲದಲ್ಲಿ ಜಗತ್ತಿನ ಮೇಲೆ ತನ್ನ ಪ್ರಭುತ್ವ ಸ್ಥಾಪಿಸಲು ಪ್ರಾರಂಭಿಸಿತು. ಅನೇಕ ದೇಶಗಳಲ್ಲಿನ ಸರಕಾರಗಳನ್ನು ಅಸ್ಥಿರಗೊಳಿಸಿತು. ಬಂಡುಕೋರರನ್ನು ಸೃಷ್ಟಿಸಿ ಶಸ್ತ್ರಾಸ್ತ್ರಗಳನ್ನು ನೀಡುವ ಮೂಲಕ ಕೈಗೊಂಬೆ ಸರಕಾರಗಳನ್ನು ಸ್ಥಾಪಿಸಿ ಸಂಪನ್ಮೂಲಗಳನ್ನು ದೋಚುವ ಮೂಲಕ ಅಮೇರಿಕವು ಭಾರೀ ಲಾಭ ಗಳಿಸುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಚೀನಾವು ತನ್ನ ಉತ್ಪಾದನಾ ಸಾಮರ್ಥ್ಯ, ಮಿಲಿಟರಿ ಶಕ್ತಿ ಮತ್ತು ತಂತ್ರಜ್ಞಾನ ಶಕ್ತಿಯಿಂದ ಅಮೆರಿಕವನ್ನು ಜಗತ್ತಿನ ರಾಜಕೀಯ ಭೂಪಟದಲ್ಲಿ ಬದಿಗೆ ಸರಿಸುವ ಯತ್ನದಲ್ಲಿದೆ.

ಚೀನಾದ ಪ್ರಾಬಲ್ಯದಿಂದ ಆತಂಕಗೊಂಡಿರುವ ಅಮೇರಿಕವು ವಿಶ್ವ ರಾಜಕೀಯ ಪಟಲದಲ್ಲಿ ಪ್ರಭಾವ ಬೀರಿರುವ ಹಾಗೂ ಚೀನಾವನ್ನು ಎದುರಿಸುತ್ತಿರುವ ಭಾರತವನ್ನು ನ್ಯಾಟೋ ಬಣಕ್ಕೆ ಸೇರಿಸಿದಲ್ಲಿ ಚೀನಾವನ್ನು ನಿಯಂತ್ರಿಸಬಹುದು ಎಂಬ ನಿಷ್ಕರ್ಷೆಗೆ ಬಂದಿದೆ. ಭವಿಷ್ಯದಲ್ಲಿ ಚೀನಾ–ಭಾರತ ಸಂಘರ್ಷದಲ್ಲಿ ಎರಡೂ ದೇಶಗಳು ದುರ್ಬಲವಾಗಿ ತಾನು ದೊಡ್ಡಣ್ಣನಾಗಿರಬಹುದೆಂಬ ದುರಾಲೋಚನೆ ಹೊಂದಿದೆ. ಶತ್ರುವಿನ ಶತ್ರು ಮಿತ್ರ ಎಂಬ ನೀತಿ ಅಮೆರಿಕದ ಈ ಆಹ್ವಾನದ ಹಿಂದಿದೆ. ಇದರಲ್ಲಿ ನಷ್ಟ ಭಾರತಕ್ಕೆ ಎಂಬುದು ಅಮೇರಿಕಕ್ಕೆ ತಿಳಿದಿದೆ. ಈ ಕಾರಣದಿಂದ ಅಮೆರಿಕವು ಭಾರತಕ್ಕೆ ನ್ಯಾಟೋ ಪ್ಲಸ್ ಸದಸ್ಯತ್ವ ನೀಡಲು ಉತ್ಸುಕತೆ ತೋರಿದೆ.

ನ್ಯಾಟೋ ಪ್ಲಸ್ ಎಂದರೇನು?

ಮೂಲ ನ್ಯಾಟೋ ಮಿತ್ರಕೂಟದೊಂದಿಗೆ ಇತ್ತೀಚಿನ ವರ್ಷಗಳಲ್ಲಿ ಸದಸ್ಯತ್ವ ಪಡೆದ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಜಪಾನ್, ಇಸ್ರೇಲ್ ಮತ್ತು ದಕ್ಷಿಣ ಕೊರಿಯಾ ಈ ಐದು ದೇಶಗಳನ್ನು ನ್ಯಾಟೋ ಪ್ಲಸ್. ಐದು ಗುಂಪಾಗಿ ಮೂಲ ಗುಂಪಿಗೆ ಜೊತೆಯಾಗಿಸಿದೆ. ಈ ಮಿತ್ರಕೂಟ ಜಾಗತಿಕ ರಕ್ಷಣಾ ಸಹಕಾರವನ್ನು ಉತ್ತೇಜಿಸುವ ಗುರಿ ಹೊಂದಿದೆ. ಭಾರತ ಇದರಲ್ಲಿ ಸೇರಿದಲ್ಲಿ ಈ ರಾಷ್ಟ್ರಗಳ ನಡುವೆ ಗುಪ್ತಚರ ಮಾಹಿತಿಗಳನ್ನು ಹಂಚಿಕೊಳ್ಳಬಹುದು. ಹಾಗೂ ಭಾರತಕ್ಕೆ ಅತ್ಯಾಧುನಿಕ ಮಿಲಿಟರಿ ತಂತ್ರಜ್ಞಾನಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಚೀನಿ ಕಮ್ಯೂನಿಸ್ಟ್ ಪಾರ್ಟಿ ಬಗ್ಗೆ ಅಧ್ಯಯನ ನಡೆಸಿ ಸರಕಾರಕ್ಕೆ ಸಲಹೆ ನೀಡಲು 2023, ಜನವರಿಯಲ್ಲಿ ರಚಿಸಲಾದ ಅಮೇರಿಕದ ಸಂಸದೀಯ ಸಮಿತಿ ಈ ಸಲಹೆ ನೀಡಿದೆ. ರಿಪಬ್ಲಿಕನ್ ಹಾಗೂ ಡೆಮಾಕ್ರಾಟಿಕ್ ಪಕ್ಷಗಳ ಸದಸ್ಯರನ್ನು ಒಳಗೊಂಡಿರುವ ಈ ಸಮಿತಿ ಜಾಗತಿಕ ಭದ್ರತೆ ಹೆಚ್ಚಿಸುವ ಮತ್ತು ಇಂಡೋ–ಫೆಸಿಫಿಕ್ ವಲಯದಲ್ಲಿ ಚೀನಾದ ಆಕ್ರಮಣಕಾರಿ ನೀತಿಯನ್ನು ನಿಯಂತ್ರಿಸಲು ಅನೇಕ ಸಲಹೆಗಳನ್ನು ನೀಡಿದೆ. ಭಾರತ ನ್ಯಾಟೋ ಪ್ಲಸ್ ಸದಸ್ಯತ್ವ ಪಡೆದರೆ ಭಾರತಕ್ಕೆ ತನ್ನ ಗಡಿಯಲ್ಲಿ ಚೀನಿ ತಂಟೆಗಳನ್ನು ಎದುರಿಸುವಲ್ಲಿ ಹೆಚ್ಚಿನ ಬಲ ಬರಲಿದೆ ಎಂಬುದು ಈ ಸಮಿತಿಯ ಅಭಿಪ್ರಾಯವಾಗಿದೆ.

ನ್ಯಾಟೋ ಸದಸ್ಯತ್ವ ನಿರಾಕರಿಸಿದ ಭಾರತ

ನ್ಯಾಟೋ ಸದಸ್ಯತ್ವ ನೀಡುವ ಆಹ್ವಾನವನ್ನು ನಯವಾಗಿ ತಿರಸ್ಕರಿಸಿರುವ ಭಾರತವು ಚೀನಿ ಆಕ್ರಮಣ ಸೇರಿದಂತೆ ಯಾವುದೇ ಸವಾಲನ್ನು ಎದುರಿಸಲು ತಾನು ಸಮರ್ಥನಿರುವುದಾಗಿ ಹೇಳುವ ಮೂಲಕ ಜಾಗತಿಕ ಮಟ್ಟದಲ್ಲಿ ತಾನು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿರುವುದಾಗಿ ಭಾರತವು ದೃಢೀಕರಿಸಿತು. ಭಾರತವು ಪಶ್ಚಿಮ ದೇಶಗಳ ನೇತೃತ್ವದ ನ್ಯಾಟೋ ಸೇರುವ ಯಾವುದೇ ಉದ್ದೇಶ ಹೊಂದಿಲ್ಲ. ಪಶ್ಚಿಮದ ಈ ಮೈತ್ರಿಕೂಟ ಸೇರುವುದರಿಂದ ಭಾರತದ ಹಿತಾಸಕ್ತಿ ರಕ್ಷಿಸಿದಂತಾಗದು ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿಳಿಸಿದ್ದಾರೆ. ಅದೇ ರೀತಿ ನ್ಯಾಟೋ ಮಾನದಂಡಗಳು ಭಾರತಕ್ಕೆ ಅನ್ವಯಿಸದು ಎಂದು ಅವರು ಹೇಳಿದರು.

ಪ್ರಧಾನಿ ಮೋದಿಯವರ ಅಮೇರಿಕ ಭೇಟಿ ಮುನ್ನ ಭಾರತದ ನಿಲುವು ವ್ಯಕ್ತಪಡಿಸಿದ್ದು, ಗಮನಾರ್ಹವಾಗಿದೆ. ಚೀನಾದ ಯಾವುದೇ ಸವಾಲನ್ನು ತನ್ನದೇ ಆದ ರೀತಿಯಲ್ಲಿ ಎದುರಿಸಲು ಭಾರತ ಶಕ್ತವಾಗಿದೆ. ಭಾರತ, ಚೀನಾ ಮಧ್ಯೆ ಇರುವ ಹಿಮಾಲಯ ಪರ್ವತ ಶ್ರೇಣಿಗಳು ಭಾರತಕ್ಕೆ ಅನುಕೂಲಕರವಾಗಿವೆ ಎಂದು ತಿಳಿಸಿದರು.

ನ್ಯಾಟೋ ಸದಸ್ಯತ್ವ ನಿರಾಕರಣೆಗೆ ಸಂಬಂಧಿಸಿದಂತೆ ಪ್ರಸ್ತುತ ಚೀನಾದ ಆರ್ಥಿಕ ಬಿಕ್ಕಟ್ಟನ್ನು ಭಾರತ ಎತ್ತಿ ತೋರಿಸಿದ್ದು, ಚೀನಾದ ಆಮದು ರಫ್ತಿನಲ್ಲಾಗಿರುವ ಭಾರೀ ಪ್ರಮಾಣದ ಕುಸಿತವನ್ನು ವಿವರಿಸಿ, ಈ ಕಾರಣಗಳಿಂದ ಚೀನಾವು ಭಾರತದ ಮೇಲೆ ಆಕ್ರಮಣದಂತಹ ದುಸ್ಸಾಹಸಕ್ಕೆ ಇಳಿಯುವ ಸಾಧ್ಯತೆಗಳಿಲ್ಲ. ಆದರೂ ಭಾರತವು ಚೀನಾದಿಂದ ಎದುರಾಗುವ ಯಾವುದೇ ಸವಾಲನ್ನು ಸ್ವತಂತ್ರವಾಗಿ ಎದುರಿಸುವುದೆಂದು ಮೂಲಗಳು ತಿಳಿಸಿವೆ. ಪ್ರಸ್ತುತ ನ್ಯಾಟೋ ಸೇರುವುದು ಭೌಗೋಳಿಕ ರಾಜಕೀಯ ದೃಷ್ಟಿಯಿಂದಲೂ ಭಾರತಕ್ಕೆ ಅನುಕೂಲವಲ್ಲ. ಭಾರತವು ನ್ಯಾಟೋ ಸೇರಿದಲ್ಲಿ ರಷ್ಯಾಕ್ಕೂ ಆಘಾತ ನೀಡುವುದು. ಭಾರತ–ರಷ್ಯಾ ಸ್ನೇಹ ಸಂಬಂಧ ಕಾಲದ ಪರೀಕ್ಷೆಯಲ್ಲಿ ಉತ್ತೀರ್ಣವಾಗಿದೆ. 1971ರ ಭಾರತ–ಪಾಕ್ ಯುದ್ಧ, ಕಾರ್ಗಿಲ್ ಕದನ ಹಾಗೂ ಇನ್ನಿತರ ಸಂಕಷ್ಟ ಸಮಯದಲ್ಲಿ ಭಾರತಕ್ಕೆ ಆಪ್ತ ಮಿತ್ರನಾಗಿ ಸಹಾಯಹಸ್ತ ನೀಡಿದ್ದು ರಷ್ಯಾ. ಆದರೆ ಅಮೇರಿಕ ಸದಾಕಾಲ ಭಾರತದ ವಿರುದ್ಧ ಯುದ್ಧದ ಸಂದರ್ಭಗಳಲ್ಲಿ ಹಾಗೂ ಭಯೋತ್ಪಾದನೆ ನಡೆಸುತ್ತಿದ್ದ ಪಾಕಿಸ್ತಾನಕ್ಕೆ ಆರ್ಥಿಕ, ಮಿಲಿಟರಿ ಸಹಾಯ ನೀಡುತ್ತ ಭಾರತವನ್ನು ದುರ್ಬಲಗೊಳಿಸುವ ಎಲ್ಲಾ ರೀತಿಯ ಯತ್ನಗಳನ್ನು ನಡೆಸಿತ್ತು. ಇದಲ್ಲದೇ ಭಾರತದ ರಕ್ಷಣೆ ಮತ್ತು ಶಸ್ತ್ರಾಸ್ತ್ರ ವ್ಯವಹಾರದಲ್ಲಿ ರಷ್ಯಾ ಅತ್ಯಧಿಕ ಪಾಲು ಹೊಂದಿದೆ. ರಷ್ಯಾವು ಭಾರತದಿಂದ ದೂರ ಸರಿದಲ್ಲಿ ಚೀನಾ–ರಷ್ಯಾ ಒಂದಾಗಲು ಅವಕಾಶ ಮಾಡಿಕೊಟ್ಟಂತಾಗಲಿದೆ. ಇದರಿಂದ ಪಾಕಿಸ್ತಾನವು ಈ ಗುಂಪಿನಲ್ಲಿ ಸೇರುವ ಸಾಧ್ಯತೆಗಳಿವೆ. ಈ ರೀತಿಯಾದಲ್ಲಿ ಚೀನಾ–ಪಾಕ್ ಜಂಟಿಯಾಗಿ ಭಾರತದ ಮೇಲೆ ಆಕ್ರಮಣ ನಡೆಸಿದಲ್ಲಿ ರಷ್ಯಾ ತಟಸ್ಥವಾಗುವ ಸಾಧ್ಯತೆಗಳಿವೆ. ಇದು ಭಾರತದ ಭದ್ರತೆಗೆ ಅಪಾಯಕಾರಿಯಾಗಲಿದೆ. ಉಕ್ರೇನ್ ನ್ಯಾಟೋ ಸೇರುವ ಆಸಕ್ತಿ ತೋರಿದ್ದೇ ಅದರ ಮೇಲೆ ರಷ್ಯಾ ಯುದ್ಧ ಸಾರುವುದಕ್ಕೆ ಪ್ರಮುಖ ಕಾರಣವಾಗಿತ್ತು. ಆದ್ದರಿಂದ ಭಾರತವು ನ್ಯಾಟೋ ಸೇರುವುದನ್ನು ರಷ್ಯಾ ಸ್ವಾಗತಿಸುವ ಸಾಧ್ಯತೆಗಳಿಲ್ಲ. ಆದ್ದರಿಂದ ದೂರದಲ್ಲಿರುವ ಅಮೇರಿಕದ ಸ್ನೇಹಕ್ಕಿಂತ ಸನಿಹದಲ್ಲಿರುವ ಆಪ್ತ ಮಿತ್ರ ರಷ್ಯಾದೊಡನೆ ಸ್ನೇಹ ಉಳಿಸಿಕೊಳ್ಳುವುದು ಭಾರತಕ್ಕೆ ಲಾಭದಾಯಕ ಹಾಗೂ ಸುರಕ್ಷಿತವಾಗಿದೆ. ಆದರೆ ಭಾರತವು ನ್ಯಾಟೋ ಆಹ್ವಾನವನ್ನು ಸಾರಾ ಸಗಟಾಗಿ ತಿರಸ್ಕರಿಸಿದಲ್ಲಿ ಅಮೇರಿಕ ಹಾಗೂ ನ್ಯಾಟೋ ರಾಷ್ಟ್ರಗಳೊಂದಿಗಿರುವ, ಆರ್ಥಿಕ, ವಾಣಿಜ್ಯ, ಶೈಕ್ಷಣಿಕ ಹಾಗೂ ರಾಜಕೀಯ ಸಂಬಂಧಗಳಿಗೆ ಧಕ್ಕೆಯಾಗುವ ಸಾಧ್ಯತೆಗಳಿವೆ. ಭಾರತಕ್ಕೆ ರಷ್ಯಾ ಮತ್ತು ಅಮೇರಿಕದೊಡನಿರುವ ಸ್ನೇಹ ಸಂಬಂಧದಲ್ಲಿ ಸಮತೋಲನ ಕಾಯ್ದುಕೊಳ್ಳಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ಭಾರತವು ಈ ಆಹ್ವಾನವನ್ನು ತತ್‌ಕ್ಷಣಕ್ಕೆ ಒಪ್ಪಿಕೊಳ್ಳುವ ಸಾಧ್ಯತೆಗಳಿಲ್ಲದಿದ್ದರೂ ಭವಿಷ್ಯದಲ್ಲಿ ಸೇರಬೇಕಾದ ಅನಿವಾರ್ಯತೆ ಉದ್ಭವಿಸಬಹುದು. ಆದ್ದರಿಂದ ಅಂತರರಾಷ್ಟ್ರೀಯ ಸ್ನೇಹ ಸಂಬಂಧಗಳ ವಿಚಾರಗಳಲ್ಲಿ ಅತ್ಯಂತ ಚಾಣಾಕ್ಷತನದ ಮುತ್ಸದ್ದಿತನ ತೋರುತ್ತಿರುವ ಪ್ರಧಾನಿ ಮೋದಿಯವರು ಇದಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸಿ ಭಾರತದ ಸ್ವತಂತ್ರ ಧೋರಣೆಯನ್ನು ರಕ್ಷಿಸುವ ನಿರ್ಣಯ ಕೈಗೊಳ್ಳಬಹುದು.

ರೈತರ ಹಿತ ಕಾಪಾಡದ ಸಂಸದರ ಮನೆ ಮುಂದೆ ಪ್ರತಿಭಟನೆ



ಮೈಸೂರು, ಸೆ.1 (ಎಸ್‌ಪಿಎನ್)– ಮಹದಾಯಿ ನೀರಿನ ವಿವಾದ, ಮೇಕೆದಾಟು ಅಣೆಕಟ್ಟೆ ನಿರ್ಮಾಣ, ಕಾವೇರಿ ಕೊಳ್ಳದಲ್ಲಿ ಮಳೆ ಕೊರತೆಯಾದಾಗ ಕರ್ನಾಟಕ ಮತ್ತು ತಮಿಳುನಾಡು ನಡುವೆ ಸಂಕಷ್ಟ ಸೂತ್ರ ಅಳವಡಿಕೆ ಸೇರಿದಂತೆ 10ಕ್ಕೂ ಹೆಚ್ಚು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸೆ.4ರಂದು ಬೆಳಗ್ಗೆ 10.30ರ ವೇಳೆಗೆ ರಾಜ್ಯದ 28 ಲೋಕಸಭಾ ಸದಸ್ಯರ ಕಚೇರಿಗಳ ಮುಂಭಾಗ ಪ್ರತಿಭಟನೆ ನಡೆಸಿ 'ಹಕ್ಕೊತ್ತಾಯ' ಪತ್ರ ನೀಡಲು ತೀರ್ಮಾನಿಸಲಾಗಿದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ರಾಜ್ಯ ರೈತ ಮುಖಂಡರ ಜೊತೆ ಸಭೆ ನಡೆಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಾವೇರಿ ಕೊಳ್ಳದ ರೈತರ ಹಿತವನ್ನು ಬಲಿಕೊಟ್ಟು ತಮಿಳುನಾಡಿಗೆ ನೀರು ಹರಿಸುತ್ತಿರುವುದು ಅಕ್ಷಮ್ಯ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕಾವೇರಿ ನೀರಿನ ವಿವಾದ, ಮಹಾದಾಯಿ ನದಿ ನೀರಿನ ವಿವಾದ ಕುರಿತು ರಾಜ್ಯದಿಂದ ಸಂಸತ್ತಿಗೆ ಆಯ್ಕೆಯಾಗಿರುವ 28 ಸದಸ್ಯರು ಕೇಂದ್ರ ಸರ್ಕಾರದ ಗಮನ ಸೆಳೆಯುವಲ್ಲಿ ವಿಫಲರಾಗಿದ್ದಾರೆ. ಕಬಿನಿ, ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಿ, ರೈತರ ಹಿತ ಬಲಿಕೊಡಲಾಗಿದೆ. ಈ ಹಿನ್ನೆಲೆಯಲ್ಲಿ ಹಕ್ಕೊತ್ತಾಯ ಪತ್ರ ನೀಡಲಾಗುವುದು ಎಂದು ತಿಳಿಸಿದರು.

ರಾಜ್ಯ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳಿಂದ ಬರಬೇಕಾದ ಹಿಂದಿನ ವರ್ಷದ ಬಾಕಿ ಹೆಚ್ಚುವರಿ 150 ರೂ ಹಣ ನೀಡಬೇಕು. ಪ್ರಸಕ್ತ 2023–24ನೇ ಸಾಲಿನ ಕಬ್ಬಿನ ದರ ಏರಿಕೆ ಮಾಡ ಬೇಕು. ರೈತ ಪಂಪ್‌ಸೆಟ್‌ಗಳಿಗೆ ಆಧಾರ್ ಕಾರ್ಡ್ ಲಿಂಕ್ ಮಾಡುತ್ತಿರುವುದನ್ನು ಕೈಬಿಡಬೇಕು. ರಾಜ್ಯ ಬಜೆಟ್‌ನಲ್ಲಿ ಕೃಷಿಗೆ ಅನುದಾನ ನೀಡಬೇಕು ಎಂದು ತಿಳಿಸಿದರು.

ಇತ್ತೀಚೆಗೆ ಕೇಂದ್ರ ಸರ್ಕಾರ ಅಕ್ಕಿ, ಸಕ್ಕರೆ, ಈರುಳ್ಳಿ, ರಫ್ತು ನಿಷೇಧ ಮಾಡಿ, ರೈತರ ಆದಾಯದ ಮೇಲೆ ಬರೆ ಎಳೆದಿದ್ದು, ಈ ನಿರ್ಧಾರವನ್ನು ಕೂಡಲೇ ವಾಪಸ್ ಪಡೆಯಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಗಮನ ಸೆಳೆಯುವಂತೆ ರಾಜ್ಯದ 28 ಲೋಕಸಭಾ ಸದಸ್ಯರನ್ನು ಒತ್ತಾಯಿಸಲು ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ದೇಶಾದ್ಯಂತ ಕೃಷಿಯನ್ನೇ ನಂಬಿಕೊಂಡಿರುವ ಪುರುಷರಿಗೆ ಹೆಣ್ಣು ಕೊಡಲು ಯಾರು ಮುಂದೆ ಬರುತ್ತಿಲ್ಲ. ಸುಲಭವಾಗಿ ಬ್ಯಾಂಕ್ ಸಾಲ ದೊರೆಯುತ್ತಿಲ್ಲ ಹಾಗೂ ಸರಿಯಾದ ವೇಳೆಗೆ ಬಿತ್ತನೆ ಬೀಜ ಪೂರೈಕೆ ಸೇರಿದಂತೆ ನಾನಾ ತೊಂದರೆಗಳಲ್ಲಿ ಸಿಲುಕಿರುವ ರೈತರ ಹಿತ ಕಾಪಾಡುವಂತಹ ಕಾನೂನು ಜಾರಿಗೊಳಿಸಬೇಕು. ಇತ್ತೀಚಿನ ದಿನಗಳಲ್ಲಿ ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಯೋಜನೆ ಜಾರಿಗೊಳಿಸಿರುವುದರಿಂದ ಕೃಷಿ ಸಂಬಂಧಿಸಿದ ಯೋಜನೆಗಳಿಗೆ ತಿಲಾಂಜಲಿ ನೀಡಲಾಗಿದೆ ಟೀಕಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಕಾರ್ಯಾಧ್ಯಕ್ಷ ವೀರನಗೌಡ ಪಾಟೀಲ್, ಸುರೇಶ್ ಮ. ಪಾಟೀಲ್, ರಮೇಶ್ ಉಗಾರ್, ಜಿ.ವಿ.ಲಕ್ಷ್ಮಿ ದೇವಿ, ಎಂ.ಬಿ.ಚೇತನ್ ಸೋಮಶೇಖರ, ಅತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ ಸೇರಿದಂತೆ ಇತರರಿದ್ದರು.

ರದ್ದಾದ ಮದುವೆಯಿಂದ ಜನಿಸಿದ ಮಕ್ಕಳಿಗೆ ಪಾಲಕರ ಆಸ್ತಿಯಲ್ಲಿ ಹಕ್ಕು: ಸುಪ್ರೀಂಕೋರ್ಟ್

ನವದೆಹಲಿ: ರದ್ದುಗೊಳಿಸಲಾದ ಅಥವಾ ರದ್ದುಗೊಳಿಸಬಹುದಾದ ಮದುವೆಯಿಂದ ಜನಿಸಿದ ಮಕ್ಕಳು, ಹಿಂದೂ ಉತ್ತರಾಧಿಕಾರ ಕಾಯ್ದೆ ಅನ್ವಯ ಪಾಲಕರ ಆಸ್ತಿಯಲ್ಲಿ ಹಕ್ಕು ಹೊಂದಿದ್ದಾರೆ ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ. ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್‌ನೇತೃತ್ವದ ನ್ಯಾಯಪೀಠ ಈ ಕುರಿತು ತೀರ್ಪು ನೀಡಿದೆ.

ಮದುವೆಗೂ ಮುನ್ನ ಜೋಡಿಗೆ ಜನಿಸಿದ ಮಕ್ಕಳಿಗೆ ಹಿಂದೂ ಉತ್ತರಾಧಿಕಾರ ಕಾಯ್ದೆಯಡಿ ಪಿತ್ರಾರ್ಜಿತ ಆಸ್ತಿ ಹಕ್ಕು ಇದೆಯೇ ಎಂಬುದಕ್ಕೆ ಸಂಬಂಧಿಸಿ 2011ರಲ್ಲಿ ದಾಖಲಾಗಿದ್ದ ಅರ್ಜಿಗೆ ಸಂಬಂಧಿಸಿ ನ್ಯಾಯಪೀಠ ಈ ತೀರ್ಪು ಪ್ರಕಟಿಸಿದೆ.

ರದ್ದುಗೊಳಿಸಲಾದ ಅಥವಾ ರದ್ದುಗೊಳಿಸಬಹುದಾದ ಮದುವೆಯಿಂದ ಜನಿಸಿದ ಮಕ್ಕಳು, ತಮ್ಮ ಪಾಲಕರ ಸ್ವಯಾರ್ಜಿತ ಆಸ್ತಿಯಲ್ಲಿ ಮಾತ್ರ ಹಕ್ಕು ಹೊಂದಿದ್ದಾರೆಯೇ ಎಂಬ ಪ್ರಶ್ನೆಯನ್ನೂ ನ್ಯಾಯಪೀಠವು ಇತ್ಯರ್ಥಪಡಿಸಿದೆ. ಈ ಕುರಿತ ವಿವರವಾದ ಆದೇಶ ಲಭ್ಯವಾಗಬೇಕಿದೆ. ಈ ಎಲ್ಲ ಪ್ರಶ್ನೆಗಳನ್ನು ವಿಸ್ತೃತ ನ್ಯಾಯಪೀಠಕ್ಕೆ ವರ್ಗಾಯಿಸಿ ಸುಪ್ರೀಂಕೋರ್ಟ್‌ನ ದ್ವಿಸದಸ್ಯ ನ್ಯಾಯಪೀಠವು 2011ರ ಮಾರ್ಚ್ 31ರಂದು ಆದೇಶಿಸಿತ್ತು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶನಿವಾರ 2 ಸೆಪ್ಟೆಂಬರ್ 2023

ದೇಶದ ಅಗ್ರಮಾನ್ಯ ಚೆಸ್ ಆಟಗಾರ ಪಟ್ಟ: ಆನಂದ್ ದೀರ್ಘ ಆಧಿಪತ್ಯ ಕೊನೆಗೊಳಿಸಿದ ಗುಕೇಶ್



ಚೆನ್ನೈ: ದೇಶದ ಅಗ್ರಮಾನ್ಯ ಆಟಗಾರ ಎಂಬ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರ 37 ವರ್ಷಗಳ ದೀರ್ಘ ಕಾಲದ ಆಧಿಪತ್ಯ ಅಂತ್ಯಗೊಂಡಿತು. ಹದಿಹರೆಯದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಶುಕ್ರವಾರ ಅಧಿಕೃತವಾಗಿ ಆ ಸ್ಥಾನಕ್ಕೇರಿದ್ದಾರೆ.

1986ರ ಜುಲೈ 1ರಿಂದ ಆನಂದ್ ಅವರು ದೇಶದ ನಂಬರ್ ಒನ್ ಆಟಗಾರರಾಗಿದ್ದರು. ಚೆನ್ನೈನ ಗುಕೇಶ್ ಅವರು ಬಾಕುವಿನಲ್ಲಿ (ಅಜರ್‌ಬೈಜಾನ್) ನಡೆದ ವಿಶ್ವಕಪ್ ಚೆಸ್ ಟೂರ್ನಿಯ ವೇಳೆ ರ್‍ಯಾಂಕಿಂಗ್‌ನಲ್ಲಿ ಆನಂದ್ ಅವರನ್ನು ಹಿಂದೆ ಹಾಕಿದ್ದರು. ಅವರು ಕ್ವಾರ್ಟರ್ ಫೈನಲ್‌ನಲ್ಲಿ ಸೋತಿದ್ದರು.

ಸೆಪ್ಟೆಂಬರ್ ತಿಂಗಳ ಫಿಡೆ ಕ್ರಮಾಂಕ ಪಟ್ಟಿ ಪ್ರಕಟವಾಗಿದ್ದು ಅದರಲ್ಲಿ 17 ವರ್ಷದ ಗುಕೇಶ್ ಅವರು 2758 ರೇಟಿಂಗ್ ನೊಡನೆ ಎಂಟನೇ ಸ್ಥಾನಕ್ಕೆ ಏರಿದ್ದಾರೆ. ಐದು ಬಾರಿಯ ವಿಶ್ವ ಚಾಂಪಿಯನ್ ಆನಂದ್ (2754) ಈಗ 9ನೇ ಸ್ಥಾನದಲ್ಲಿದ್ದಾರೆ. ಆಗಸ್ಟ್ ತಿಂಗಳ ರೇಟಿಂಗ್ ಪಟ್ಟಿಯಲ್ಲಿ ಗುಕೇಶ್ 11ನೇ ಸ್ಥಾನದಲ್ಲಿದ್ದರು. ಆಗ ಅವರ ಬಳಿ 2751 ಪಾಯಿಂಟ್ಸ್ ಇತ್ತು.

ಚೆಸ್ ವಿಶ್ವಕಪ್ ಫೈನಲ್ ತಲುಪಿ ಮನೆಮಾತಾದ ಇನ್ನೊಬ್ಬ ಪ್ರತಿಭಾವಂತ ಆರ್.ಪ್ರಜ್ಞಾನಂದ (2727) ಅವರೂ ಬಡ್ತಿ ಪಡೆದಿದ್ದು 19ನೇ ಸ್ಥಾನಕ್ಕೇರಿದ್ದಾರೆ. ಅವರು ಭಾರತದ ಆಟಗಾರರ ಪೈಕಿ ಮೂರನೇ ಸ್ಥಾನದಲ್ಲಿದ್ದಾರೆ.

ಭಾರತದ ಐವರು ಆಟಗಾರರು ಅಗ್ರ 30ರೊಳಗೆ ಸ್ಥಾನ ಪಡೆದಿದ್ದಾರೆ. ಗುಕೇಶ್, ಆನಂದ್, ಪ್ರಗ್ಗ ಜೊತೆ ವಿದಿತ್ ಗುಜರಾತಿ (27ನೇ) ಮತ್ತು ಅರ್ಜುನ್ ಎರಿಗೇಶಿ ಅವರು (29) ಅವರು ಇತರ ಇಬ್ಬರು. ಅನುಭವಿ ಆಟಗಾರ ಪಿ.ಹರಿಕೃಷ್ಣ 31ನೇ ಸ್ಥಾನದಲ್ಲಿದ್ದಾರೆ. ನಿಹಾಲ್ ಸರೀನ್ 43ನೇ ಸ್ಥಾನಕ್ಕೇರಿದ್ದಾರೆ. ಕಳೆದ ತಿಂಗಳು 51ನೇ ಸ್ಥಾನದಲ್ಲಿದ್ದರು.

ಸರ್ಕಾರದಿಂದಲೇ ಇನ್ನು ಮುಂದೆ ವಿಮಾನ ಹಾರಾಟ; ಮದ್ಯ ಮಾರಾಟ



- ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾಹಿತಿ
- ಮೈಸೂರು ಸೇರಿದಂತೆ ಶಿವಮೊಗ್ಗ, ಬೆಳಗಾವಿ, ಕಲ್ಬುರ್ಗಿ, ಬೀದರ್, ಬೆಂಗಳೂರು ಆಂತರಿಕ ವಿಮಾನ ಸಂಪರ್ಕ ಸರ್ಕಾರದಿಂದಲೇ ನಿರ್ವಹಣೆ
- 600 ಕೋಟಿ ವೆಚ್ಚದಲ್ಲಿ ಮೂರು ವಿಮಾನ ಖರೀದಿಗೂ ಚಿಂತನೆ
- ರಾಜ್ಯದಲ್ಲಿ 103 ಬೃಹತ್ ಮದ್ಯ ಮಾರಾಟ ಮಳಿಗೆ ತೆರೆಯಲು ನಿರ್ಧಾರ

ಬೆಂಗಳೂರು, ಸೆ.1(ಕೆಎಂಶಿ)– ರಾಜ್ಯದಲ್ಲಿ ವಿಮಾನ ಹಾರಾಟ ಹಾಗೂ ಮದ್ಯ ಮಾರಾಟವನ್ನು ರಾಜ್ಯ ಸರ್ಕಾರದ ವತಿಯಿಂದಲೇ ಮಾಡಲು ನಿರ್ಧರಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೃಹತ್, ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಸಚಿವ ಎಂ.ಬಿ.ಪಾಟೀಲ್ ಈ ವಿಷಯ ತಿಳಿಸಿದ್ದಲ್ಲದೆ, ಶೀಘ್ರದಲ್ಲೇ ಈ ಕುರಿತು ಸರ್ಕಾರ ಅಂತಿಮ ತೀರ್ಮಾನ ಕೈಗೊಳ್ಳಲಿದೆ ಎಂದರು.

ಶಿವಮೊಗ್ಗ ವಿಮಾನ ನಿಲ್ದಾಣವನ್ನು ರಾಜ್ಯ ಸರ್ಕಾರವೇ ನಿರ್ವಹಿಸುತ್ತಿದ್ದು, ಇನ್ನು ಮುಂದೆ ಹೊಸದಾಗಿ ರಾಜ್ಯದಲ್ಲಿ ಆರಂಭಗೊಳ್ಳುವ ಎಲ್ಲಾ ವಿಮಾನ ನಿಲ್ದಾಣಗಳು ಸರ್ಕಾರದ ಅಧೀನದಲ್ಲೇ ಕಾರ್ಯ ನಿರ್ವಹಿಸಲಿವೆ. ಇದರ ಜತೆಗೆ ರಾಜ್ಯದೊಳಗಿನ ಪ್ರಮುಖ ನಗರಗಳಿಗೆ ಸಂಪರ್ಕಿಸಲು ವಿಮಾನ ಹಾರಾಟವನ್ನು ರಾಜ್ಯ ಸರ್ಕಾರವೇ ನಿರ್ವಹಿಸಲಿದೆ. ಕೇಂದ್ರದ ವಿಮಾನಯಾನ ಖಾತೆಯ ಅನುಮತಿ ಪಡೆದು ಮೂರು ವಿಮಾನಗಳನ್ನು ಖರೀದಿ ಮಾಡಿ ಸರ್ಕಾರವೇ ನಿರ್ವಹಿಸಲು ಚಿಂತನೆ ನಡೆದಿದೆ. ಪ್ರತಿ ವಿಮಾನಕ್ಕೆ 200 ಕೋಟಿಯಂತೆ, 3 ವಿಮಾನಗಳಿಗೆ 600 ಕೋಟಿ ರೂ. ಆಗಲಿದ್ದು, ಇಷ್ಟು ಹಣ ಸರ್ಕಾರಕ್ಕೆ ಹೊರೆಯಾಗುವುದಿಲ್ಲ.

ಈಗಾಗಲೇ ಕೆಲವು ಖಾಸಗಿ ವಿಮಾನ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಿದ್ದು, ಅವರ ಮಾರ್ಗದರ್ಶನ ಪಡೆದುಕೊಳ್ಳಲಾಗಿದೆ. ನಾವು ಎಲ್ಲದಕ್ಕೂ ಇನ್ನೊಬ್ಬರ ಮೇಲೆ ಅವಲಂಬನೆಯಾಗುವ ಬದಲು ನಾವೇ ಇಂತಹ ಸಂಸ್ಥೆಗಳನ್ನು ನಡೆಸುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಯ ಜತೆಗೆ ಸರ್ಕಾರಕ್ಕೆ ಆದಾಯವೂ ಬರಲಿದೆ.

ಮೈಸೂರು, ಶಿವಮೊಗ್ಗ, ಬೆಳಗಾವಿ, ಕಲ್ಬುರ್ಗಿ, ಬೀದರ್, ಬೆಂಗಳೂರು ಕೇಂದ್ರಗಳಿಗೆ ಆಂತರಿಕ ಸಂಪರ್ಕಕ್ಕೆ ನಮ್ಮ ವಿಮಾನಗಳನ್ನು ಬಳಸಲು ಚಿಂತನೆ ನಡೆದಿದೆ. 2024ರ ವೇಳೆಗೆ ಹಾಸನ, ವಿಜಾಪುರ ಹಾಗೂ ರಾಯಚೂರು ವಿಮಾನ ನಿಲ್ದಾಣಗಳಲ್ಲಿ ವಿಮಾನ ಹಾರಾಟಕ್ಕೆ ಸಿದ್ಧವಾಗಲಿವೆ. ಅವುಗಳಿಗೂ ಸರ್ಕಾರಿ ಸ್ವಾಮ್ಯದ ವಿಮಾನ ಹಾರಾಟ ನಡೆಸುವ ಉದ್ದೇಶವಿದೆ ಎಂದರು.

ಬೃಹತ್ ಮದ್ಯದ ಮಳಿಗೆ: ರಾಜ್ಯದಲ್ಲಿ 103 ಬೃಹತ್ ಮದ್ಯದಂಗಡಿಗಳನ್ನು ಎಂಎಸ್ಐಎಲ್ ಮೂಲಕ ಪ್ರಾರಂಭಿಸಲು ತೀರ್ಮಾನಿಸಲಾಗಿದೆ. ಈ ಮಳಿಗೆಯಲ್ಲಿ ಎಲ್ಲಾ ತೆರನಾದ ಮದ್ಯಗಳು ಲಭ್ಯವಾಗಲಿವೆ. ಅದರಲ್ಲೂ ಶ್ರೀಮಂತ ವರ್ಗ ಬಳಸುವ ವಿವಿಧ ನಮೂನೆಯ ಮದ್ಯಗಳನ್ನು ಮಾರಾಟ ಮಾಡಲಾಗುವುದು. ಇದಕ್ಕಾಗಿಯೇ ದೊಡ್ಡ ಪ್ರಮಾಣದ ಮಾಲ್‌ಗಳ ಮಾದರಿ ಮಳಿಗೆ ತೆರೆಯಲಾಗುವುದು.

100 ದಿನದಲ್ಲಿ 60 ಸಾವಿರ ಕೋಟಿ ಹೂಡಿಕೆ

ಬೆಂಗಳೂರು: ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ 100 ದಿನಗಳಲ್ಲಿ 60 ಸಾವಿರ ಕೋಟಿ ಮೊತ್ತದ ಹೂಡಿಕೆ ಒಪ್ಪಂದಗಳಾಗಿವೆ. ಒಂದು ವರ್ಷದಲ್ಲಿ ಒಂದು ಲಕ್ಷ ಕೋಟಿ ರೂ.ನಷ್ಟು ಬಂಡವಾಳ ಹರಿದುಬರಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದರು. ನುಡಿದಂತೆ ನಡೆಯುವ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 100 ದಿನಗಳನ್ನು ಯಶಸ್ವಿಯಾಗಿ ಪೂರೈಸಿದೆ. ಇದೇ ಹಾದಿಯಲ್ಲಿ, ಕರ್ನಾಟಕಕ್ಕೆ ಉಜ್ವಲವಾದ ಕೈಗಾರಿಕಾ ಭವಿಷ್ಯವನ್ನು ರೂಪಿಸಲು ಮುಂದಾಗಿರುವ ನಮ್ಮ ಸರ್ಕಾರ ಸದೃಢ ಹೆಜ್ಜೆಗಳನ್ನು ಇರಿಸಿದೆ.

ಬೆಂಗಳೂರು ಹೊರವಲಯದಲ್ಲಿ ಸುಮಾರು 2000 ಎಕರೆ ಪ್ರದೇಶದಲ್ಲಿ 'ನಾಲೆಡ್ಜ್ –ಹೆಲ್ತ್– ಇನ್ನೋವೇಶನ್ ಅಂಡ್ ರಿಸರ್ಚ್' ಸಿಟಿ ಸ್ಥಾಪಿಸುವ ಉದ್ದೇಶವಿದೆ. ಮೊದಲ ಹಂತದಲ್ಲಿ ಅಭಿವೃದ್ಧಿಯಾಗಲಿರುವ 1000 ಎಕರೆ ಪ್ರದೇಶದಲ್ಲಿ ವಿಶ್ವದರ್ಜೆಯ ವಿಶ್ವವಿದ್ಯಾಲಯ, ಆಸ್ಪತ್ರೆ, ಆವಿಷ್ಕಾರ– ಸಂಶೋಧನಾ ಕೇಂದ್ರಗಳಿರಲಿವೆ. ಈ ಯೋಜನೆ ಜಾಗತಿಕ ವಲಯದಲ್ಲಿ ಬೆಂಗಳೂರಿನ ಹೆಸರನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವುದರಲ್ಲಿ ಸಂದೇಹವಿಲ್ಲ.

ಸರ್ಕಾರ ಮತ್ತು ಉದ್ಯಮಗಳ ನಡುವಿನ ಅಂತರವನ್ನು ನೀಗಿಸುವ ನಿಟಿನಲ್ಲಿ ಕೈಗಾರಿಕಾ ಪ್ರತಿನಿಧಿಗಳೊಂದಿಗೆ ಸಂವಾದ ಪ್ರಾರಂಭಿಸಿದ್ದೇನೆ. ಸ್ಟಾರ್ಟ್ ಅಪ್‌ಗಳಿಂದ ಆರಂಭಿಸಿ ಸಂಘಟಿತ ಸಂಸ್ಥೆಗಳವರೆಗೆ, ಏರೋಸ್ಪೇಸ್‌ನಿಂದ ಎಲೆಕ್ಟ್ರಿಕ್ ವಾಹನಗಳ ಉತ್ಪಾದಕರ ಜತೆ ಮಾತುಕತೆ ಸಾಗಿದೆ.

ವೆಂಚರ್ ಕ್ಯಾಪಿಟಲ್, ಪ್ರೈವೇಟ್ ಇಕ್ವಿಟಿ ಮತ್ತು ಮೂಲಸೌಕರ್ಯ ಅಭಿವೃದ್ಧಿಯಂತಹ ವಿವಿಧ ವಲಯಗಳ ಅನುಭವಿಗಳನ್ನು ಒಳಗೊಂಡ 'ಕಾರ್ಯತಂತ್ರ ಹೂಡಿಕೆ ಸಮಿತಿ' ರಚಿಸಲಾಗುವುದು. ಇದಲ್ಲದೇ, ಸುಲಲಿತ ವ್ಯವಹಾರಕ್ಕೆ ಅನುವು ಮಾಡಲು ಅತ್ಯಾಧುನಿಕ ಏಕಗವಾಕ್ಷಿ ವ್ಯವಸ್ಥೆಯನ್ನು ರೂಪಿಸುವ ಕೆಲಸ ಆಗುತ್ತಿದೆ. ಈ ಸಂಬಂಧ ಹಲವಾರು ಸುತ್ತಿನ ಚರ್ಚೆಗಳು ನಡೆದಿದ್ದು, ಶೀಘ್ರದಲ್ಲೇ ಕ್ರಮ ವಹಿಸಲಾಗುತ್ತದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಬೆಳವಣಿಗೆ ಉತ್ತೇಜಿಸಲು 9 ಆದ್ಯತಾ ವಲಯಗಳಲ್ಲಿ 'ವಿಷನ್ ಗ್ರೂಪ್' ರಚಿಸುತ್ತೇವೆ ಏರೋಸ್ಪೇಸ್ ಮತ್ತು ಡಿಫೆನ್ಸ್, ಮೆಷಿನ್ ಟೂಲ್ಸ್, ಇಎಸ್‌ಡಿಎಂ, ಫಾರ್ಮಾಸ್ಯುಟಿಕಲ್ಸ್, ಕೋರ್ ಮ್ಯಾನುಫ್ಯಾಕ್ಚರಿಂಗ್, ಆಟೋಮೋಟಿವ್/ಎಲೆಕ್ಟ್ರಿಕ್ ವೆಹಿಕಲ್ಸ್, ಇಂಡಸ್ಟ್ರಿ 5.0, ಟೆಕ್ಸ್‌ಟೈಲ್ಸ್ ಮತ್ತು ಗ್ರೀನ್ ಎನರ್ಜಿಯನ್ನು ಒಳಗೊಂಡಿದೆ.

ಹೊಸ ಕೈಗಾರಿಕಾ ನೀತಿ ರಚಿಸಲು ನಮ್ಮ ಸರ್ಕಾರ ಮುಂದಾಗಿದ್ದು, ಎಲೆಕ್ಟ್ರಿಕ್ ವೆಹಿಕಲ್ ಮತ್ತು ವೇರ್‌ಹೌಸಿಂಗ್ ಮತ್ತು ಲಾಜಿಸ್ಟಿಕ್ಸ್ ವಲಯಗಳಿಗೆ ಈಗಾಗಲೇ ಕರಡು ರೂಪುಗೊಂಡಿವೆ. ಸದ್ಯ ಇತರ ರಾಜ್ಯಗಳ ಕೈಗಾರಿಕಾ ನೀತಿಯ ಅಧ್ಯಯನ ನಡೆಯುತ್ತಿದ್ದು, ಶೀಘ್ರದಲ್ಲೇ ಪ್ರಗತಿಪರ ನೀತಿಯನ್ನು ಹೊರತರಲಿದ್ದೇವೆ. ಜತೆಗೆ, ಪ್ರೋತ್ಸಾಹಕ ಪ್ಯಾಕೇಜ್‌ಗಳನ್ನು ಘೋಷಿಸಲಿದ್ದೇವೆ. ರಫ್ತು ಉತ್ತೇಜನಕ್ಕೂ ಹೊಸ ನೀತಿಯಲ್ಲಿ ಅವಕಾಶ ನೀಡಲಾಗುತ್ತದೆ.

ಫಾಕ್ಸ್‌ಕಾನ್, ಜೆಎಸ್‌ಡಬ್ಲ್ಯು ಎನರ್ಜಿ, ಟಾಟಾ ಎಲೆಕ್ಟ್ರಾನಿಕ್ಸ್ ಮತ್ತು ಐಬಿಸಿ ಮುಂತಾದ ಕಂಪನಿಗಳೊಂದಿಗಿನ ಫಲಪ್ರದ ಮಾತುಕತೆ ನಡೆಸಲಾಗಿದೆ. ಈ ಕಂಪನಿಗಳು ದೊಡ್ಡ ಮೊತ್ತದ ಹೂಡಿಕೆ ಒಪ್ಪಂದಗಳಿಗೆ ಸಹಿ ಮಾಡಿವೆ ಎಂದು ಪಾಟೀಲ್ ತಿಳಿಸಿದರು.

ಶ್ರೀರಾಮಚಂದ್ರ ಇಂದಿಗೂ ಯುವಕರಿಗೆ ಮಾದರಿ



ಮೈಸೂರು, ಸೆ.1(ಎಸ್‌ಪಿಎನ್)– ಶ್ರೀ ರಾಮಚಂದ್ರನ ಪ್ರತಿಯೊಂದು ಗುಣಗಳು ಇಂದಿನ ಯುವಕರಿಗೆ ಮಾದರಿಯಾಗಿವೆ. ಉಡುಪಿ ಪೇಜಾವರ ಅಧೋಕ್ಷಜ ತೀರ್ಥಪೀಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ವಿವರಿಸಿದರು.

ಮೈಸೂರು ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿನ ಟಿ.ಕೆ.ಬಡಾವಣೆಯ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ 'ಶ್ರೀಮದ್ರಾಮಾಯಣ' ಪ್ರವಚನ ಮಾಲೆಯಲ್ಲಿ ಶ್ರೀಗಳು ತಿಳಿಸಿದರು.

ಶ್ರೀರಾಮಚಂದ್ರ ಕಾಡಿಗೆ ಹೊರಡುವಾಗ ನಿಮ್ಮ ತೀರ್ಮಾನವನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಬಗೆಬಗೆಯಾಗಿ ತಮ್ಮಂದಿರು ಸೇರಿದಂತೆ ಅರಮನೆಯ ಪ್ರಮುಖರು ಕೇಳಿಕೊಂಡರೂ, ಶ್ರೀರಾಮಚಂದ್ರ ಮಾತ್ರ ತನ್ನ ತಂದೆ ಮಾತನ್ನು ನೆರವೇರಿಸುವುದು ನನ್ನ ಆದ್ಯ ಕರ್ತವ್ಯವೆಂದು ಉತ್ತರಕೊಟ್ಟರು. ಈ ಸನ್ನಿವೇಶವನ್ನು ಶ್ರೀಗಳು ವಿವರಿಸಿದರು.

ತಂದೆಯ ಮಾತನ್ನು ಮೀರುವುದು ಧರ್ಮಕ್ಕೆ, ರಾಜಧರ್ಮಕ್ಕೆ ವಿರೋಧ. ನಾನಾಗಲಿ, ಸೀತಾದೇವಿಯಾಗಲಿ, ತಮ್ಮಂದಿರಾಗಲಿ ತಂದೆಯ ಮಾತನ್ನು ಚಾಚೂ ತಪ್ಪದೇ ಪಾಲಿಸಬೇಕು ಎಂದು ಶ್ರೀರಾಮ ಹೇಳಿದ್ದನ್ನು ಶ್ರೀಗಳು ವಿವರಿಸಿದರು. ಪೇಜಾವರ ಶ್ರೀಗಳ ಪ್ರವಚನ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.



ಮೈಸೂರು ನಗರ ಪಾಲಿಕೆಯ ವಾರ್ಡ್ ನಂ. 57ರ ಕುವೆಂಪುನಗರದ ಕೆ.ಬ್ಲಾಕ್‌ನ ಕಾಂಗ್ರೆಸ್ ಮುಖಂಡರಾದ ಜಿ. ಕುಮಾರ್ ಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ವಾರ್ಡ್‌ನ ಯುವ ಮುಖಂಡರು, ಅಭಿಮಾನಿಗಳು ಅಭಿನಂದಿಸಿ, ಶುಭಾಶಯ ಕೋರಿದರು.

ನಾಳೆ 'ವರಲಕ್ಷ್ಮಿ ಅವಾಂತರ' ಹಾಸ್ಯ ನಾಟಕ



ಮೈಸೂರು, ಸೆ.1(ಜಿಎ)– ಪ್ರಕಸಂ ರಂಗ ತಂಡದ ವತಿಯಿಂದ ಇದೇ ಸೆ.3ರಂದು 'ವರಲಕ್ಷ್ಮಿ ಅವಾಂತರ' ಹಾಸ್ಯ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಕೃತಿಕಾರರಾದ ನಾಗವೇಣಿ ರಂಗನ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಜೆ 4 ಗಂಟೆ ಮತ್ತು 7 ಗಂಟೆಗೆ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಪ್ರದರ್ಶನ ಏರ್ಪಡಿಸಲಾಗಿದ್ದು, ನಾಟಕ ಸಂಪೂರ್ಣ ಹಾಸ್ಯ ಭರಿತವಾಗಿದ್ದು, ಎಲ್ಲಿಯೂ ಮುಜುಗರ ಉಂಟು ಮಾಡುವ ಸಂಭಾಷಣೆ ಇಲ್ಲ. ಕುಟುಂಬ ಸಮೇತ ವೀಕ್ಷಿಸಬಹುದಾಗಿದೆ. ಒಂದು ನಾಯಿಯನ್ನು ಮನೆಗೆ ತಂದ ನಂತರದ ಅಲ್ಲಿನ ಬೆಳವಣಿಗೆಯನ್ನು ಹಾಸ್ಯಮಯ ವಾಗಿ ನಾಟಕದಲ್ಲಿ ತೋರಿಸಲಾಗಿದೆ. ಪ್ರವೇಶ ಶುಲ್ಕ 150 ರೂ ಇರಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ನಾಟಕ ನಿರ್ದೇಶಕ ಸತೀಶ್, ಲೀಲಾವತಿ, ಆರತಿ, ಚೈತ್ರ ಉಪಸ್ಥಿತರಿದ್ದರು.

ಕೊನೆಯ ಶ್ರಾವಣ ಶನಿವಾರ ಪ್ರಯುಕ್ತ ಪೂಜಾ ಕೈಂಕರ್ಯ



ಮೈಸೂರು, ಸೆ.1 (ಸಿಎನ್)–ಸೆ.9ರಂದು ಕೊನೆಯ ಶ್ರಾವಣ ಶನಿವಾರ ಪ್ರಯುಕ್ತ ಸರಸ್ವತಿ ಪುರಂ ಈಜುಕೊಳ ಮುಂಭಾಗದ ಶ್ರೀ ಶನೇಶ್ಚರ ಸ್ವಾಮಿ ಸೇವಾ ಸಮಿತಿಯಿಂದ ಶ್ರೀ ಶನೇಶ್ವರ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿದೆ.

ವಿವಿಧ ಪೂಜಾ ವಿಧಿ ವಿಧಾನ: ಬೆಳಗ್ಗೆ 6 ಗಂಟೆಗೆ ಗಂಗಾ ಗಣಪತಿ ಪೂಜೆ, ಕಳಶಾರಾಧನೆ ಹಾಗೂ ಶನಿಶಾಂತಿ ಹೋಮಗಳನ್ನು ನೆರವೇರಿಸಲಾಗುತ್ತದೆ. ಬೆ. 11ಕ್ಕೆ ಪೂರ್ಣಾಹುತಿ, ಮಹಾ ಮಂಗಳಾರತಿ ಬಳಿಕ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ಪೂಜೆಯಲ್ಲಿ ಪಾಲ್ಗೊಳ್ಳುವ ಭಕ್ತಾದಿಗಳು ಕಡ್ಡಾಯವಾಗಿ ಪುರುಷರು ಪಂಚೆ, ಶಲ್ಯ, ಸ್ತ್ರೀಯರು ಸೀರೆ ಹಾಗೂ ಸಾಂಪ್ರದಾಯಿಕ ಉಡುಪು ಧರಿಸಿಕೊಂಡು ಬರಬೇಕಾಗಿ ವಿನಂತಿಸಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. 9844046569/ 9844915789 ಸಂಪರ್ಕಿಸಬಹುದು.

ನಿರಂತರ ಕಠಿಣ ಪರಿಶ್ರಮದಿಂದ ಯಶಸ್ಸು ನಿಶ್ಚಿತ



ಮೈಸೂರು, ಸೆ.1–ನಿರಂತರ ಕಠಿಣ ಪರಿಶ್ರಮದಿಂದ ದುಡಿದರೆ ಯಶಸ್ಸು ನಿಶ್ಚಿತ ಎಂದು ಮೈಸೂರು ಜಿಲ್ಲಾ ಅಪರ ಜಿಲ್ಲಾಧಿಕಾರಿ ಪಿ. ಶಿವರಾಜು ತಿಳಿಸಿದರು. ನಗರದ ಲಕ್ಷ್ಮೀಪುರಂ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ಆವರಣದಲ್ಲಿರುವ ಜ್ಞಾನಬುತ್ತಿಯಲ್ಲಿ ಆಯೋಜಿಸಿದ್ದ ಬ್ಯಾಂಕಿಂಗ್ ಹುದ್ದೆಗಳ ನೇರ ನೇಮಕಾತಿ ಪರೀಕ್ಷೆಗಳ ಉಚಿತ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ಪರ್ಧಾರ್ಥಿಗಳು ತಮ್ಮ ಎಲ್ಲಾ ಇತಿಮಿತಿಗಳನ್ನು ಮೀರಿ ತಮ್ಮೊಳಗಿನ ಆತ್ಮವಿಶ್ವಾಸದಿಂದ ಸಾಮರ್ಥ್ಯ ವೃದ್ಧಿ ಮಾಡಿಕೊಂಡು ಸಾಧನೆ ಮಾಡಲು ಪರಿಶ್ರಮದಿಂದ ಮುಂದುವರಿಯುವಂತೆ ಸಲಹೆ ನೀಡಿದರು.

ಪಾರಂಪರಿಕ ಇಲಾಖೆ ಆಯುಕ್ತ ಎ.ದೇವರಾಜು ಮಾತನಾಡಿ, ಜೀವನದಲ್ಲಿ ಗುರಿಯಿಟ್ಟುಕೊಂಡು ಸಾಧನೆಗೆ ಮುಂದಾಗಬೇಕು. ಕುಂಟು ನೆಪ ಹೇಳದೆ ಬದ್ಧತೆಯಿಂದ ಕಠಿಣ ಪರಿಶ್ರಮ ಹಾಕಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಸಹಕಾರಿ ವೈ.ಎನ್. ಶಂಕರೇಗೌಡ, ಎಂ.ಮನೋಜ್ ಕುಮಾರ್, ಜೈನ ಹಳ್ಳಿ ಸತ್ಯನಾರಾಯಣ ಗೌಡ, ಕಾರ್ಯದರ್ಶಿ ಎಚ್.ಬಾಲಕೃಷ್ಣ, ರೋಹನ್ ರವಿಕುಮಾರ್ ಉಪಸ್ಥಿತರಿದ್ದರು.

ಪಾಕಿಸ್ತಾನದಲ್ಲಿ ರೂ. 300ರ ಗಡಿ ದಾಟಿದ ಲೀಟರ್ ಪೆಟ್ರೋಲ್, ಡೀಸೆಲ್ ಬೆಲೆ



ಇಸ್ಲಾಮಾಬಾದ್: ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಪಾಕಿಸ್ತಾನದಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಇದೇ ಮೊದಲ ಬಾರಿಗೆ 300 ರೂಪಾಯಿ ಗಡಿ ದಾಟಿದೆ.

ಆರ್ಥಿಕ ಸುಸ್ಥಿತಿಗೆ ಮರಳಲು ತೀವ್ರ ಪ್ರಯತ್ನ ನಡೆಸುತ್ತಿರುವ ಪಾಕಿಸ್ತಾನದಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಬೆಲೆಯನ್ನು 14.91 ರೂಪಾಯಿಯಷ್ಟು ಹಾಗೂ ಹೈ ಸ್ಪೀಡ್ ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 18.44ರಷ್ಟು ಹೆಚ್ಚಳ ಮಾಡಿ ಹಣಕಾಸು ಸಚಿವಾಲಯ ಘೋಷಿಸಿದೆ.

ಇದರಿಂದಾಗಿ ಪೆಟ್ರೋಲ್ ಬೆಲೆ 305.36 ರೂಪಾಯಿ ಮತ್ತು ಡೀಸೆಲ್ ಬೆಲೆ 311.84 ರೂಪಾಯಿಗೆ ಏರಿಕೆಯಾಗಿದೆ. ದಶಕದಲ್ಲೇ ಪಾಕಿಸ್ತಾನ ಅತಿ ದೊಡ್ಡ ಆರ್ಥಿಕ ಸಂಕಷ್ಟವನ್ನು ಎದುರಿ ಸುತ್ತಿದೆ. ಹಣದುಬ್ಬರ ಹಾಗೂ ಅಧಿಕ ಬಡ್ಡಿ ದರದಿಂದಾಗಿ ಸಾಮಾನ್ಯ ಜನ ಹಾಗೂ ವ್ಯಾಪಾರಿಗಳ ಮೇಲೆ ತೀವ್ರ ಒತ್ತಡ ಸೃಷ್ಟಿಯಾಗಿದೆ.

ಪಾಕಿಸ್ತಾನದ ಕರೆನ್ಸಿ ರುಪೀ ಮೌಲ್ಯ ನಿರಂತರವಾಗಿ ಕುಸಿಯುತ್ತಿರುವುದರಿಂದ ಅಲ್ಲಿನ ಕೇಂದ್ರೀಯ ಬ್ಯಾಂಕ್ ಬಡ್ಡಿದರವನ್ನು ಏರಿಸಿದೆ. ಅಮೆರಿಕದ ಡಾಲರ್ ಎದುರು ಪಾಕಿಸ್ತಾನದ ಕರೆನ್ಸಿ 305.6ಕ್ಕೆ ಸರ್ವಕಾಲಿಕ ಕುಸಿತ ದಾಖಲಿಸಿದೆ. ಕಳೆದ ಮಂಗಳವಾರ ಇದು 304.4 ಇತ್ತು.

ಪಾಕಿಸ್ತಾನದಲ್ಲಿ ಸದ್ಯ ಹಂಗಾಮಿ ಪ್ರಧಾನಿ ಅನ್ವರ್ ಉಲ್ ಹಕ್ ಕಕರ್ ಅವರ ಆಡಳಿತದಲ್ಲಿ ಸರ್ಕಾರ ನಡೆಯುತ್ತಿದೆ. ದೇಶದಲ್ಲಿ ಹೊಸದಾಗಿ ಚುನಾವಣೆ ನಡೆದು ಹೊಸ ಸರ್ಕಾರ ರಚನೆಯಾಗಬೇಕಿದೆ. ಇದು ನವೆಂಬರ್ ವರೆಗೂ ವಿಳಂಬವಾಗುವ ಸಾಧ್ಯತೆ ಇದೆ.

ದೇಶದ ಆರ್ಥಿಕತೆಯನ್ನು ಮರಳಿ ಹಳಿಗೆ ತರುವ ನಿಟ್ಟಿನಲ್ಲಿ ಕೊನೆಯ ಕ್ಷಣದಲ್ಲಿ 3 ಶತಕೋಟಿ ಡಾಲರ್‌ನಷ್ಟು ಬೇಲೌಟ್ ಪಡೆದಿದ್ದರಿಂದ ಪಾಕಿಸ್ತಾನದ ಆರ್ಥಿಕ ವಹಿವಾಟು 350 ಶತಕೋಟಿ ಡಾಲರ್ ಗಡಿಯಲ್ಲಿ ಸಣ್ಣ ಚೇತರಿಕೆಯೊಂದಿಗೆ ಸಾಗಿದೆ ಎಂದೆನ್ನಲಾಗಿದೆ.

ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಮೈಸೂರು– ಹುಣಸೂರು ರಸ್ತೆ ತಡೆದು ರೈತರ ಆಕ್ರೋಶ



ಮೈಸೂರು, ಸೆ.1(ಎಸ್‌ಬಿಡಿ)– ತಮಿಳುನಾಡಿಗೆ ನೀರು ಹರಿಸದಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಮೈಸೂರು ತಾಲೂಕು ಘಟಕದ ವತಿಯಿಂದ ಶುಕ್ರವಾರ ಮೈಸೂರು–ಹುಣಸೂರು ರಸ್ತೆ ತಡೆದು ಪ್ರತಿಭಟನೆ ನಡೆಸಲಾಯಿತು.

ತಾಲೂಕಿನ ಇಲವಾಲದಲ್ಲಿ ಕೆಲ ಕಾಲ ರಸ್ತೆ ತಡೆದು ಪ್ರತಿಭಟನೆ ನಡೆಸಿದ ರೈತರು, ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಇಲ್ಲಿನ ಜಲಾಶಯಗಳಲ್ಲಿನ ವಾಸ್ತವ ಸ್ಥಿತಿಯನ್ನು ನ್ಯಾಯಾಲಯಕ್ಕೆ ತಿಳಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಅಧಿಕಾರಿಗಳೂ ಸಮರ್ಪಕ ಮಾಹಿತಿ ಕಲ್ಪಿಸುತ್ತಿಲ್ಲ. ಇನ್ನು ಕರ್ನಾಟಕದ ಪರಿಸ್ಥಿತಿ ತಿಳಿದಿದ್ದರೂ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಸ್ತೆ ತಡೆಯಿಂದಾಗಿ ಕೆಲಕಾಲ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು. ಹೆದ್ದಾರಿಯ ಎರಡೂ ಕಡೆ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬಳಿಕ ಇಲವಾಲ ಠಾಣೆ ಪೊಲೀಸರು, ಪ್ರತಿಭಟನಾಕಾರರಿಗೆ ಪರಿಸ್ಥಿತಿ ಬಗ್ಗೆ ಮನವರಿಕೆ ಮಾಡಿ, ಅವರನ್ನು ತೆರವು ಮಾಡಿಸಿದರು. ಬಳಿಕ ಇಲವಾಲ ನಾಡಕಚೇರಿ ಉಪ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹಕ್ಕೊತ್ತಾಯ ಪತ್ರವನ್ನು ಸಲ್ಲಿಸಿದರು.

ಸಂಘದ ಜಿಲ್ಲಾ ಮುಖಂಡ ಪಿ.ಮರಂಕಯ್ಯ, ಮೈಸೂರು ತಾಲೂಕು ಅಧ್ಯಕ್ಷ ಆನಂದೂರು ಪ್ರಭಾಕರ್, ಗೌರವಾಧ್ಯಕ್ಷ ನಾಗನಹಳ್ಳಿ ವಿಜಯೇಂದ್ರ, ಪ್ರಧಾನ ಕಾರ್ಯದರ್ಶಿ ಮಂಡಕಳ್ಳಿ ಮಹೇಶ್, ಸಂಘಟನಾ ಕಾರ್ಯದರ್ಶಿ ಎ.ರಾಘವೇಂದ್ರ, ನೇತ್ರಾವತಿ ಸೇರಿದಂತೆ ಅನೇಕ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಿಎಂಗೆ ಆಗ್ರಹ: ಮಳೆ ಕೊರತೆಯಿಂದಾಗಿ ರಾಜ್ಯದ ಜಲಾಶಯಗಳ ನೀರಿನ ಮಟ್ಟ ಗಣನೀಯವಾಗಿ ಕುಸಿದಿರುವುದು ಕಳವಳಕಾರಿ ಸಂಗತಿ. ಕಾವೇರಿ ನೀರು ನಿರ್ವಹಣಾ ಸಮಿತಿ ನಿರ್ದೇಶನದಂತೆ ರಾಜ್ಯದ ಜಲಾಶಯಗಳಿಂದ ತಮಿಳುನಾಡಿಗೆ 15 ದಿನಗಳ ವರೆಗೆ ನಿತ್ಯ 5 ಸಾವಿರ ಕ್ಯುಸೆಕ್ ನೀರು ಹರಿಸಿದರೆ ಅಚ್ಚುಕಟ್ಟಿನ ಬೆಳೆ ಉಳಿಸುವುದಿರಲಿ, ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುತ್ತದೆ. ಈ ಸಂಕಷ್ಟದ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಹರಿಸದಿರಲು ಸ್ಪಷ್ಟ ತೀರ್ಮಾನ ಕೈಗೊಂಡು, ಕಾನೂನು ಹೋರಾಟ ನಡೆಸಬೇಕು. ಸಂಕಷ್ಟ ಸೂತ್ರದ ಸ್ಪಷ್ಟ ಮಾನದಂಡ ಇಲ್ಲದಿರುವುದು ಈ ಸಮಸ್ಯೆಗೆ ಮೂಲ ಕಾರಣ. ಸ್ಪಷ್ಟ ಸಂಕಷ್ಟ ಸೂತ್ರ ರೂಪಿಸುವಂತೆ ಕೇಂದ್ರದ ಮೇಲೆ ಒತ್ತಡ ತರಬೇಕು. ಒಟ್ಟಾರೆ ರಾಜ್ಯದ ರೈತರ ರಕ್ಷಣೆಗೆ ಸೂಕ್ತ ಕ್ರಮ ವಹಿಸಬೇಕು ಎಂದು ಸಿಎಂಗೆ ಸಲ್ಲಿಸಿದ ಪತ್ರದಲ್ಲಿ ಆಗ್ರಹಿಸಲಾಗಿದೆ.

ಇಸ್ರೋದಿಂದ ತಿರುಪತಿಯಲ್ಲಿ ಮತ್ತೆ ಪೂಜೆ



ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ವತಿಯಿಂದ ಚಂದ್ರಯಾನ–3 ಸಲುವಾಗಿ ತಿರುಪತಿಯಲ್ಲಿ ಪೂಜೆ ನಡೆದಿದ್ದು, ಇದೀಗ ಸೂರ್ಯಯಾನ ವಿಚಾರದಲ್ಲಿ ಮತ್ತೊಮ್ಮೆ ತಿರುಪತಿಯಲ್ಲಿ ಪೂಜೆ ನಡೆದಿದೆ.

ಇಸ್ರೋ ಅಧ್ಯಕ್ಷ ಆರ್. ಸೋಮನಾಥ್ ಆಂಧ್ರಪ್ರದೇಶದ ತಿರುಪತಿಯ ಚೆಂಗಲಮ್ಮ ಪರಮೇಶ್ವರಿ ದೇವಸ್ಥಾನದಲ್ಲಿ ಪೂಜೆ ನಡೆಸಿದ್ದಾರೆ. ಇಸ್ರೋದ ಉದ್ದೇಶಿತ ಸೂರ್ಯಯಾನ ಆದಿತ್ಯ ಎಲ್–1 ಮಿಷನ್ ಸಲುವಾಗಿ ಅವರು ಈ ಪೂಜೆಯನ್ನು ಕೈಗೊಂಡಿದ್ದಾರೆ ಎನ್ನಲಾಗಿದೆ.

ಬೆಳಗ್ಗೆ 7.30ಕ್ಕೆ ದೇವಸ್ಥಾನಕ್ಕೆ ಬಂದಿದ್ದ ಸೋಮನಾಥ್, ಪೂಜೆ ಸಲ್ಲಿಸಿ ಪ್ರಾರ್ಥನೆ ಕೈಗೊಂಡರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಸೆ.2ರಂದು ಬೆಳಗ್ಗೆ 11.50ಕ್ಕೆ ಆದಿತ್ಯ ಎಲ್–1 ಮಿಷನ್ ಉಡಾವಣೆ ಆಗಲಿರುವ ಕುರಿತು ಮಾಹಿತಿ ನೀಡಿದರು. ಚಂದ್ರಯಾನ–3ರ ಉಡಾವಣೆಯ ಹಿಂದಿನ ರಾತ್ರಿ ಇಸ್ರೋ ಅಧ್ಯಕ್ಷರು ಇದೇ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿದ್ದರು. ಇಸ್ರೋ ಮುಖ್ಯಸ್ಥರು ಬಾಹ್ಯಾಕಾಶ ನೌಕೆ ಉಡಾವಣೆ ಸಂದರ್ಭದಲ್ಲೆಲ್ಲ ಈ ದೇವಸ್ಥಾನಕ್ಕೆ ಬಂದು ದರ್ಶನ ಪಡೆದು ಪ್ರಾರ್ಥನೆ ಸಲ್ಲಿಸುವುದು 15 ವರ್ಷಗಳಿಂದ ಪದ್ಧತಿ ಆಗಿದೆ ಎಂದು ಚೆಂಗಲಮ್ಮ ಪರಮೇಶ್ವರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ ರೆಡ್ಡಿ ತಿಳಿಸಿದ್ದಾರೆ.

ಪಂಜಿನ ಮೆರವಣಿಗೆ ಮೂಲಕ ತಮಿಳ್ನಾಡಿಗೆ ನೀರು ಬಿಡುವುದಕ್ಕೆ ಖಂಡನೆ



ಮೈಸೂರು, ಸೆ.1(ಎಸ್‌ಬಿಡಿ)– ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಪಂಜಿನ ಮೆರವಣಿಗೆ ನಡೆಸುವ ಮೂಲಕ ತಮಿಳುನಾಡಿಗೆ ನೀರು ಹರಿಸುವ ಸರ್ಕಾರದ ಕ್ರಮವನ್ನು ಖಂಡಿಸಿದರು.

ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿಯಿಂದ ದೊಡ್ಡಗಡಿಯಾರದವರೆಗೆ ಅಲ್ಲಿಂದ ವಾಪಸ್ ದೇವಾಲಯದವರೆಗೆ ಪಂಜಿನ ಮೆರವಣಿಗೆ ನಡೆಸಲಾಯಿತು. ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ರೈತರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಯಾವುದೇ ಕಾರಣಕ್ಕೂ ರಾಜ್ಯದ ರೈತರ ಜೀವನಕ್ಕೆ ಬರೆ ಎಳೆದು ತಮಿಳುನಾಡಿಗೆ ನೀರು ಹರಿಸಬಾರದು ಎಂದು ಆಗ್ರಹಿಸಿದರು.

ತಡೆದ ಪೊಲೀಸರು: ಪಂಜು ಹಿಡಿದಿದ್ದ ರೈತರು ಕೆ.ಆರ್.ವೃತ್ತದತ್ತ ಹೆಜ್ಜೆ ಹಾಕಿದರು. ಆದರೆ ಅಲ್ಲಿ ಯಾವುದೇ ಪ್ರತಿಭಟನೆಯನ್ನು ನಿರ್ಬಂಧಿಸಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಬ್ಯಾರಿಕೇಡ್ ಅಳವಡಿಸಿದ್ದರು. ಆದರೂ ಬ್ಯಾರಿಕೇಡ್ ಭೇದಿಸಿ, ಕೆ.ಆರ್.ವೃತ್ತಕ್ಕೆ ತೆರಳಲು ಪ್ರಯತ್ನಿಸಿದ ರೈತರನ್ನು ಪೊಲೀಸರು ತಡೆದು, ಮನವೊಲಿಸಿದರು. ಈ ವೇಳೆ ಕೆಲ ಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು. ಆದರೆ ದೇವರಾಜ ಠಾಣೆ ಪೊಲೀಸರು, ರಸ್ತೆಯಿಂದ ರೈತರನ್ನು ತೆರವು ಮಾಡಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಇದಕ್ಕೂ ಮುನ್ನ ಮಾತನಾಡಿದ ಕುರುಬೂರು ಶಾಂತಕುಮಾರ್, ರಾಜ್ಯ ಸರ್ಕಾರ ಹಾಗೂ ಜಲಸಂಪನ್ಮೂಲ ಸಚಿವರ ವಿರುದ್ಧ ಹರಿಹಾಯ್ದರು. ಭೀಮಾ, ಕಾವೇರಿ ಸೇರಿದಂತೆ ರಾಜ್ಯದ ಎಲ್ಲಾ ನದಿ ನೀರಿನ ವಿಚಾರದಲ್ಲೂ ರೈತರಿಗೆ ದ್ರೋಹವಾಗುತ್ತಿದೆ. ಜಲಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಚುನಾವಣಾ ಪೂರ್ವದಲ್ಲಿ ನೀಡಿದ್ದ ವಾಗ್ದಾನ ಮರೆತಿದ್ದಾರೆ. ರಾಜ್ಯಕ್ಕೆ ಮೇಕೆದಾಟು ಯೋಜನೆ ಬೇಕೇ ಬೇಕು ಎಂದು ನಾಟಕೀಯ ಪಾದಯಾತ್ರೆ ನಡೆಸಿದರು. ಸರ್ಕಾರ ಬಂದ ಕೂಡಲೇ ಯೋಜನೆ ಅನುಷ್ಠಾನಗೊಳಿಸುವುದಾಗಿ ಭರವಸೆ ನೀಡಿದರು. ಆದರೆ ಅವರು ಈಗ ಮಾಡುತ್ತಿರುವುದೇನು?. ಮೇಕೆದಾಟು ಯೋಜನೆ ಅನುಷ್ಠಾನದ ಮಾತಿರಲಿ, ಅದಕ್ಕೆ ಬೇಕಾದ ಅನುದಾನವನ್ನೇ ಬಜೆಟ್‌ನಲ್ಲಿ ಇಟ್ಟಿಲ್ಲ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಕೃಷಿ ಕ್ಷೇತ್ರದ ಅನುದಾನವನ್ನೂ ಕಡಿತ ಮಾಡಿದ್ದಾರೆ. ಕುಡಿಯುವ ಉದ್ದೇಶಕ್ಕೆ ನೀರನ್ನು ಬಳಸಿಕೊಳ್ಳಬಹುದು ಎಂದು ಸುಪ್ರೀಂಕೋರ್ಟ್ ಸೂಚಿಸಿದ್ದರೂ ಆ ನಿಟ್ಟಿನಲ್ಲಿ ಯೋಜನೆ ರೂಪಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡರಾದ ಅತ್ತಹಳ್ಳಿ ದೇವರಾಜು, ಬರಡನಪುರ ನಾಗರಾಜು, ಭಾಗ್ಯರಾಜ್, ಪ್ರಸಾದ್ ನಾಯಕ್, ವೀರನಗೌಡ ಪಾಟೀಲ್, ಜಿ.ವಿ.ಲಕ್ಷ್ಮೀ ದೇವಿ, ಚೇತನ್, ರಮೇಶ್ ಹೂಗಾರ್, ಲಕ್ಷ್ಮಣ ಮತ್ತಿತರರು ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಮಿತ್ರ ಶನಿವಾರ 2 ಸೆಪ್ಟೆಂಬರ್ 2023

ಮಂಡ್ಯ ಜಿಲ್ಲೆಯಾದ್ಯಂತ ಭುಗಿಲೆದ್ದ ಕಾವೇರಿ ಹೋರಾಟ

ಮಂಡ್ಯ,ಸೆ.1– ತಮಿಳುನಾಡಿಗೆ ನಿರಂತರವಾಗಿ ಕಾವೇರಿ ನೀರು ಬಿಡುಗಡೆ ಮಾಡುತ್ತಿರುವ ಹಿನ್ನಲೆಯಲ್ಲಿ ಕಾವೇರಿ ಕೊಳ್ಳದ ರೈತರು, ಹೋರಾಟಗಾರರು, ಪ್ರಗತಿಪರರ ಆಕ್ರೋಶದ ಕಟ್ಟೆಯೊಡೆದಿದ್ದು, ಜಿಲ್ಲೆಯ ಹಲವೆಡೆ ಭಾರೀ ಪ್ರತಿಭಟನೆ ಮುಂದುವರೆದಿದೆ. ಮಂಡ್ಯ ನಗರದಲ್ಲಿ ಹಿತರಕ್ಷಣಾ ಸಮಿತಿ ಬಾಯಿ ಬಡಿದುಕೊಂಡು ಧರಣಿ ನಡೆಸಿದರೆ, ಧರಣಿಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಭಾಗಿಯಾಗಿ ಬೆಂಬಲ ಸೂಚಿಸಿದ್ದಾರೆ. ಮತ್ತೊಂದೆಡೆ ರೈತಸಂಘ ಬೆಂಗಳೂರು– ಮೈಸೂರು ಹೆದ್ದಾರಿ ತಡೆದು ಹೋರಾಟ ನಡೆಸಿದೆ. ಅತ್ತ ಶ್ರೀರಂಗಪಟ್ಟಣದಲ್ಲಿ ಬಾರುಕೋಲು ಚಳವಳಿ ನಡೆದಿದ್ದು, ಕೆಆರ್‌ಎಸ್‌ನಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ಹೋರಾಟ ಮುಂದುವರೆದು, ಸುಪ್ರೀಂಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸುವುದಾಗಿ ದರ್ಶನ್ ಹೇಳಿದ್ದಾರೆ. ನಾಳೆ ಮಂಡ್ಯ ನಗರದಲ್ಲಿ ಜೆಡಿಎಸ್ ಜಿಲ್ಲಾ ಘಟಕ ನೀರು ಬಿಡುಗಡೆ ವಿರೋಧಿಸಿ ಭಾರೀ ಪ್ರತಿಭಟನೆ ಹಮ್ಮಿಕೊಂಡಿದ್ದು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಆಗಮಿಸುವ ಸಾಧ್ಯತೆ ಇದೆ.

ಹಿತರಕ್ಷಣಾ ಸಮಿತಿ ಹೋರಾಟದ 2ನೇ ದಿನದಲ್ಲಿ ಸಿ.ಎಸ್. ಪುಟ್ಟರಾಜು ಭಾಗಿ



ಮಂಡ್ಯ: ತಮಿಳುನಾಡಿಗೆ ಪ್ರತಿನಿತ್ಯ ಐದು ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡಬೇಕೆಂದು ಕಾವೇರಿ ನದಿ ನೀರು ಪ್ರಾಧಿಕಾರ ಆದೇಶ ಮಾಡಿರುವುದನ್ನು ವಿರೋಧಿಸಿ ಜಿಲ್ಲಾ ರೈತ ರಕ್ಷಣಾ ಸಮಿತಿ ನಡೆಸುತ್ತಿರುವ ಪ್ರತಿಭಟನಾ ಧರಣಿ ಎರಡನೇ ದಿನವೂ ಮುಂದುವರೆದಿದ್ದು, ಬಾಯಿ ಬಡಿದುಕೊಂಡು ಕಾವೇರಿ ನದಿ ನೀರಿನ ವಿಚಾರದಲ್ಲಿ ಆಗುತ್ತಿರುವ ಅನ್ಯಾಯವನ್ನು ವಿರೋಧಿಸಿದರು.

ನಗರದ ಸರ್‌ಎಂವಿ ಪ್ರತಿಮೆ ಎದುರು ರೈತರು, ಕನ್ನಡಪರ ಹೋರಾಟ ಗಾರರು ಸೇರಿ ವಿವಿಧ ಸಂಘ–ಸಂಸ್ಥೆಗಳ ಕಾರ್ಯಕರ್ತರು 'ಅಯ್ಯಯ್ಯೋ ಅನ್ಯಾಯ' ಎಂದು ಬಾಯಿ ಬಡಿದುಕೊಂಡು ಆಕ್ರೋಶ ವ್ಯಕ್ತಪಡಿಸಿದರು. ಜೊತೆಗೆ ನೀರು ಬಿಡುಗಡೆ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಮತ್ತು ಸಂಕಷ್ಟ ಕಾಲದಲ್ಲಿ ಮಧ್ಯ ಪ್ರವೇಶ ಮಾಡದ ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದ ಪ್ರತಿಭಟನಾಕಾರರು, ಸಂಸದೆ ಸುಮಲತಾ ಅಂಬರೀಶ್ ಮತ್ತು ಜಿಲ್ಲೆಯ ಶಾಸಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಧರಣಿಯಲ್ಲಿ ಪಾಲ್ಗೊಂಡಿದ್ದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ತಮಿಳುನಾಡು ಒತ್ತಡ ತಂತ್ರದ ಹಿನ್ನೆಲೆಯಲ್ಲಿ ಕಾವೇರಿ ನದಿ ನೀರು ಪ್ರಾಧಿಕಾರ ಪ್ರತಿನಿತ್ಯ ಐದು ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡಬೇಕೆಂದು ಆದೇಶ ಮಾಡಿರುವುದು ಅವೈಜ್ಞಾನಿಕ. ಕಾವೇರಿ ಕೊಳ್ಳದ ಜಲಾಶಯಗಳಿಂದ ಹರಿಸುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಈಗಾಗಲೇ ತಮಿಳುನಾಡಿಗೆ 13 ಟಿಎಂಸಿ ನೀರು ಹರಿದುಹೋಗಿದೆ, ಇದೀಗ 7 ಟಿಎಂಸಿ ನೀರನ್ನು ಹರಿಸಲಾಗುತ್ತಿದೆ. ಜಲಾಶಯದಲ್ಲಿ ನೀರಿನ ಪ್ರಮಾಣ ದಿನೇ ದಿನೇ ಕುಸಿತ ಕಾಣುತ್ತಿದ್ದು, ಇದೇ ಪರಿಸ್ಥಿತಿ ಮುಂದು ವರೆದರೆ ಬೆಳೆದು ನಿಂತಿರುವ ಬೆಳೆ ರಕ್ಷಣೆಗೆ ನೀರು ಬಿಡುವುದಿರಲಿ, ಕುಡಿಯುವ ನೀರು ಇಲ್ಲದಂತಾಗುತ್ತದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ಕನ್ನಡಿಗರ ಬಗ್ಗೆಗಿನ ಆಲಸ್ಯ ಮತ್ತು ತಮಿಳುನಾಡು ಒಲೈಕೆಯ ಧೋರಣೆಯಿಂದ ಕರ್ನಾಟಕ ರಾಜ್ಯದ ರೈತರ ಬಲಿಪಶು ಆಗುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಧರಣಿಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿಯ ಸುನಂದಾ ಜಯರಾಂ, ಬೇಕರಿ ರಮೇಶ್, ಕೆ.ಬೋರಯ್ಯ, ಕೀಲಾರ ಕೃಷ್ಣ, ಕನ್ನಡ ಸೇನೆ ಮಂಜುನಾಥ್, ಜಯ ಕರ್ನಾಟಕ ಯೋಗಣ್ಣ, ರೈತ ಸಂಘದ ಇಂಡುವಾಳು ಚಂದ್ರಶೇಖರ್, ಎಂ.ಎಲ್. ತುಳಸೀದರ್. ಇಂಡುವಾಳು ಬಸವ ರಾಜ್, ಕರವೇ ಶಂಕರೇಗೌಡ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಬೆಂಗಳೂರು– ಮೈಸೂರು ರಸ್ತೆ ತಡೆದು ರೈತ ಸಂಘ ಆಕ್ರೋಶ



ಮಂಡ್ಯ: ಜಿಲ್ಲೆಯ ಜೀವನಾಡಿ ಕೃಷ್ಣರಾಜಸಾಗರ ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ವಿರೋಧಿಸಿ ರೈತ ಸಂಘದ ಕಾರ್ಯಕರ್ತರು ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ರಸ್ತೆ ತಡೆ ನಡೆಸಿ, ವಾಹನ ಸಂಚಾರಕ್ಕೆ ಅಡ್ಡಿಪಡಿಸಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ರೈತರ ದಿಢೀರ್ ಪ್ರತಿಭಟನೆ ಹಿನ್ನೆಲೆಯಲ್ಲಿ ವಾಹನ ಸಂಚಾರ ವ್ಯವಸ್ಥೆಯಲ್ಲಿ ಅಸ್ತವ್ಯಸ್ಥ ಉಂಟಾಯಿತು. ಸರ್ಕಾರಿ ಬಸ್‌ಗಳು ಮುಂದೆ ಸಂಚರಿಸಲು ಮುಂದಾದಾಗ ಪ್ರತಿಭಟನಾಕಾರರು ಬಸ್ ಮುಂದೆ ಕುಳಿತು ಅಡ್ಡಿಪಡಿಸಿದರು. ಕಾವೇರಿ ಕೊಳ್ಳದ ರೈತರ ಹಿತ ಬದಿಗೊತ್ತಿ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರ ರೈತ ದ್ರೋಹಿಯಾಗಿದೆ ಎಂದು ಧಿಕ್ಕಾರದ ಘೋಷಣೆ ಕೂಗಿ, ಕೇಂದ್ರ ಸರ್ಕಾರ ಸಂಕಷ್ಟ ಕಾಲದಲ್ಲಿ ಮಧ್ಯಪ್ರವೇಶಿಸಬೇಕಾಗಿತ್ತು. ಆದರೆ ಕರ್ನಾಟಕದ ವಿಚಾರದಲ್ಲಿ ನಿರಂತರವಾಗಿ ಅನ್ಯಾಯ ಮಾಡುತ್ತಿದೆ ಎಂದು ಕಿಡಿಕಾರಿದರು.

ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ಮತ್ತಷ್ಟು ದಿನ ಮುಂದೂಡುವುದು. ತಮಿಳುನಾಡಿಗೆ ಹೆಚ್ಚಿನ ನೀರು ಹರಿಯಲಿ ಎಂಬ ಹುನ್ನಾರವಾಗಿದೆ. ರಾಜ್ಯದ ಜಲಾಶಯಗಳ ವಾಸ್ತವ ಪರಿಸ್ಥಿತಿ ಅರಿಯಲು ನೀರಾವರಿ ತಜ್ಞರ ತಂಡ ಕಳುಹಿಸಿಕೊಡಬೇಕು. ಜಲಾಶಯದಲ್ಲಿರುವ ನೀರಿನ ಲಭ್ಯತೆ ಬಗ್ಗೆ ತಿಳಿದುಕೊಳ್ಳಲಿ. ಅದನ್ನು ಬಿಟ್ಟು ನೀರು ಹರಿಸಲು ಪದೇ ಪದೇ ಆದೇಶ ಮಾಡುವುದು ಮಲತಾಯಿ ಧೋರಣೆ ಅಲ್ಲವೇ? ಎಂದು ಪ್ರಶ್ನಿಸಿದ ಪ್ರತಿಭಟನಾನಿರತ ರೈತರು, ರಾಜ್ಯ ಸರ್ಕಾರ ಯಾವುದಕ್ಕೂ ಮಣಿಯದೆ ರೈತರ ಹಿತ ಕಾಪಾಡಲು ಮುಂದಾಗಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ರೈತ ಸಂಘದ ಮರಿ ಚೆನ್ನಪ್ಪ, ವಿಜಯ್‌ಕುಮಾರ್, ಬಿದರಕೋಟೆ ರಮೇಶ್, ಇಂಡುವಾಳು ಸಿದ್ದೇಗೌಡ, ಅಣ್ಣೂರು ಮಹೇಂದ್ರ ರಾಮಕೃಷ್ಣೇಗೌಡ, ಜವರೇಗೌಡ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಕೆಆರ್‌ಎಸ್‌ನಲ್ಲಿ ಮೇಣದಬತ್ತಿ ಹಿಡಿದು ಪ್ರತಿಭಟನೆ



ಶ್ರೀರಂಗಪಟ್ಟಣ, ಸೆ.1– ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ರೈತ ಸಂಘಟನೆಗಳು ಮೇಣದ ಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು.

ತಾಲೂಕಿನ ಕೆಆರ್‌ಎಸ್ ಜಲಾಶಯದ ಬೃಂದಾವನ ಪ್ರವೇಶದ್ವಾರದಲ್ಲಿ ಮೈಸೂರು, ಕೊಡಗು, ಮಂಡ್ಯ ಸೇರಿದಂತೆ ಇತರೆ ಜಿಲ್ಲೆಗಳಿಂದ ಆಗಮಿಸಿದ್ದ ನೂರಾರು ಮಂದಿ ಮೇಣದ ಬತ್ತಿ ಹಿಡಿದು ಸರ್ಕಾರದ ನಡೆಯನ್ನು ತೀವ್ರವಾಗಿ ಖಂಡಿಸಿದರು.

ಅಣೆಕಟ್ಟೆಯಲ್ಲಿ ನೀರಿನ ಪ್ರಮಾಣ ಕ್ಷೀಣಿಸಿದ್ದರೂ, ಕನ್ನಂಬಾಡಿ ಅಣೆಕಟ್ಟೆಯಿಂದ ನೀರು ಬಿಡುವಂತೆ ಸೂಚನೆ ನೀಡಿರುವ ಕಾವೇರಿ ನಿರ್ವಹಣಾ ಪ್ರಾಧಿಕಾರ ಹಾಗೂ ನೀರು ಬಿಡುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಧರಣಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಜಿಲ್ಲಾಧ್ಯಕ್ಷ ಕೆಂಪುಗೌಡ, ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ, ಶ್ರೀರಂಗಪಟ್ಟಣ ತಾಲೂಕು ಅಧ್ಯಕ್ಷ ಕೃಷ್ಣೇಗೌಡ, ಪಾಂಡವಪುರ ತಾಲೂಕು ಅಧ್ಯಕ್ಷ ಪಿ.ನಾಗರಾಜು, ಕಾರ್ಯದರ್ಶಿ ವಿಜಿಕುಮಾರ್, ಪಾಲಹಳ್ಳಿ ರಾಮಣ್ಣ, ಕಡತನಾಳು ಬಾಲು, ಬಲರಾಮು, ಕಟ್ಟೇರಿ ಮಹಾದೇವು ಸೇರಿದಂತೆ ವಿವಿದೆಡೆಗಳಿಂದ ನೂರಾರು ರೈತರು ಭಾಗವಹಿಸಿದ್ದರು.

ಶ್ರೀರಂಗಪಟ್ಟಣದಲ್ಲಿ ಬಾರುಕೋಲು ಚಳವಳಿ

ಶ್ರೀರಂಗಪಟ್ಟಣ: ಶ್ರೀರಂಗಪಟ್ಟಣದಲ್ಲಿ ಶುಕ್ರವಾರ ರೈತರು ಬಾರುಕೋಲು ಚಳವಳಿ ನಡೆಸಿ ಆಳುವ ಸರ್ಕಾರಕ್ಕೆ ಚಾಟಿ ಬೀಸಿದರು. ಭೂಮಿತಾಯಿ ಹೋರಾಟ ಸಮಿತಿಯ ವತಿಯಿಂದ ಬಿಜೆಪಿ ಮುಖಂಡ ಕೆ.ಎಸ್.ನಂಜುಂಡೇಗೌಡ ನೇತೃತ್ವದಲ್ಲಿ ಮೈಸೂರು– ಬೆಂಗಳೂರು ಹೆದ್ದಾರಿಯ ಕುವೆಂಪು ವೃತ್ತದಲ್ಲಿ ರೈತರು ಬಾರುಕೋಲು ಚಳವಳಿ ನಡೆಸಿ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ತಾಲೂಕು ಕಚೇರಿಗೆ ತೆರಳಿ ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ಎಸ್.ನಂಜುಂಡೇಗೌಡ, ತಮಿಳುನಾಡಿಗೆ ನೀರು ಬಿಟ್ಟಿರುವುದಕ್ಕೆ ರೈತರು ವಿರೋಧ ಮಾಡುತ್ತಿದ್ದರೂ ಮಾನಗೇಡಿ ಸರ್ಕಾರ ನಿರಂತರವಾಗಿ ನೀರು ಹರಿಸುತ್ತಿದೆ. ಕೆಆರ್‌ಎಸ್ ಜಲಾಶಯವನ್ನು ಬರಿದು ಮಾಡುವ ಮೂಲಕ ರೈತರ ಜೀವನವನ್ನು ನಾಶ ಮಾಡಲು ಹೊರಟಿದೆ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ಭೂಮಿತಾಯಿ ಹೋರಾಟ ಸಮಿತಿ ಅಧ್ಯಕ್ಷ ಕೃಷ್ಣೇಗೌಡ, ಮುಖಂಡರಾದ ಮಹದೇವು, ಕೃಷ್ಣ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಕಳೆದ 3 ದಿನಗಳಲ್ಲಿ ಮೆಟ್ಟೂರು ಡ್ಯಾಂ ಸೇರಿದ 1 ಟಿಎಂಸಿ ನೀರು

ಮಂಡ್ಯ: ಕೆಆರ್‌ಎಸ್ ಡ್ಯಾಂನಿಂದ ಪ್ರಾಧಿಕಾರದ ಸೂಚನೆಯಂತೆ ರಾಜ್ಯ ಸರ್ಕಾರ ನಿತ್ಯ ಐದು ಸಾವಿರಕ್ಕೂ ಹೆಚ್ಚು ಕ್ಯುಸೆಕ್ ನೀರು ಬಿಡುಗಡೆ ಮಾಡುತ್ತಿರುವ ಹಿನ್ನಲೆಯಲ್ಲಿ ಕಳೆದ ಮೂರು ದಿನಗಳಿಂದ 1 ಟಿಎಂಸಿ ನೀರು ತಮಿಳುನಾಡಿನ ಮೆಟ್ಟೂರು ಡ್ಯಾಂ ಸೇರಿದೆ.

ಸದ್ಯ ಕೆಆರ್‌ಎಸ್‌ನಲ್ಲಿ 23 ಟಿಎಂಸಿ ನೀರು ಮಾತ್ರ ನೀರು ಉಳಿದಿದ್ದು, ಮುಂದಿನ 12 ದಿನ ನೀರು ಹರಿಸಿದರೆ 6 ಟಿಎಂಸಿ ನೀರು ಖಾಲಿಯಾಗಲಿದ್ದು, 23 ಟಿಎಂಸಿಯಿಂದ 17 ಟಿಎಂಸಿಗೆ ನೀರಿನ ಮಟ್ಟ ಕುಸಿಯಲಿದೆ. ಈ ಪೈಕಿ 5 ಟಿಎಂಸಿ ಡೆಡ್ ಸ್ಟೋರೇಜ್ (ಬಳಕೆಗೆ ಯೋಗ್ಯವಲ್ಲದ ನೀರು) ಆಗಿದ್ದು, ಅಲ್ಲಿಗೆ ಉಳಿಯೋದು 12 ಟಿಎಂಸಿ ನೀರು ಮಾತ್ರ.

ಉಳಿಯುವ 12 ಟಿಎಂಸಿಯಲ್ಲಿ ಮಂಡ್ಯ ಜಿಲ್ಲೆಯ ರೈತರ ಬೆಳೆಗೆ ನೀರು ಕೊಡೋದು ಅಸಾಧ್ಯವಾಗಿದ್ದು, ನಾಲೆಗಳಿಗೆ ನೀರು ಬಿಡದಿದ್ದರೆ ಬೆಳೆದ ಕಬ್ಬು, ಬಿತ್ತಿರುವ ಭತ್ತ ನಾಶವಾಗಲಿದೆ. ನಾಲೆಗಳಿಗೆ ನೀರು ನಿಲ್ಲಿಸಿರುವುದರಿಂದ ಈಗಾಗಲೇ ಬೆಳೆಗಳು ಒಣಗುತ್ತಿದ್ದು, ಮಂಡ್ಯ, ಮೈಸೂರು, ಬೆಂಗಳೂರು ನಗರಗಳಿಗೆ ಕುಡಿಯುವ ನೀರಿಗೂ ಹಾಹಾಕಾರ ಬರಲಿದೆ.

ಜೆಡಿಎಸ್‌ನಿಂದ ಇಂದು ಬೃಹತ್ ಪ್ರತಿಭಟನೆ, ಮಾಜಿ ಪ್ರಧಾನಿ ದೇವೇಗೌಡ ಭಾಗಿ ಸಾಧ್ಯತೆ



ಮಂಡ್ಯ: ಕಾವೇರಿ ವಿಚಾರದಲ್ಲಿ ನಮ್ಮ ಜಿಲ್ಲೆ ರೈತರಿಗೆ ಅನ್ಯಾಯ ಆಗಬಾರದು. ಹಿಂದಿನಿಂದಲೂ ನಾವು ಹೋರಾಟ ಮಾಡಿಕೊಂಡು ಬಂದಿದ್ದು, ಈ ನಿಟ್ಟಿನಲ್ಲಿ ಶನಿವಾರ ಜೆಡಿಎಸ್ ವತಿಯಿಂದ ಬೃಹತ್ ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ರೈತ ಹಿತರಕ್ಷಣಾ ಸಮಿತಿ ವತಿಯಿಂದ ನಗರದ ಸರ್‌ಎಂವಿ ಪ್ರತಿಮೆ ಬಳಿ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ವಿರೋಧಿಸಿ ನಡೆಯುತ್ತಿರುವ ಧರಣಿಯಲ್ಲಿ ಶುಕ್ರವಾರ ಪಾಲ್ಗೊಂಡು ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದಿನಿಂದಲೂ ಜೆಡಿಎಸ್ ಕಾವೇರಿ ವಿಚಾರದಲ್ಲಿ ನಿರಂತರ ಹೋರಾಟ ಮಾಡಿಕೊಂಡು ಬಂದಿದೆ. ಈ ನಿಟ್ಟಿನಲ್ಲಿ ಮಂಡ್ಯದ ಸಿಲ್ವರ್ ಜ್ಯೂಬಲಿ ಪಾರ್ಕ್‌ನಿಂದ ಡಿಸಿ ಕಚೇರಿವರೆಗೆ ಮೆರವಣಿಗೆ ಹಮ್ಮಿಕೊಂಡಿದ್ದು, ಕಾವೇರಿ ವಿಚಾರದಲ್ಲಿ ಎಲ್ಲಾ ಜನಪ್ರತಿನಿಧಿಗಳು, ಹೋರಾಟ ಮಾಡಬೇಕು. ಸಂಸದೆ ಸುಮಲತಾ ಕೂಡ ಕಾವೇರಿ ವಿಚಾರದಲ್ಲಿ ಹೋರಾಟ ಮಾಡಬೇಕು ಎಂದು ಮನವಿ ಮಾಡಿದರು.

ದೇವೇಗೌಡ ಭಾಗಿ ಸಾಧ್ಯತೆ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ನಾಳೆ ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ ಜೆಡಿಎಸ್ ನಡೆಸಲಿರುವ ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರ ತಿಳಿಸಿದ್ದಾರೆ.

ನಾಳೆ ಬೆಳಿಗ್ಗೆ 11 ಗಂಟೆಗೆ ನಗರದ ಸಿಲ್ವರ್ ಜ್ಯುಬಿಲಿ ಪಾರ್ಕ್‌ನಿಂದ ಪ್ರತಿಭಟನಾ ಮೆರವಣಿಗೆ ನಡೆಯಲಿದ್ದು, ದೇವೇಗೌಡರ ನೇತೃತ್ವದಲ್ಲಿ ನಡೆಯಲಿರುವ ಹೋರಾಟಕ್ಕೆ ಪಕ್ಷಾತೀತವಾಗಿ ಎಲ್ಲಾ ಪಕ್ಷಗಳ ಮುಖಂಡರು ಹಾಗೂ ಹೋರಾಟಗಾರರು ಭಾಗವಹಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಮಹಾರಾಷ್ಟ್ರದಲ್ಲಿ ಮರಾಠಾ ಮೀಸಲಾತಿ ಕಿಚ್ಚಿಗೆ ಕರ್ನಾಟಕ ಸಾರಿಗೆ ಬಸ್‌ಗೆ ಬೆಂಕಿ



ಚಿಕ್ಕೋಡಿ, ಸೆ. 1– ಮಹಾರಾಷ್ಟ್ರದಲ್ಲಿ ಮರಾಠಾ ಮೀಸಲಾತಿ ಕಿಚ್ಚಿಗೆ ಕರ್ನಾಟಕ ಸಾರಿಗೆ ಬಸ್‌ಗೆ ಬೆಂಕಿ ಹಚ್ಚಲಾಗಿದೆ. ಔರಂಗಾಬಾದ್–ಹುಬ್ಬಳ್ಳಿ ಮಾರ್ಗದ ಕರ್ನಾಟಕ ಸಾರಿಗೆ ಬಸ್‌ಗೆ ಮಹಾರಾಷ್ಟ್ರದ ಜಾಲ್ನಾ ಜಿಲ್ಲೆಯ ಅಂಬಡ್ ತಾಲೂಕಿನ ವಡಿಗೋದ್ರಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಂಕಿ ಹಚ್ಚಲಾಗಿದೆ.

ಮರಾಠಾ ಮೀಸಲಾತಿಗೆ ಆಗ್ರಹಿಸಿ ನಡೆಯುತ್ತಿದ್ದ ಪ್ರತಿಭಟನೆ ವೇಳೆ ಹಿಂಸಾಚಾರ ಭುಗಿಲೆದ್ದಿದ್ದು, ಅದರ ಬಿಸಿ ಕರ್ನಾಟಕ ಸಾರಿಗೆ ಬಸ್‌ಗೆ ತಟ್ಟಿದೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಮರಾಠಾ ಸಮುದಾಯಕ್ಕೆ ಮೀಸಲಾತಿಗೆ ಆಗ್ರಹಿಸಿ ಜಾಲ್ನಾ ಜಿಲ್ಲೆಯ ಶಹಾಗಡ್‌ನಲ್ಲಿ ಕಳೆದ ನಾಲ್ಕು ದಿನಗಳಿಂದ ಪ್ರತಿಭಟನೆ ನಡೆಯುತ್ತಿದೆ.

ಪ್ರತಿಭಟನಾ ನಿರತರನ್ನು ನಿಯಂತ್ರಿಸಲು ಶುಕ್ರವಾರ ಪೊಲೀಸರು ತೆರಳಿದ ವೇಳೆ ಉದ್ರಿಕ್ತರು ಕಲ್ಲು ತೂರಾಟ ನಡೆಸಿ ದ್ದಾರೆ. ಕಲ್ಲು ತೂರಾಟ ಬಳಿಕ ಮಹಾರಾಷ್ಟ್ರ ಪೊಲೀಸರು ಲಾಠಿ ಚಾರ್ಜ್ ನಡೆಸಿದ್ದಾರೆ. ಲಾಠಿ ಚಾರ್ಜ್ ಬಳಿಕ ಜಾಲ್ನಾ ಜಿಲ್ಲೆಯ ವಡಿಗೋದ್ರಿ ಬಳಿ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ. ಈ ವೇಳೆ ಕೆಎಸ್‌ಆರ್‌ಟಿಸಿ ಬಸ್, ಮಹಾರಾಷ್ಟ್ರ ಸಾರಿಗೆ ಬಸ್ ಸೇರಿ ಆರು ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ. ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ 45 ಪ್ರಯಾಣಿಕರು ಪ್ರಯಾಣಿಸುತ್ತಿದ್ದರು. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಕರ್ನಾಟಕ ಸಾರಿಗೆ ಇಲಾಖೆ ಅಧಿಕಾರಿಗಳು ಮಹಾರಾಷ್ಟ್ರ ಪೊಲೀಸರ ಜೊತೆ ಸಂಪರ್ಕದಲ್ಲಿದ್ದು, ಪರಿಸ್ಥಿತಿಯ ಬಗ್ಗೆ ನಿಗಾ ವಹಿಸಿದ್ದಾರೆ.

ಎಫ್‌ಟಿಐಐ ನೂತನ ಅಧ್ಯಕ್ಷರಾಗಿ ನಟ ಮಾಧವನ್ ಆಯ್ಕೆ



ನವದೆಹಲಿ: ದಕ್ಷಿಣ ಭಾರತದ ಖ್ಯಾತ ನಟ ಆರ್.ಮಾಧವನ್ ಅವರನ್ನು ಭಾರತೀಯ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ(FTII) ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಛೇರ್ಮನ್ ಆಗಿ ನಾಮನಿರ್ದೇಶನಗೊಂಡಿದ್ದಾರೆ.

ಈ ಕುರಿತು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ಟ್ವೀಟ್ ಮಾಡಿ ತಿಳಿಸಿದ್ದಾರೆ. ಇತ್ತೀಚಿಗೆ ಮಾಧವನ್ ನಟನೆಯ ರಾಕೆಟ್ರಿ: ದಿ ನಂಬಿ ಎಫೆಕ್ಸ್ ಚಿತ್ರಕ್ಕೆ 69ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಲಭಿಸಿತ್ತು.

FTIIನ ನೂತನ ಅಧ್ಯಕ್ಷ ಹಾಗೂ ಛೇರ್ಮನ್ ಆಗಿ ನಾಮನಿರ್ದೇಶನಗೊಂಡ ಮಾಧವನ್ ಅವರಿಗೆ ಅಭಿನಂದನೆಗಳು. ನಿಮ್ಮ ಅನುಭವವು ಈ ಸಂಸ್ಥೆಯನ್ನು ಇನ್ನಷ್ಟು ಉತ್ಕೃಷ್ಟಗೊಳಿಸಿ ಧನಾತ್ಮಕ ಬದಲಾವಣೆಗಳೊಂದಿಗೆ ಹೊಸ ಎತ್ತರಕ್ಕೆ ಕೊಂಡೊಯ್ಯುತ್ತೀರಾ ಎಂದು ನಮಗೆ ಖಾತ್ರಿಯಿದೆ.

ನಿಮಗೆ ಶುಭಾಶಯಗಳು ಎಂದು ಸಚಿವ ಅನುರಾಗ್ ಠಾಕೂರ್ ಟ್ವೀಟ್ ಮಾಡಿದ್ದಾರೆ.

ಮಹಿಳೆಗೆ ಮೆಸೇಜ್ ಮಾಡಿದ್ದಕ್ಕೆ ಯುವಕನ ಹತ್ಯೆ ಪ್ರಕರಣಕ್ಕೆ ಬಿಗ್ ಟ್ವಿಸ್ಟ್

ಮನೆ ಕೊಡದ ಗ್ರಾಪಂ ಮಾಜಿ ಅಧ್ಯಕ್ಷನ ಮೇಲಿನ ಸೇಡಿಗಾಗಿ ಸ್ನೇಹಿತನನ್ನೇ ಹತ್ಯೆಗೈದ ಖತರ್ನಾಕ್‌ಗಳು!



ಮೃತ ಭಾನುಪ್ರಕಾಶ್



ದಿನೇಶ್



ಭೀಮಾ

ಹೆಚ್.ಡಿ.ಕೋಟೆ, ಸೆ.1(ಮಂಜು)– ಮಹಿಳೆಗೆ ಸಂದೇಶ ರವಾನೆ ಮಾಡಿದ್ದಕ್ಕೆ ಹತ್ಯೆ ಮಾಡಲಾಗಿದೆ ಎಂಬ ಪ್ರಕರಣವನ್ನು ಕೇವಲ ಒಂದೇ ದಿನದಲ್ಲಿ ಭೇದಿಸಿರುವ ಅಂತರಸಂತೆ ಠಾಣೆ ಪೊಲೀಸ ರು ಕೊಲೆಯಾದ ಯುವಕನ ಇಬ್ಬರು ಸ್ನೇಹಿತರನ್ನು ಬಂಧಿಸಿದ್ದಾರೆ.

ಕೊಲೆಯಾದ ಯುವಕ ಭಾನುಪ್ರಕಾಶ್ ಅಲಿಯಾಸ್ ಸಿದ್ದು, ಮಹಿಳೆಯೊಬ್ಬರಿಗೆ ಸಂದೇಶ ರವಾನೆ ಮಾಡಿದ ಪ್ರಕರಣದಲ್ಲಿ ಸಿಕ್ಕಿಬಿದ್ದು, ಗ್ರಾಮದಲ್ಲಿ ನ್ಯಾಯ ಪಂಚಾಯ್ತಿ ಆಗಿದ್ದನ್ನೇ ನೆಪವಾಗಿಟ್ಟುಕೊಂಡು, ಈತನನ್ನು ಕೊಲೆ ಮಾಡಿ ಆರೋಪವನ್ನು ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷನ ಮೇಲೆ ಹೊರಿಸುವ ಸಂಚು ಹೂಡಿ ಅದೇ ಗ್ರಾಮದ ಜಯರಾಮು ಎಂಬುವರ ಪುತ್ರ ದಿನೇಶ್ ಮತ್ತು ನಂಜುಂಡ ಎಂಬುವರ ಪುತ್ರ ಭೀಮ ಅವರುಗಳು ತಮ್ಮ ಸ್ನೇಹಿತ ಭಾನುಪ್ರಕಾಶ್‌ನನ್ನು ಹತ್ಯೆ ಮಾಡಿದ್ದಾರೆ ಎಂಬುದು ಬಯಲಾಗಿದ್ದು, ಅವರಿಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ದ್ವೇಷ ಏಕೆ?: ಈ ಹಿಂದೆ ಬೀಚನಹಳ್ಳಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿದ್ದ ಎನ್.ಸಿ. ಪ್ರಕಾಶ್ ಅವರು ತಮ್ಮ ಅವಧಿಯಲ್ಲಿ ಮನೆ ಮಂಜೂರು ಮಾಡಿಕೊಟ್ಟಿಲ್ಲ ಎಂಬ ಕಾರಣದಿಂದ ನೇರಳೆ ಗ್ರಾಮದ ದಿನೇಶ್ ಮತ್ತು ಭೀಮಾ, ಅವರ ಮೇಲೆ ದ್ವೇಷ ಸಾಧಿಸುತ್ತಿದ್ದರು ಎಂದು ಹೇಳಲಾಗಿದೆ.

ಈ ಮಧ್ಯೆ ಭಾನುಪ್ರಕಾಶ್ ಮಹಿಳೆಗೆ ಸಂದೇಶ ರವಾನೆ ಮಾಡಿದ ಪ್ರಕರಣದಲ್ಲಿ ಸಿಕ್ಕಿಬಿದ್ದು, ಗ್ರಾಮದಲ್ಲಿ ದೊಡ್ಡ ರಾದ್ಧಾಂತವೇ ಆಗಿತ್ತು. ಈ ಸಂಬಂಧ ಬುಧವಾರ ಗ್ರಾಮದಲ್ಲಿ ಹಿರಿಯರು ನ್ಯಾಯ ಪಂಚಾಯ್ತಿ ನಡೆಸಿ ಪ್ರಕರಣವನ್ನು ಇತ್ಯರ್ಥಪಡಿಸಿದ್ದರು. ಆದರೆ, ದಿನೇಶ್ ಮತ್ತು ಭೀಮಾ ಅವರುಗಳು ಈ ಪ್ರಕರಣದಲ್ಲಿ ಭಾನು ಪ್ರಕಾಶ್‌ನನ್ನು ಹತ್ಯೆ ಮಾಡಿ ಅದರ ಆರೋಪ ವನ್ನು ಗ್ರಾಪಂ. ಮಾಜಿ ಅಧ್ಯಕ್ಷ ಪ್ರಕಾಶ್ ಮೇಲೆ ಹೊರಿಸಲು ಸಂಚು ರೂಪಿಸಿದ್ದರು.

ಪ್ರಕರಣ ಸುಖಾಂತ್ಯವಾದ ನಂತರ ಮನೆಗೆ ತೆರಳಿದ್ದ ಭಾನುಪ್ರಕಾಶ್‌ಗೆ ಮೊಬೈಲ್‌ಗೆ ಕರೆ ಮಾಡಿ ಆತನನ್ನು ತಮ್ಮ ಬೈಕ್‌ನಲ್ಲೇ ಕಬಿನಿ ಜಲಾಶಯದ ಸೇತುವೆ ಬಳಿಯ ತಿರುವಿಗೆ ಕರೆದೊಯ್ದ ದಿನೇಶ್ ಮತ್ತು ಭೀಮಾ, ಸ್ನೇಹಿತ ಭಾನುಪ್ರಕಾಶ್‌ಗೆ ಮಚ್ಚು ತೋರಿಸಿ ಹೆದರಿಸಿದ್ದ ಲ್ಲದೇ, ಆತನ ಮೊಬೈಲ್‌ನಲ್ಲೇ 112 ಸಹಾಯವಾಣಿಗೆ ಕರೆ ಮಾಡಿಸಿ "ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಎನ್.ಸಿ. ಪ್ರಕಾಶ್ ನನ್ನನ್ನು ಕೊಲೆ ಮಾಡುತ್ತಿದ್ದಾರೆ ಕಾಪಾಡಿ" ಎಂದು ಹೇಳಿಸಿ ಕರೆ ಕಟ್ ಮಾಡಿಸಿದ್ದಲ್ಲದೇ, ಭಾನುಪ್ರಕಾಶ್‌ನಿಂದ "ನನ್ನ ಸಾವಿಗೆ ಗ್ರಾಪಂ ಮಾಜಿ ಅಧ್ಯಕ್ಷ ಎನ್.ಸಿ. ಪ್ರಕಾಶ್ ಕಾರಣ ಎಂದು ಬರೆಸಿದ ನಂತರ ಆತನನ್ನು ಕೊಚ್ಚಿ ಕೊಲೆ ಮಾಡಿ ಪತ್ರವನ್ನು ಭಾನುಪ್ರಕಾಶನ ಜೇಬಿನಲ್ಲಿಟ್ಟು, ನಂದಿನಾಥಪುರದ ಸಂಬಂಧಿಕರ ಮನೆಗೆ ತೆರಳಿದ್ದಾರೆ. ನಂತರ ಮಧ್ಯರಾತ್ರಿ 3 ಗಂಟೆ ಸುಮಾರಿನಲ್ಲಿ ಮತ್ತೆ ಸ್ಥಳಕ್ಕೆ ಆಗಮಿಸಿ ಭಾನುಪ್ರಕಾಶ್ ಶವವನ್ನು ಬೈಕ್‌ನಲ್ಲಿ ಕೊಂಡೊಯ್ದು ನೇರಳೆ ಗ್ರಾಮದ ಕಬಿನಿ ಬಲದಂಡೆ ನಾಲೆ ಬಳಿ ಬಿಸಾಕಿ ಮನೆ ಸೇರಿಕೊಂಡಿದ್ದಾರೆ.

ಮರುದಿನ (ಗುರು ವಾರ) ಭಾನುಪ್ರಕಾಶ್‌ನ ಶವವನ್ನು ಕಂಡ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಹಿಳೆಗೆ ಮೆಸೇಜ್ ರವಾನಿಸಿದ ಪ್ರಕರಣ ನ್ಯಾಯ ಪಂಚಾಯ್ತಿ ಮೂಲಕ ಇತ್ಯರ್ಥವಾಗಿದ್ದರೂ, ಆಕೆಯ ಕಡೆಯವರೇ ಈತನನ್ನು ಹತ್ಯೆ ಮಾಡಿದ್ದಾರೆ ಎಂಬ ಮಾತುಗಳು ಆ ಸಂದರ್ಭದಲ್ಲಿ ಕೇಳಿಬಂತು. ಪೊಲೀಸರು ಕೂಡ ಅದೇ ನಿಟ್ಟಿನಲ್ಲಿ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದರು.

ಅದೇ ವೇಳೆ ಭಾನುಪ್ರಕಾಶ್ ಬರೆದಿರುವ ಪತ್ರ ಸ್ವಲ್ಪ ಅನುಮಾನಕ್ಕೆ ಎಡೆಮಾಡಿಕೊಟ್ಟಿತ್ತು. ಭಾನುಪ್ರಕಾಶ್‌ನ ಮೊಬೈಲ್ ಪರಿಶೀಲಿಸಿದಾಗ, ಆತ ಕೊನೆಯದಾಗಿ 112 ಸಹಾಯವಾಣಿಗೆ ಕರೆ ಮಾಡಿರುವುದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಸಹಾಯವಾಣಿಯನ್ನು ಸಂಪರ್ಕಿಸಿದಾಗ ಭಾನುಪ್ರಕಾಶ್ ಕರೆ ಮಾಡಿ, "ಗ್ರಾಪಂ ಅಧ್ಯಕ್ಷ ತನ್ನನ್ನು ಕೊಲೆ ಮಾಡುತ್ತಿದ್ದಾರೆ, ಕಾಪಾಡಿ" ಎಂದು ಹೇಳಿದ್ದು ತಿಳಿದಿದೆ. ಅಲ್ಲದೇ ಅದಕ್ಕೂ ಮುನ್ನ ಆತನ ಮೊಬೈಲ್‌ಗೆ ಸ್ನೇಹಿತರು ಕರೆ ಮಾಡಿರುವುದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ದಿನೇಶ್ ಮತ್ತು ಭೀಮನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಇವರುಗಳು ಗ್ರಾಪಂ ಮಾಜಿ ಅಧ್ಯಕ್ಷ ಪ್ರಕಾಶ್ ಅವರನ್ನು ಕೊಲೆ ಪ್ರಕರಣದಲ್ಲಿ ಸಿಲುಕಿಸುವ ಸಲುವಾಗಿ ಸ್ನೇಹಿತನನ್ನೇ ಹತ್ಯೆ ಮಾಡಿದ್ದಾರೆ ಎಂಬುದು ಬಯಲಾಗಿದೆ.

ಅಂಗವಿಕಲರು, ಹಾಸಿಗೆ ಹಿಡಿದ ಪಿಂಚಣಿದಾರರಿಗೆ ಡಿಜಿಟಲ್ ಲೈಫ್ ಸರ್ಟಿಫಿಕೇಟ್

ಮೈಸೂರು, ಸೆ.1– ಪಿಂಚಣಿದಾರರಿಗೆ ಒದಗಿಸುವ ಸೌಲಭ್ಯವನ್ನು ಸುಧಾರಿಸುವ ಪ್ರಯತ್ನದಲ್ಲಿ, ಕಾರ್ಮಿಕ ಭವಿಷ್ಯ ನಿಧಿ ಸಂಘಟನೆಯ ಮೈಸೂರು ಕ್ಷೇತ್ರೀಯ ಕಚೇರಿ, ಅಂಗವಿಕಲರು ಮತ್ತು ಹಾಸಿಗೆ ಹಿಡಿದಿರುವ ಪಿಂಚಣಿದಾರರಿಗೆ ಡಿಜಿಟಲ್ ಲೈಫ್ ಸರ್ಟಿಫಿಕೇಟ್ (ಡಿಎಲ್‌ಸಿ) ಅನ್ನು ಸೆರೆ ಹಿಡಿಯುವ ಉಪಕ್ರಮವನ್ನು ಪ್ರಾರಂಭಿಸಿದೆ.

ಕಳೆದ ವರ್ಷ ಹಲವು ಹಿರಿಯ ನಾಗರಿಕರು ಸೌಲಭ್ಯ ಪಡೆದಿದ್ದರು. ಅಂತಹ ಎಲ್ಲಾ ಪಿಂಚಣಿದಾರರಿಗೆ ವಿವರಗಳನ್ನು ಪಿಪಿಓ ಸಂಖ್ಯೆ, ಪಿಂಚಣಿದಾರರ ಹೆಸರು ಮತ್ತು ವಸತಿ ವಿಳಾಸ) WhatsApp ಸಂಖ್ಯೆ 7892594813ಗೆ ಕಳುಹಿಸಲು ಮತ್ತೊಮ್ಮೆ ಕೋರಲಾಗಿದೆ. ಇದರಿಂದ ಡಿಎಲ್‌ಸಿ ಅನ್ನು ಸೆರೆ ಹಿಡಿಯಲು ಅಧಿಕಾರಿಗಳು ಮನೆಗೂ ಭೇಟಿ ನೀಡಬಹುದು. ಪಿಂಚಣಿದಾರರು, ಯಾವುದೇ ಕಚೇರಿ, ಬ್ಯಾಂಕ್ ಅಥವಾ ಸಿಎಸ್‌ಸಿ ಕೇಂದ್ರಗಳಿಗೆ ಭೇಟಿ ನೀಡದೆ ತಮ್ಮ ಡಿಎಲ್‌ಸಿ ಅನ್ನು ನವೀಕರಿಸಲು ಎಫ್‌ಎಟಿ (ಫೇಸ್ ಅಥೆಂಟಿಕೇಶನ್) ಅನ್ನು ಬಳಸಿಕೊಳ್ಳುವಂತೆ ಸೂಚಿಸಲಾಗಿದೆ. ಮೈಸೂರು ಕ್ಷೇತ್ರೀಯ ಕಚೇರಿಯ WhatsApp ಸಂಖ್ಯೆ 8105645793ಗೆ 'HI' ಸಂದೇಶವನ್ನು ಕಳುಹಿಸುವ ಮೂಲಕ ಪ್ರಕ್ರಿಯೆಯ ವಿವರವನ್ನು ಪಡೆಯಬಹುದು. ನಂತರ ಸಂಖ್ಯೆ 20 ಅನ್ನು ಆಯ್ಕೆ ಮಾಡಬಹುದು. ಈ ಮೂಲಕ ಮೈಸೂರು ಕ್ಷೇತ್ರೀಯ ಕಚೇರಿ, ಪಾಲುದಾರರಿಗೆ ಉತ್ತಮ ಸೌಲಭ್ಯ ಕಲ್ಪಿಸಲು ಬದ್ಧವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಲೇಷಿಯನ್ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ಗೆ ಮೈಸೂರಿಂದ 7 ಮಂದಿ



ವಿಜಯಾ ರಮೇಶ್



ಮಂಗಳಾ



ಭಾಗೀರಥಿ



ಜ್ಞಾನೇಶ್ವರ್



ನಾಗೇಂದ್ರ



ಥಾಮಸ್



ಬಲರಾಮೇಗೌಡ

ಮೈಸೂರು, ಸೆ.1– ಮೈಸೂರು ಮಾಸ್ಟರ್ಸ್ ಗೇಮ್ಸ್ ಅಂಡ್ ಅಸೋಸಿಯೇಷನ್(ಎಂಎಂಜಿಎ) ಅಧ್ಯಕ್ಷರಾದ ಅಂತರಾಷ್ಟ್ರೀಯ ಅಥ್ಲೀಟ್ ವಿಜಯಾ ರಮೇಶ್, ಮಂಗಳಾ ಪ್ರಕಾಶ್, ಭಾಗೀರಥಿ, ಬಲರಾಮೇಗೌಡ, ಥಾಮಸ್, ನಾಗೇಂದ್ರ ಹಾಗೂ ಜ್ಞಾನೇಶ್ವರ್, ಮಲೇಶಿಯಾದಲ್ಲಿ ಆ.16 ಮತ್ತು 17ರಂದು ನಡೆಯುವ 35ನೇ ಮಲೇಷಿಯನ್ ಇಂಟರ್ ನ್ಯಾಷನಲ್ ಓಪನ್ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಕ್ರೀಡಾಪಟುಗಳು ಆ.14ರಂದು ಮಲೇಷಿಯಾಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಓಟದ ಸ್ಪರ್ಧೆಯಲ್ಲಿ ಅಜಯ್ ಪೃಥ್ವಿರಾಜ್ ಪ್ರಥಮ



ಮೈಸೂರು, ಸೆ.1(ಎಸ್‌ಪಿಎನ್)– ಚಾಮುಂಡಿ ವಿಹಾರ ಮೈದಾನದಲ್ಲಿ ಮೈಸೂರು ದಕ್ಷಿಣ ವಲಯ ಬಿಇಓ ಕಚೇರಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಎನೆಡ್ಸಾ ಶಾಲೆಗಳ ಸಂಯುಕ್ತಾಶ್ರಯದಲ್ಲಿ ನಡೆದ ಹಿರಿಯ ಪ್ರಾಥಮಿಕ ಶಾಲಾ ಬಾಲಕ ಮತ್ತು ಬಾಲಕಿಯರ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಟೆರಿಷಿಯನ್ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿ ಅಜಯ್ ಪೃಥ್ವಿರಾಜ್ ಓಟದಲ್ಲಿ ಪ್ರಥಮ ಸ್ಥಾನಗಳಿಸಿದ್ದಾರೆ.

ನೈಪುಣ್ಯ ದಸರಾ ಚಿತ್ರಕಲಾ ಸ್ಪರ್ಧೆ ನೋಂದಣಿ ದಿನಾಂಕ ವಿಸ್ತರಣೆ

ಮೈಸೂರು, ಸೆ.1– ಮೈಸೂರು ಆರ್.ಟಿ.ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಸಂಸ್ಥೆ ವತಿಯಿಂದ ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಆಯೋಜಿಸಿರುವ 'ನೈಪುಣ್ಯ ದಸರಾ ಚಿತ್ರಕಲೆ ಸ್ಪರ್ಧೆ'ಗೆ ನೋಂದಣಿ ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

ಪೂರ್ವ ಪ್ರಾಥಮಿಕದಿಂದ ಪ್ರೌಢಶಾಲೆ ವರೆಗಿನ ಮಕ್ಕಳಿಗೆ ವಿವಿಧ ಹಂತಗಳಲ್ಲಿ ನಡೆಯಲಿರುವ ಸ್ಪರ್ಧೆಗೆ ನೋಂದಣಿ ಮಾಡಿಕೊಳ್ಳಲು ಸೆ.3ರವರೆಗೆ ಕಾಲಾವಕಾಶ ನೀಡಲಾಗಿತ್ತು ಆದರೆ ಹೆಚ್ಚಿನ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಸೆ.5ರವರೆಗೆ ಗಡುವು ವಿಸ್ತರಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ತಮ್ಮ ಶಾಲೆಯ ಮೂಲಕ ಅಥವಾ ನೇರವಾಗಿ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿ ಮೊ.ಸಂ:7022849856 ಅಥವಾ 9901072527 ಸಂಪರ್ಕಿಸುವಂತೆ ಶಾಲೆಯ ಶಿಕ್ಷಣ ಸಂಯೋಜಕಿ ಎಂ.ಶಾಲಿನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಚಿವರಿಗೆ ಹೊಸ ಕಾರು ಭಾಗ್ಯ

10 ಕೋಟಿ ವೆಚ್ಚದಲ್ಲಿ 33 ಇನ್ನೋವಾ ಖರೀದಿ

ಬೆಂಗಳೂರು, ಸೆ.1– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 100 ದಿನಗಳಲ್ಲಿ ರಾಜ್ಯದ ಜನತೆಗೆ ನೀಡಿದ್ದ ಐದು ಗ್ಯಾರಂಟಿಗಳ ಪೈಕಿ ನಾಲ್ಕನ್ನು ಈಡೇರಿಸಿದ್ದು, ಈಗ ಎಲ್ಲ ಸಚಿವರಿಗೆ ಹೊಸ ಕಾರುಗಳ ಭಾಗ್ಯ ನೀಡಲಾಗಿದೆ.

ರಾಜ್ಯ ಸರ್ಕಾರ 9.9 ಕೋಟಿ ರೂಪಾಯಿ ವೆಚ್ಚದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಎಲ್ಲಾ 33 ಸಚಿವರಿಗೆ ಶೀಘ್ರದಲ್ಲೇ ಇತ್ತೀಚೆಗೆ ಬಿಡುಗಡೆಯಾದ ಟೊಯೊಟಾ ಇನ್ನೋವಾ ಹೈಬ್ರಿಡ್ ಹೈಕ್ರಾಸ್ ಮಾಡೆಲ್‌ನ 33 ಕಾರುಗಳನ್ನು ಖರೀದಿಸಲು ಮುಂದಾಗಿದೆ.


ಸಿದ್ದರಾಮಯ್ಯ ಸಂಪುಟದ ಎಲ್ಲ ಸಚಿವರಿಗೂ ತಲಾ 30 ಲಕ್ಷ ರೂ. ಬೆಲೆಯ ಹೊಸ ಇನ್ನೋವಾ ಹೈಕ್ರಾಸ್– ಹೈಬ್ರಿಡ್ ಕಾರುಗಳ ಖರೀದಿಗೆ ಸರ್ಕಾರ ಅನುಮತಿ ನೀಡಿದ್ದು, ಇದಕ್ಕೆ 4ಜಿ ವಿನಾಯಿತಿ ನೀಡಿ 9.90 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ರಾಜ್ಯ ಸರ್ಕಾರ ನೇರವಾಗಿ ಟೊಯೊಟಾ ಕಿರ್ಲೋಸ್ಕರ್ ಬೆಂಗಳೂರು ಘಟಕದಿಂದ ಕಾರುಗಳನ್ನು ಖರೀದಿಸುತ್ತಿದ್ದು. ಈ ಕಾರುಗಳು ಆಗಸ್ಟ್ 29 ರಂದು ಬಿಡುಗಡೆಯಾದ ವಿಶ್ವದ ಮೊದಲ ಸಂಪೂರ್ಣ ಎಥೆನಾಲ್ ಚಾಲಿತ ಫ್ಲೆಕ್ಸ್ ಇಂಧನ ಎಂಜಿನ್ ಹೊಂದಿವೆ.

ಇನ್ನು ಸಚಿವರಿಗೆ ಹೊಸ ಕಾರುಗಳನ್ನು ಖರೀದಿಸುವ ಸರ್ಕಾರದ ಕ್ರಮವನ್ನು ಟೀಕಿಸಿದ ಬಿಜೆಪಿ ಶಾಸಕ ಅಶ್ವತ್ಥನಾರಾಯಣ ಅವರು, ರಾಜ್ಯ ಸರ್ಕಾರ ಹಣಕಾಸಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿದೆ. ಇಂಥ ಸಂದರ್ಭದಲ್ಲಿ ಹೆಚ್ಚುವರಿ ಖರ್ಚು ಮಾಡುವಾಗ ಹೆಚ್ಚು ಜವಾಬ್ದಾರಿಯಿಂದ ವರ್ತಿಸಬೇಕು. ಸರ್ಕಾರ 100 ದಿನಗಳನ್ನು ಪೂರೈಸಿದೆ. ಆದರೆ ಇನ್ನೂ ಜನರ ಗ್ಯಾರಂಟಿಗಾಗಿ ಹಣದ ವ್ಯವಸ್ಥೆ ಮಾಡಲು ಹೆಣಗಾಡುತ್ತಿದೆ ಎಂದು ಹೇಳಿದ್ದಾರೆ

ಮೈಸೂರು ಮಿತ್ರ ಶನಿವಾರ 2 ಸೆಪ್ಟೆಂಬರ್ 2023

ಒಂದು ರಾಷ್ಟ್ರ, ಒಂದು ಚುನಾವಣೆ: ಸಾಧಕ-ಬಾಧಕ ತಿಳಿಯಲು ಮಾಜಿ ರಾಷ್ಟ್ರಪತಿ ಕೋವಿಂದ್ ನೇತೃತ್ವದಲ್ಲಿ ಸಮಿತಿ ರಚನೆ



ನವದೆಹಲಿ, ಸೆ.1–ಮಹತ್ವದ ಬೆಳವಣಿಗೆಯಲ್ಲಿ ಕೇಂದ್ರ ಸರ್ಕಾರ ಒಂದು ರಾಷ್ಟ್ರ, ಒಂದು ಚುನಾವಣೆಯ ಸಾಧಕ–ಬಾಧಕ ತಿಳಿಯಲು ಶುಕ್ರವಾರ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚನೆ ಮಾಡಿದೆ.

ದೆಹಲಿಯ ಜಿ 20 ಶೃಂಗಸಭೆಯ ನಂತರ ವಿಶೇಷ ಅಧಿವೇಶನ ನಡೆಯಲಿದ್ದು, ಇದರ ನಡುವೆಯೇ ಒಂದು ರಾಷ್ಟ್ರ, ಒಂದು ಚುನಾವಣೆಯ ಸಾಧ್ಯತೆಯನ್ನು ಅಧ್ಯಯನ ಮಾಡಲು ಮಾಜಿ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ನೇತೃತ್ವದ ಸಮಿತಿಯನ್ನು ಕೇಂದ್ರ ಸರ್ಕಾರ ರಚಿಸಿದೆ. ಸಮಿತಿಯ ಸದಸ್ಯರ ಕುರಿತು ಅಧಿಸೂಚನೆಯನ್ನು ನಂತರ ಹೊರಡಿಸಲಾಗುವುದು. ಸೆ.18ರಿಂದ ಸೆ.22ರವರೆಗೆ ವಿಶೇಷ ಸಂಸತ್ ಅಧಿವೇಶನ ನಡೆಯಲಿದ್ದು, ಹಲವು ಮಸೂದೆಯನ್ನು ಮಂಡಿಸಲು ಬಾಕಿ ಇರುವ ಕಾರಣ ಈ ವಿಶೇಷ ಅಧಿವೇಶವನ್ನು ಕರೆಯಲಾಗಿದೆ ಎಂದು ಸರ್ಕಾರ ತಿಳಿಸಿದೆ.

ಈ ವಿಶೇಷ ಅಧಿವೇಶನದ ಶಾಸಕಾಂಗ ಕಾರ್ಯಸೂಚಿಯು ಹಲವು ಊಹಾಪೋಹಗಳಿಗೆ ಕಾರಣವಾಗಿದೆ. ಈ ಅಧಿವೇಶ ಮುಂದಿನ ಸಾರ್ವತ್ರಿಕ ಚುನಾವಣೆಗಳಿಗೆ ಬಲವಾದ ರಾಜಕೀಯ ಸಂದೇಶವನ್ನು ನೀಡುವಂತಿದೆ ಎಂದು ಹೇಳಲಾಗಿದೆ. ಇನ್ನು ಈಗಾಗಲೇ ಚರ್ಚೆಯಲ್ಲಿರುವ 'ಒಂದು ರಾಷ್ಟ್ರ–ಒಂದು ಚುನಾವಣೆ' ಮಸೂದೆಯು ಸ್ವಲ್ಪ ಸಮಯದವರೆಗೆ ಸರ್ಕಾರದ ಕಾರ್ಯಸೂಚಿಯಲ್ಲಿರಲಿದೆ. ಕೇಂದ್ರ ಸರ್ಕಾರವು ಸೆಪ್ಟೆಂಬರ್ 18ರಿಂದ 22ರವರೆಗೆ ನಡೆಯಲಿರುವ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ 'ಒಂದು ರಾಷ್ಟ್ರ, ಒಂದು ಚುನಾವಣೆ' ಮಸೂದೆಯನ್ನು ಮಂಡಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಈ ಮಸೂದೆಯು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಲು ಅವಕಾಶ ನೀಡುತ್ತದೆ ಎಂದು ಹೇಳಲಾಗಿದೆ. ಇದೀಗ ಈ ಬಗ್ಗೆ ರಾಜ್ಯ ಮತ್ತು ಇತರ ಕೇಂದ್ರಾಡಳಿತ ಪ್ರದೇಶಗಳಲ್ಲಿ ಯಾವ ರೀತಿಯ ಅಭಿಪ್ರಾಯ ಇದೆ ಜತೆಗೆ ಕೇಂದ್ರದ ಈ ನಿಲುವಿನ ಬಗ್ಗೆ ಪಕ್ಷಗಳು ಹಾಗೂ ಸಾರ್ವಜನಿಕ ವಲಯದಲ್ಲಿ ಯಾವ ರೀತಿಯಲ್ಲಿ ಚರ್ಚೆಯಾಗುತ್ತಿದೆ ಎಂಬುದನ್ನು ಅಧ್ಯಯನ ನಡೆಸಲು ಕೇಂದ್ರವು ಮಾಜಿ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ನೇತೃತ್ವದ ಸಮಿತಿಯೊಂದನ್ನು ರಚಿಸಿದೆ.

'ಒಂದು ರಾಷ್ಟ್ರ, ಒಂದು ಚುನಾವಣೆ' ಕಲ್ಪನೆಯು ದೇಶಾದ್ಯಂತ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವುದನ್ನು ಉಲ್ಲೇಖಿಸುತ್ತದೆ. ಇದರರ್ಥ ಲೋಕಸಭೆ ಮತ್ತು ಭಾರತದಾದ್ಯಂತ ಎಲ್ಲಾ ರಾಜ್ಯಗಳ ಅಸೆಂಬ್ಲಿಗಳಿಗೆ ಏಕಕಾಲದಲ್ಲಿ ಚುನಾವಣೆಗಳು ನಡೆಯುತ್ತವೆ, ಮತದಾನವು ಬಹುಶಃ ಅದೇ ಸಮಯದಲ್ಲಿ ನಡೆಯುತ್ತದೆ.

ಸಂಸತ್ತಿನ ವಿಶೇಷ ಅಧಿವೇಶನವು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಒಂಬತ್ತು ವರ್ಷಗಳಲ್ಲಿ ಮೊದಲ ವಿಶೇಷ ಅಧಿವೇಶನವಾಗಿದೆ, ಇದು ಜೂನ್ 30 ರಂದು ಮಧ್ಯರಾತ್ರಿ ಜಿಎಸ್ಟಿ ಜಾರಿಯನ್ನು ಗುರುತಿಸಲು 2017ರಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯ ವಿಶೇಷ ಜಂಟಿ ಅಧಿವೇಶನವನ್ನು ಕರೆದಿತ್ತು. ಆದಾಗ್ಯೂ, ಇದು ಐದು ದಿನಗಳ ಪೂರ್ಣಾವಧಿಯ ಅಧಿವೇಶನವಾಗಿದ್ದು, ಅಧಿವೇಶನಗಳ ಸಮಯದಲ್ಲಿ ಸಾಮಾನ್ಯವಾಗಿ ಎರಡೂ ಸದನಗಳು ಪ್ರತ್ಯೇಕವಾಗಿ ಸಭೆ ಸೇರುತ್ತವೆ ಎನ್ನಲಾಗಿದೆ.

ಒಂದನೇ ಪುಟದಿಂದ

ಉಪಗ್ರಹ ಉಡಾವಣೆಗೆ ಕ್ಷಣಗಣನೆ

ಉಪಗ್ರಹ ಉಡಾವಣೆಯ ಅಂತಿಮ ಮತ್ತು ಅಧಿಕೃತ ಕ್ಷಣಗಣನೆ ಆರಂಭವಾಗಿದೆ. ಸೂರ್ಯಯಾನ ಉಡಾವಣೆಯು ಶನಿವಾರ ಬೆಳಗ್ಗೆ 11.50ಕ್ಕೆ ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಉಡಾವಣಾ ಕೇಂದ್ರದ ಲಾಂಚ್ ಪ್ಯಾಡ್‌ನಿಂದ ನಿಗದಿಯಾಗಿದೆ. ಉಡಾವಣಾ ಪೂರ್ವಾಭ್ಯಾಸ ಮತ್ತು ವಾಹನದ ಆಂತರಿಕ ತಪಾಸಣೆ ಎಲ್ಲವೂ ಪೂರ್ಣಗೊಂಡಿದೆ. ಆದಿತ್ಯ–ಎಲ್1 ಭಾರತದ ಮೊದಲ ಸೌರ ಬಾಹ್ಯಾಕಾಶ ವೀಕ್ಷಣಾಲಯವಾಗಿದ್ದು, ಈ ಉಪಗ್ರಹವನ್ನು ಇಸ್ರೋದ PSLV-C57 ಉಡಾವಣಾ ವಾಹಕದ ಮೂಲಕ ಉಡಾವಣೆ ಮಾಡಲಾಗುತ್ತಿದೆ. ಈ ಆದಿತ್ಯಾ ಎಲ್–1 ಉಪಗ್ರಹವು ಸೂರ್ಯನ ವಿವರವಾದ ಅಧ್ಯಯನವನ್ನು ಹೊಂದಲು ಏಳು ವಿಭಿನ್ನ ಪೇಲೋಡ್‌ಗಳನ್ನು ಒಯ್ಯುತ್ತದೆ. ಅದರಲ್ಲಿ ನಾಲ್ಕು ಸೂರ್ಯನ ಬೆಳಕನ್ನು ವೀಕ್ಷಿಸುತ್ತದೆ ಮತ್ತು ಇತರ ಮೂರು ಪ್ಲಾಸ್ಮಾ ಮತ್ತು ಕಾಂತೀಯ ಕ್ಷೇತ್ರಗಳ ಇನ್–ಸಿಟು ನಿಯತಾಂಕಗಳನ್ನು ಅಳೆಯುತ್ತದೆ.

ಆದಿತ್ಯ–ಎಲ್1ನಲ್ಲಿನ ಅತಿ ದೊಡ್ಡ ಮತ್ತು ತಾಂತ್ರಿಕವಾಗಿ ಅತ್ಯಂತ ಸವಾಲಿನ ಪೇಲೋಡ್ ಎಂದರೆ ವಿಸಿಬಲ್ ಎಮಿಷನ್ ಲೈನ್ ಕರೋನಾಗ್ರಾಫ್ ಅಥವಾ VELC. ಇಸ್ರೋ ಸಹಯೋಗದೊಂದಿಗೆ ಹೊಸಕೋಟೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ CREST (ಸೆಂಟರ್ ಫಾರ್ ರಿಸರ್ಚ್ ಅಂಡ್ ಎಜುಕೇಶನ್ ಇನ್ ಸೈನ್ಸ್ ಟೆಕ್ನಾಲಜಿ) ಕ್ಯಾಂಪಸ್‌ನಲ್ಲಿ VELC ಅನ್ನು ಸಂಯೋಜಿಸಲಾಗಿದೆ ಮತ್ತು ಪರೀಕ್ಷಿಸಲಾಗಿದೆ ಮತ್ತು ಮಾಪನಾಂಕ ಮಾಡಲಾಗಿದೆ.

ಆದಿತ್ಯ–ಎಲ್1 ಅನ್ನು ಲಗ್ರಾಂಜಿಯನ್ ಪಾಯಿಂಟ್ 1 (ಅಥವಾ ಎಲ್1) ಸುತ್ತ ಹಾಲೋ ಕಕ್ಷೆಯಲ್ಲಿ ಇರಿಸಲಾಗುತ್ತಿದೆ. ಇದು ಸೂರ್ಯನ ದಿಕ್ಕಿನಲ್ಲಿ ಭೂಮಿಯಿಂದ 1.5 ಮಿಲಿಯನ್ ಕಿಮೀ ದೂರದಲ್ಲಿದೆ. ಈ ದೂರವನ್ನು ಕ್ರಮಿಸಲು ಆದಿತ್ಯಾ ಎಲ್ 1 ಉಪಗ್ರಹವು ಸುಮಾರು ನಾಲ್ಕು ತಿಂಗಳ ಅವಧಿಯಲ್ಲಿ ಕ್ರಮಿಸುವ ನಿರೀಕ್ಷೆಯಿದೆ.

ಈ ಆಯಕಟ್ಟಿನ ಸ್ಥಳವು ಆದಿತ್ಯ–ಎಲ್1 ಗೆ ಗ್ರಹಣಗಳು ಅಥವಾ ನಿಗೂಢತೆಯಿಂದ ಅಡಚಣೆಯಾಗದಂತೆ ನಿರಂತರವಾಗಿ ಸೂರ್ಯನನ್ನು ವೀಕ್ಷಿಸಲು ಅನುವು ಮಾಡಿಕೊಡುತ್ತದೆ. ವಿಜ್ಞಾನಿಗಳು ಸೌರ ಚಟುವಟಿಕೆಗಳನ್ನು ಮತ್ತು ನೈಜ ಸಮಯದಲ್ಲಿ ಬಾಹ್ಯಾಕಾಶ ಹವಾಮಾನದ ಮೇಲೆ ಅವುಗಳ ಪ್ರಭಾವವನ್ನು ಅಧ್ಯಯನ ಮಾಡಲು ಅನುವು ಮಾಡಿಕೊಡುತ್ತದೆ. ಅಲ್ಲದೆ, ಬಾಹ್ಯಾಕಾಶ ನೌಕೆಯ ಡೇಟಾವು ಸೌರ ಸ್ಫೋಟದ ಘಟನೆಗಳಿಗೆ ಕಾರಣವಾಗುವ ಪ್ರಕ್ರಿಯೆಗಳ ಅನುಕ್ರಮವನ್ನು ಗುರುತಿಸಲು ಸಹಾಯ ಮಾಡುತ್ತದೆ ಮತ್ತು ಬಾಹ್ಯಾಕಾಶ ಹವಾಮಾನ ಚಾಲಕರ ಆಳವಾದ ತಿಳುವಳಿಕೆಗೆ ಕೊಡುಗೆ ನೀಡುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಭಾರತದ ಸೌರ ಮಿಷನ್‌ನ ಪ್ರಮುಖ ಉದ್ದೇಶಗಳು ಸೌರ ಕರೋನದ ಭೌತಶಾಸ್ತ್ರದ ಅಧ್ಯಯನ ಮತ್ತು ಅದರ ತಾಪನ ಕಾರ್ಯವಿಧಾನ, ಸೌರ ಮಾರುತದ ವೇಗವರ್ಧನೆ, ಸೌರ ವಾತಾವರಣದ ಜೋಡಣೆ ಮತ್ತು ಡೈನಾಮಿಕ್ಸ್, ಸೌರ ಮಾರುತ ವಿತರಣೆ ಮತ್ತು ತಾಪಮಾನದ ಅನಿಸೋಟ್ರೋಪಿ ಮತ್ತು ಕರೋನಲ್ ಮಾಸ್ ಎಜೆಕ್ಷನ್‌ಗಳ ಮೂಲ (CME) ಮತ್ತು ಜ್ವಾಲೆಗಳು ಮತ್ತು ಭೂಮಿಯ ಸಮೀಪದ ಬಾಹ್ಯಾಕಾಶ ಹವಾಮಾನ ಅಧ್ಯಯನ ಈ ಯೋಜನೆಯ ಉದ್ದೇಶವಾಗಿದೆ. ಸೂರ್ಯನ ವಾತಾವರಣ, ಕರೋನಾ, ನಾವು ಸಂಪೂರ್ಣ ಸೂರ್ಯಗ್ರಹಣದ ಸಮಯದಲ್ಲಿ ನೋಡುತ್ತೇವೆ. VELC ನಂತಹ ಕರೋನಾಗ್ರಾಫ್ ಸೂರ್ಯನ ಡಿಸ್ಕ್‌ನಿಂದ ಬೆಳಕನ್ನು ಕತ್ತರಿಸುವ ಸಾಧನವಾಗಿದೆ ಮತ್ತು ಆದ್ದರಿಂದ ಎಲ್ಲಾ ಸಮಯದಲ್ಲೂ ಹೆಚ್ಚು ಮಸುಕಾದ ಕರೋನಾವನ್ನು ಚಿತ್ರಿಸಬಹುದು ಎಂದು ಬೆಂಗಳೂರು ಮೂಲದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಸಂಸ್ಥೆ ಹೇಳಿದೆ.

ಪ್ರಜ್ವಲ್ ರೇವಣ್ಣ ಆಯ್ಕೆ ಅಸಿಂಧು

ಎಸಗಿರುವುದರಿಂದ ತಮ್ಮನ್ನು ವಿಜೇತ ಅಭ್ಯರ್ಥಿ ಎಂದು ಘೋಷಿಸುವಂತೆ ಕೋರಿದ್ದ ಮಂಜು ಅವರ ಮನವಿ ಪುರಸ್ಕರಿಸಲು ನ್ಯಾಯಾಲಯ ನಿರಾಕರಿಸಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಪ್ರಜ್ವಲ್ ರೇವಣ್ಣ ಕಣಕ್ಕಿಳಿದು ಮೊದಲ ಪ್ರಯತ್ನದಲ್ಲೇ ಭಾರೀ ಅಂತರದಿಂದ ಜಯಗಳಿಸಿ, ಸಂಸತ್ ಪ್ರವೇಶಿಸಿದ್ದರು. ಆದರೆ, ಪ್ರಮಾಣಪತ್ರದಲ್ಲಿ ಆಸ್ತಿ ವಿಚಾರದಲ್ಲಿ ತಪ್ಪು ಮಾಹಿತಿ ನೀಡಿ ಜನರ ದಿಕ್ಕು ತಪ್ಪಿಸುವ ಕೆಲಸಕ್ಕೆ ಮುಂದಾಗಿದ್ದಾರೆ ಎಂದು ಮಂಜು ಅವರು, 2019ರ ಜೂ.19ರಂದು ನ್ಯಾಯಾಲಯದ ಮೆಟ್ಟಿಲು ಹತ್ತಿದ್ದರು.

2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆ ಸಮೀಪ ಇರುವಾಗಲೇ ರಾಜ್ಯದಲ್ಲಿ ಜೆಡಿಎಸ್ ಪಕ್ಷದ ಏಕೈಕ ಸಂಸತ್ ಸದಸ್ಯ ಪ್ರಜ್ವಲ್ ತಮ್ಮ ಸ್ಥಾನ ಕಳೆದುಕೊಂಡಿದ್ದಾರೆ. ದೇವೇಗೌಡರು ಇದಕ್ಕೂ ಮೊದಲು ತಾವು ಪ್ರತಿನಿಧಿಸುತ್ತಿದ್ದ ಹಾಸನ ಕ್ಷೇತ್ರವನ್ನು ತಮ್ಮ ಮೊಮ್ಮಗನಿಗೆ ಬಿಟ್ಟು, ತುಮಕೂರು ಕ್ಷೇತ್ರದಿಂದ ಸ್ಪರ್ಧಿಸಿ, ಪರಾಭವಗೊಂಡಿದ್ದರು.

ರೇವಣ್ಣ, ಸೂರಜ್‌ಗೆ ನೋಟೀಸ್

ಬೆಂಗಳೂರು, ಸೆ.1–ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರ ಆಯ್ಕೆಯನ್ನು ಹೈಕೋರ್ಟ್ ಅಸಿಂಧುಗೊಳಿಸಿರುವ ಬೆನ್ನಲ್ಲೇ ಅವರ ತಂದೆ ಮಾಜಿ ಸಚಿವರೂ ಆದ ಹಾಲಿ ಶಾಸಕ ಹೆಚ್.ಡಿ.ರೇವಣ್ಣ ಮತ್ತು ಸಹೋದರ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರಿಗೂ ಸಂಕಷ್ಟ ಎದುರಾಗಿದೆ.

ಚುನಾವಣಾ ತಕರಾರು ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿರುವ ಹೈಕೋರ್ಟ್, ಹೆಚ್.ಡಿ.ರೇವಣ್ಣ ಮತ್ತು ಸೂರಜ್ ರೇವಣ್ಣ ಅವರಿಗೆ ನೋಟೀಸ್ ಜಾರಿ ಮಾಡಿದೆ. ನಾಮಪತ್ರ ಸಲ್ಲಿಕೆ ವೇಳೆ ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಿದ ಆರೋಪದ ಮೇರೆಗೆ ಹೈಕೋರ್ಟ್ ಪ್ರಜ್ವಲ್ ರೇವಣ್ಣ ಆಯ್ಕೆಯನ್ನು ಅಸಿಂಧುಗೊಳಿಸಿದ್ದು, ಹೆಚ್.ಡಿ.ರೇವಣ್ಣ ಮತ್ತು ಸೂರಜ್ ರೇವಣ್ಣ ಕೂಡ ಅದೇ ರೀತಿಯ ಆರೋಪ ಎದುರಿಸುತ್ತಿದ್ದಾರೆ ಎಂದು ಹೇಳಲಾಗಿದೆ.

ಇನ್ನು ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ನಿಷಿದ್ಧ

ಅರಣ್ಯ ಇಲಾಖೆ ಅಧಿಕಾರಿಗಳಿಂದ ಕಟ್ಟುನಿಟ್ಟಿನ ನಿಯಮ ಅನುಷ್ಠಾನ, ಮೊದಲ ದಿನ ಜಾಗೃತಿ, ಇಂದಿನಿಂದ ದಂಡದ ಬರೆ

ಮೈಸೂರು, ಸೆ. 1 (ಆರ್‌ಕೆ)– ಮೈಸೂರಿನ ಪ್ರಮುಖ ಪ್ರವಾಸಿ ಹಾಗೂ ಧಾರ್ಮಿಕ ತಾಣವಾದ ಚಾಮುಂಡಿ ಬೆಟ್ಟದಲ್ಲಿ ಶುಕ್ರವಾರದಿಂದ ಪ್ಲಾಸ್ಟಿಕ್ ನಿಷಿದ್ಧ.

ಮೈಸೂರು ಪ್ರಾದೇಶಿಕ ಅರಣ್ಯ ಅಧಿಕಾರಿಗಳು ಪ್ಲಾಸ್ಟಿಕ್ ಮುಕ್ತ ಚಾಮುಂಡಿ ಸನ್ನಿಧಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುತ್ತಿದ್ದು, ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಲು ಮುಂದಾಗಿದ್ದಾರೆ. ಮೊದಲ ದಿನವಾದ ಶುಕ್ರವಾರ ಅಂಗಡಿ ವರ್ತಕರಿಗೆ ಪ್ಲಾಸ್ಟಿಕ್ ನಿಷೇಧ ಕುರಿತು ಅಂತಿಮ ತಿಳುವಳಿಕೆ ನೀಡಿ ಜಾಗೃತಿ ಮೂಡಿಸಿದ ಅಧಿಕಾರಿಗಳು, ಶನಿವಾರದಿಂದ (ಸೆ.2) ಯಿಂದ ನಿಯಮ ಉಲ್ಲಂಘಿಸಿದವರಿಂದ ದಂಡ ವಸೂಲಿ ಮಾಡುವರು.

ಮೈಸೂರು ಪ್ರಾದೇಶಿಕ ಅರಣ್ಯ ವಿಭಾಗದ ನಗರ ಹಸರೀಕರಣ ವಲಯ ವ್ಯಾಪ್ತಿಯಲ್ಲಿನ ಚಾಮುಂಡಿಬೆಟ್ಟ ಮೀಸಲು ಅರಣ್ಯ ಪ್ರದೇಶವನ್ನು ರಕ್ಷಿಸುವ ಸಲುವಾಗಿ ಅಲ್ಲಿನ ಅಂಗಡಿ ಮುಂಗಟ್ಟು, ಮಳಿಗೆ ವ್ಯಾಪಾರಸ್ಥರಿಗೆ ಕರಪತ್ರ ಹಂಚುವುದು, ಬೆಟ್ಟದುದ್ದಕ್ಕೂ ರಸ್ತೆಯಲ್ಲಿ ಸೂಚನಾ ಫಲಕ ಅಳವಡಿಸುವುದು, ಪ್ಲಾಸ್ಟಿಕ್ ಬಳಕೆ, ಮಾರಾಟ, ದಾಸ್ತಾನು, ಎಲ್ಲೆಂದರಲ್ಲಿ ಬಿಸಾಡುವುದು ಹಾಗೂ ಸಾಗಣೆ ಮಾಡಿದರೆ ದಂಡ ವಸೂಲಿ ಕಾರ್ಯ ಮಾಡಲಾಗುವುದು.



ಆರ್‌ಎಫ್‌ಓ ಧನ್ಯಶ್ರೀ ಹಾಗೂ ಸಿಬ್ಬಂದಿಗಳು ಶುಕ್ರವಾರ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಅಂಗಡಿ ವರ್ತಕರಿಗೆ ಪ್ಲಾಸ್ಟಿಕ್ ನಿಷೇಧ ಕುರಿತಂತೆ ತಿಳುವಳಿಕೆ ನೀಡಿದರು.

ಚಾಮುಂಡಿಬೆಟ್ಟ ಗ್ರಾಮಸ್ಥರನ್ನು ಹೊರತುಪಡಿಸಿ ಇತರರು ಬೆಟ್ಟಕ್ಕೆ ರಾತ್ರಿ 10 ರಿಂದ ಬೆಳಗ್ಗೆ 6 ಗಂಟೆಯವರೆಗೆ ಭೇಟಿ ನೀಡುವುದನ್ನು ತಡೆಗಟ್ಟಲು ಮುಖ್ಯ ದ್ವಾರ ಹೊರತುಪಡಿಸಿ ಉಳಿದ ಮೂರು ದ್ವಾರಗಳನ್ನು ಬಂದ್ ಮಾಡಲಾಗುವುದು. ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 76 ಹಾಗೂ 99 (1)(1) ರೀತ್ಯಾ ಚಾಮುಂಡಿಬೆಟ್ಟ ಮೀಸಲು ಅರಣ್ಯ ಪ್ರದೇಶದಲ್ಲಿ ಅರಣ್ಯ ಸಂರಕ್ಷಿಸಲು ಹಾಗೂ ಜೀವ ವೈವಿಧ್ಯತೆ ರಕ್ಷಿಸಲು ದಂಡ ವಿಧಿಸಲಾಗುತ್ತಿದೆ.

ಅತಿಕ್ರಮ ಪ್ರವೇಶಕ್ಕೆ 500 ರೂ., ನಿರ್ಬಂಧಿತ ಸ್ಥಳದಲ್ಲಿ ವಾಹನ ನಿಲ್ಲಿಸಿದರೆ 1000 ರೂ. ಅರಣ್ಯ ಪ್ರದೇಶದಲ್ಲಿ ಪ್ಲಾಸ್ಟಿಕ್ ಮತ್ತು ಇತರ ತ್ಯಾಜ್ಯ ಬಿಸಾಡಿದರೆ ಮೊದಲ ಬಾರಿ 2500 ರೂ., ಎರಡನೇ ಬಾರಿ ಅಪರಾಧಕ್ಕೆ 5000 ರೂ. ಪುನರಾವರ್ತನೆಯಾದಲ್ಲಿ 10,000 ರೂ. ದಂಡದ ಜೊತೆಗೆ ಅಂಗಡಿ ಲೈಸೆನ್ಸ್ ರದ್ದುಗೊಳಿಸಲು ಶಿಫಾರಸು ಮಾಡಲಾಗುವುದು. ರಾತ್ರಿ 10 ರಿಂದ ಬೆಳಗ್ಗೆ 6 ಗಂಟೆಯವರೆಗೆ ಚಾಮುಂಡಿಬೆಟ್ಟದಲ್ಲಿ ಮದ್ಯಪಾನ, ಹಾನಿಕಾರಕ ವಸ್ತು ಉಪಯೋಗಿಸುವುದು, ಕೊಂಡೊಯ್ದರೆ 5000 ರೂ. ಪ್ರಾಣಿಗಳಿಗೆ ಆಹಾರ ನೀಡಿದರೆ 1000 ರೂ. ಹಾಗೂ ಅರಣ್ಯ ಅಥವಾ ವನ್ಯಜೀವಿಗಳಿಗೆ ಧಕ್ಕೆ ಉಂಟು ಮಾಡಿದರೆ 1000 ರೂ. ದಂಡ ವಿಧಿಸಲಾಗುವುದು.

ಪ್ರಾದೇಶಿಕ ಅರಣ್ಯಾಧಿಕಾರಿ (ಆರ್‌ಎಫ್‌ಓ) ಧನ್ಯಶ್ರೀ ನೇತೃತ್ವದ ಅಧಿಕಾರಿಗಳು ಹಾಗೂ ಸಿಬ್ಬಂದಿ ಚಾಮುಂಡಿಬೆಟ್ಟದಲ್ಲಿ ವ್ಯಾಪಾರಸ್ಥರು, ಭಕ್ತಾದಿಗಳು, ಪ್ರವಾಸಿಗರು ಹಾಗೂ ಗ್ರಾಮಸ್ಥರಿಗೆ ಪ್ಲಾಸ್ಟಿಕ್ ನಿಷೇಧ ಜಾರಿಗೊಳಿಸಿರುವ ಬಗ್ಗೆ ಭಿತ್ತಿಪತ್ರ ನೀಡಿ ಜಾಗೃತಿ ಮೂಡಿಸಿದರು.

ಪರಿಶ್ರಮ, ಗುರಿಯಿಂದ ಉದ್ದೇಶ ಸಾಧನೆ ಸಾಧ್ಯ

ರಾಜ್ಯ ಸರ್ಕಾರ ವಿಶ್ರಾಂತ ಪ್ರಧಾನ ಕಾರ್ಯದರ್ಶಿ ಎಂ.ಕೆ.ಶಂಕರಲಿಂಗೇಗೌಡ ಅಭಿಮತ



ಮೈಸೂರು, ಸೆ.1– ಭಾಷೆಯ ಪರಿಣಾಮಕಾರಿ ಬಳಕೆ ಪ್ರಗತಿಗೆ ಪೂರಕವಾಗಿದೆ. "ದೃಷ್ಟಿಯಂತೆ ಸೃಷ್ಟಿ" ಎಂಬಂತೆ ನಿಮ್ಮ ಚಿಂತನೆಯಂತೆ ನೀವು ಆಗುತ್ತೀರಿ. ಹಾಗಾಗಿ ತಾನು ಏನಾಗಬೇಕೆಂದು ಮೊದಲು ವಿದ್ಯಾರ್ಥಿಗಳಾದವರು ನಿರ್ಧರಿಸಬೇಕಾಗುತ್ತದೆ ಎಂದು ರಾಜ್ಯ ಸರ್ಕಾರದ ವಿಶ್ರಾಂತ ಪ್ರಧಾನ ಕಾರ್ಯದರ್ಶಿ ಹಾಗೂ ಕೃಷಿಕ್ ಸರ್ವೋದಯ ಫೌಂಡೇಶನ್ ಸಂಸ್ಥೆಯ ಅಧ್ಯಕ್ಷರಾದ ಎಂ.ಕೆ.ಶಂಕರಲಿಂಗೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ 2023–24ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳ ಪ್ರವೇಶ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮವನ್ನು ಅವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ, ವಿದ್ಯಾರ್ಥಿ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, ತಮ್ಮ ವಿದ್ಯಾರ್ಥಿ ಜೀವನದ ಸುವರ್ಣ ಸನ್ನಿವೇಶಗಳನ್ನು ನೆನಪಿಸಿಕೊಳ್ಳುತ್ತಾ 20ನೇ ಶತಮಾನಕ್ಕೂ 21ನೆಯ ಶತಮಾನಕ್ಕೂ ಇರುವ ವ್ಯತ್ಯಾಸಗಳನ್ನು ಉಲ್ಲೇಖಿಸಿದರು. ಜ್ಞಾನ ಸಾಧನೆಗೆ ಅಂದಿಗಿಂತ ಇಂದು ಹೆಚ್ಚಿನ ಸೌಕರ್ಯ, ಸವಲತ್ತುಗಳು ಲಭ್ಯವಿದೆ. ಅವುಗಳನ್ನು ಬಳಸಿಕೊಳ್ಳುವುದರ ಮುಖೇನ ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿ ಕೊಳ್ಳಬೇಕೆಂದು ತಿಳಿಸಿದರು.

'ನಹಿ ಜ್ಞಾನೇನ ಸದೃಶಂ' ಜ್ಞಾನಕ್ಕಿಂತ ಮಿಗಿಲಾದುದ್ದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ. ಜ್ಞಾನವೇ ಈ ಜಗತ್ತಿನ ಬಹುದೊಡ್ಡ ಶಕ್ತಿಯಾಗಿದೆ. ವಿದ್ಯಾರ್ಥಿ ಜೀವನದಲ್ಲಿ ಸಮಯದ ಅರಿವು ಮತ್ತು ಸಮಯದ ಬೆಲೆ ಕಂಡುಕೊಂಡು, ಅದರ ಹೊಂದಾಣಿಕೆ ಮಾಡಿಕೊಳ್ಳುವುದರ ಜೊತೆಗೆ ತರಗತಿಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಎಂದು ಕಿವಿಮಾತು ಹೇಳಿದರು.

ತಲೆಯಲ್ಲಿನ ಚಿಂತನೆಗಳು ಪದಗಳ ಮುಖೇನ ಬಾಯಿಂದ ಹೊರಡುತ್ತವೆ. ಹಾಗಾಗಿ ವಿದ್ಯಾರ್ಥಿಗಳು ಗ್ರಹಿಕೆಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಗ್ರಂಥಾಲಯದ ಸದುಪಯೋಗವನ್ನು ಪಡೆದುಕೊಳ್ಳಬೇಕಾಗುತ್ತದೆ. ಜ್ಞಾನ ಸಂಪಾದನೆ ಮಾಡಿದರೆ ಆರ್ಥಿಕ ಸ್ಥಿತಿ ತಾನೇ ತಾನಾಗಿ ವ್ಯಕ್ತಿಯ ಜೀವನವನ್ನು ಸುಧಾರಿಸುತ್ತದೆ. ಇಂದು ಸಾಮಾಜಿಕ ಜಾಲತಾಣಗಳನ್ನು ಅನಗತ್ಯವಾಗಿ ವಿದ್ಯಾರ್ಥಿ ಸಮುದಾಯ ಬಳಸುತ್ತಿದ್ದು ಅದರಿಂದ ಹೊರಬರಬೇಕಾಗಿದೆ. ನಿಮ್ಮ ಭವಿಷ್ಯ ನಿಮ್ಮ ಕೈಯ್ಯಲ್ಲೇ ಇದೆ ಎಂಬುದನ್ನು "ಕರಾಗ್ರೇ ವಸತೇ ಲಕ್ಷ್ಮೀ, ಕರಮಧ್ಯೇ ಸರಸ್ವತೀ, ಶ್ಲೋಕದ ಮೂಲಕ ತಿಳಿಸಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಮುಗಿಸಿದ ನಂತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಲು ಕೃಷಿಕ್ ಸರ್ವೋದಯ ಫೌಂಡೇಶನ್ ಸಂಸ್ಥೆಯ ಜೊತೆ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಈ ವೇಳೆ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಗುಂಡಪ್ಪಗೌಡರು ವಹಿಸಿದ್ದು, ಕಾರ್ಯದರ್ಶಿ ಪಿ.ವಿಶ್ವನಾಥ್ ಮುಖ್ಯ ಅತಿಥಿಗಳಾಗಿದರು. ಅತಿಥಿಗಳಾಗಿ ಕೋಶಾಧ್ಯಕ್ಷ ಶ್ರೀಶೈಲರಾಮಣ್ಣವರ್ ಹಾಗೂ ಕಾಲೇಜು ನಿರ್ವಹಣಾ ಮಂಡಳಿಯ ಅಧ್ಯಕ್ಷ ಟಿ.ನಾಗರಾಜು ಅವರು ಉಪಸ್ಥಿತರಿದ್ದರು. ಪ್ರಾಚಾರ್ಯ ಡಾ.ಎಸ್.ಮರೀಗೌಡ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಅರ್ಜಿ ಆಹ್ವಾನ

ಮೈಸೂರು, ಸೆ.1–2023–24ನೇ ಸಾಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ಅರ್ಜಿ ಆಹ್ವಾನಿಸಿದೆ

B.Ed, D.Ed ಸ್ಪೆಷಲ್ ಇನ್ಸೆಂಟಿವ್ ಸ್ಕೀಮ್' ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಶನ್‌ನಿಂದ ಮಾನ್ಯತೆ ಪಡೆದ ಪಡೆದಿರುವ ಬಿ.ಎಡ್ ಕೋರ್ಸುಗಳ ಹಾಗೂ ಡಿಪಾರ್ಟ್ಮೆಂಟ್ ಆಫ್ ಸ್ಟೇಟ್ ಎಜುಕೇಶನ್ ರಿಸರ್ಚ್ ಅಂಡ್ ಟ್ರೈನಿಂಗ್‌ನಿಂದ ಮಾನ್ಯತೆ ಪಡೆದಿರುವ ಡಿ.ಎಡ್ ಕೋರ್ಸುಗಳ ಸರ್ಕಾರಿ, ಅರೆ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ಬಿ.ಎಡ್ ಹಾಗೂ ಡಿ.ಎಡ್ ಕೋರ್ಸ್‌ಗಳಿಗೆ ದಾಖಲಾತಿ ಹೊಂದಿ ವ್ಯಾಸಂಗ ಮಾಡುತ್ತಿರುವ ಅಲ್ಪ ಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ವಿದ್ಯಾರ್ಥಿಗಳಿಗೆ 25 ಸಾವಿರ ರೂ.ಗಳ ವಿಶೇಷ ಪ್ರೋತ್ಸಾಹ ಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಸೇವಾ ಸಿಂಧು ಪೋರ್ಟಲ್ https://sevasindhu.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 21 ಕೊನೆಯ ದಿನಾಂಕವಾಗಿರುತ್ತದೆ ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳ ಕಚೇರಿ, ಇಲಾಖೆ ವೆಬ್‌ಸೈಟ್ https://dom.karnataka. gov.in ಮತ್ತು ಹೆಲ್ಪ್‌ಡೆಸ್ಕ್ ನಂ: 8277799990 ಸಂಪರ್ಕಿಸಬಹುದು.

ಆಯುಕ್ತರ ವಿರುದ್ಧ ಮೇಯರ್ ಕಾನೂನು ಹೋರಾಟ ಮಾಡಲಿ

ಕೌನ್ಸಿಲ್ ಸಭೆ ರದ್ದು ಮಾಡಿದ್ದು ಖಂಡನೀಯ: ಮಾಜಿ ಮೇಯರ್ ಬಿ.ಎಲ್. ಭೈರಪ್ಪ



ಮೈಸೂರು, ಸೆ.1(ಜಿಎ)–ಯಾವುದೇ ಕೌನ್ಸಿಲ್ ಸಭೆಯನ್ನು ಮುಂದೂಡುವ ಹಾಗೂ ರದ್ದು ಮಾಡುವ ಅಧಿಕಾರ ಇರುವುದು ಮೇಯರ್ ಅವರಿಗೆ ಮಾತ್ರ. ಆದರೆ, ಆ.31ರ ಸಾಮಾನ್ಯ ಕೌನ್ಸಿಲ್ ಸಭೆಯನ್ನು ಪಾಲಿಕೆ ಆಯುಕ್ತರು ರದ್ದು ಮಾಡಿದ್ದು, ಅವರ ವಿರುದ್ಧ ಮೇಯರ್ ಹೋರಾಟ ಮಾಡಬೇಕೆಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿಗದಿಯಾಗಿದ್ದ ಮೈಸೂರು ಮಹಾನಗರ ಪಾಲಿಕೆ ಸಾಮಾನ್ಯ ಕೌನ್ಸಿಲ್ ಸಭೆಯನ್ನು ಪಾಲಿಕೆ ಆಯುಕ್ತರು ರದ್ದು ಮಾಡಿರುವುದು ಖಂಡನೀಯ. ನಿಯಮದ ಪ್ರಕಾರ ಯಾವುದೇ ಕೌನ್ಸಿಲ್ ಸಭೆ ಮುಂದೂಡಿಕೆ ಅಥವಾ ರದ್ದು ಮಾಡುವ ಅಧಿಕಾರ ಇರುವುದು ಮೇಯರ್‌ಗೆ ಮಾತ್ರ. ಇದು 1976ರ ಕೆಎಂಸಿ ಆಕ್ಟ್‌ನಲ್ಲಿ ಸ್ಪಷ್ಟವಾಗಿದೆ. ಹೀಗಿದ್ದರೂ ಆಯುಕ್ತರು ಅಧಿಕಾರ ದುರ್ಬಳಕೆ ಮಾಡಿಕೊಂಡು ಸಭೆ ರದ್ದು ಮಾಡುವ ಮೂಲಕ ನಿಯಮ ಉಲ್ಲಂಘಿಸಿದ್ದಾರೆ. ಜತೆಗೆ ಮೇಯರ್ ಹುದ್ದೆಯನ್ನು ಅವಮಾನಿಸಿದ್ದಾರೆ. ಇದು ಆಯುಕ್ತರ ಉದ್ಧಟತನವಾಗಿದೆ ಎಂದು ಕಿಡಿಕಾರಿದರು.

ಆಯುಕ್ತರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಮೇಯರ್ ಮತ್ತು ಸದಸ್ಯರ ಅಧಿಕಾರ ವ್ಯಾಪ್ತಿಯನ್ನು ಮೊಟಕುಗೊಳಿಸಿದ್ದಾರೆ. ಇದನ್ನು ಯಾರು ಸಹಿಸಲು ಸಾಧ್ಯವಿಲ್ಲ. ಜೊತೆಗೆ, ಮೇಯರ್ ಗಮನಕ್ಕೆ ಬಾರದೇ ಆಯುಕ್ತರಾದಿಯಾಗಿ ಎಲ್ಲಾ ಅಧಿಕಾರಿಗಳು ಕಾರ್ಯಕ್ಷೇತ್ರ ಬಿಟ್ಟು ಹೋಗಿದ್ದಾರೆ. ಇದು ಸರಿಯಾದ ನಡೆಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಆಯುಕ್ತರು ಇಲ್ಲದಿದ್ದರೆ ಕೌನ್ಸಿಲ್ ಕಾರ್ಯದರ್ಶಿಯೇ ಕೌನ್ಸಿಲ್ ಸಭೆ ನಡೆಸಬಹುದು. ಆದರೆ, ಎಲ್ಲಾ ಹಂತದ ಅಧಿಕಾರಿಗಳು ಬೆಂಗಳೂರಿಗೆ ತೆರಳಿದ್ದಾರೆ. ಸಭೆ ಇದ್ದರೂ ಅಧಿಕಾರಿಗಳನ್ನು ಬೆಂಗಳೂರಿಗೆ ಕರೆಸಿಕೊಂಡಿರುವ ಸಚಿವರ ನಡೆ ಸರಿಯಲ್ಲ. ಇದನ್ನು ಯಾವುದೇ ಸರ್ಕಾರ ಮಾಡಿದ್ದರೂ ಅಕ್ಷಮ್ಯ. ಕೂಡಲೇ ಮೇಯರ್ ಅವರು ಕೌನ್ಸಿಲ್ ಕಾರ್ಯದರ್ಶಿ ಮತ್ತು ಆಯುಕ್ತರ ವಿರುದ್ಧ ಸರ್ಕಾರಕ್ಕೆ ಪತ್ರ ಬರೆಯಬೇಕು. ಜತೆಗೆ ಕಾನೂನು ಹೋರಾಟ ಮಾಡಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತವಿರುವ ಮೇಯರ್ ಅವರ ಅವಧಿ ಸೆ.5ಕ್ಕೆ ಅಂತಿಮವಾಗಲಿದ್ದು, ಈ ಹಿನ್ನೆಲೆಯಲ್ಲಿ ಅಂದಿನ ಸಭೆಯಲ್ಲಿ ಬೃಹತ್ ಮೈಸೂರು ಮಹಾನಗರ ಪಾಲಿಕೆ ಸೇರಿದಂತೆ ಹಲವು ಮಹತ್ವದ ಅಜೆಂಡಾಗಳನ್ನು ಚರ್ಚಿಸುವುದಿತ್ತು ಎಂದು ಮೇಯರ್ ಹೇಳಿದ್ದಾರೆ. ಗ್ರೇಟರ್ ಮೈಸೂರನ್ನು ತರಾತುರಿಯಲ್ಲಿ ಮಾಡಲು ಸಾಧ್ಯವಿಲ್ಲ. ಅದಕ್ಕೆ ಸಮೀಕ್ಷೆ ನಡೆಸಬೇಕು. ವಿಸ್ತೃತ ಚರ್ಚೆಗಳಾಗಬೇಕು. ಅದಕ್ಕೆ ಇನ್ನೂ ಸಮಯವಿದೆ ಎಂದರು.

ಅಂಧತ್ವದ ಬಗ್ಗೆ ಜಾಗೃತಿಗೆ ನಾಳೆ ಅಂಧ ನಡಿಗೆ



ಮೈಸೂರು, ಸೆ.1(ಜಿಎ)– ಅಂಧತ್ವದ ಬಗ್ಗೆ ಜಾಗೃತಿ ಮೂಡಿಸಲು ರೋಟರಿ ಪಂಚಶೀಲ ಮೈಸೂರು ಮತ್ತು ರೋಟರಿ ಮೈಸೂರು ಸಂಸ್ಥೆಗಳ ವತಿಯಿಂದ ಇದೇ ಸೆ.3ರಂದು ಅಂಧ ನಡಿಗೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಗವರ್ನರ್ ಎಚ್.ಆರ್.ಕೇಶವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 7.30ಕ್ಕೆ ಹಳೆ ಜಿಲ್ಲಾಧಿಕಾರಿ ಕಚೇರಿಯಿಂದ ಜೆಎಲ್‌ಬಿ ರಸ್ತೆ ರೋಟರಿ ಮೈಸೂರಿನವರೆಗೆ ಅಂಧ ನಡಿಗೆಯನ್ನು ಏರ್ಪಡಿಸಲಾಗಿದ್ದು, ಇದರ ಮೂಲಕ ದಿನನಿತ್ಯ ದೃಷ್ಟಿ ಹೀನರು ಜೀವನದಲ್ಲಿ ಎದುರಿಸುವ ಸವಾಲುಗಳ ಬಗ್ಗೆ ಸಾಮಾನ್ಯರಿಗೂ ಅರಿವು ಮೂಡಿಸಲೆಂಬ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ದೃಷ್ಟಿಹೀನರು ಮುಂದೆ ಸಾಗಿದರೆ ಅವರ ಭುಜದ ಮೇಲೆ ಕೈ ಇಟ್ಟು ಇತರರು ಸಾಗುತ್ತಾರೆ ಎಂದರು. ಸೆ.2 ಮತ್ತು 3ರಂದು ನಗರದ ವಿದ್ಯಾರಣ್ಯಪುರಂನ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ ಸಭಾಂಗಣದಲ್ಲಿ ಸಮುದಾಯ ದೃಷ್ಟಿಶಾಸ್ತ್ರ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದ್ದು, ಅನಿರುದ್ಧ ರಾಯ್ ಚೌಧರಿ ಸೇರಿದಂತೆ ಮತ್ತಿತರ ತಜ್ಞರು ಭಾವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ರವಿಶಂಕರ್, ಕಿರಣ್ ರಾಬರ್ಟ್, ಆನಂದ್, ಪ್ರವೀಣ ಉಪಸ್ಥಿತರಿದ್ದರು.

ಮಕ್ಕಳು ರಾಖಿ ಕಟ್ಟಿಕೊಂಡಿದ್ದಕ್ಕೆ ಆಕ್ಷೇಪ

ಅವಿಲಾ ಶಾಲೆ ವಿರುದ್ಧ ಪೋಷಕರು, ಹಿಂದೂ ಸಂಘಟನೆಗಳ ದೂರು



ಮೈಸೂರು, ಸೆ.1(ಜಿಎ)–ಶಾಲೆಗೆ ರಾಖಿ ಕಟ್ಟಿಕೊಂಡು ಬಂದ ವಿದ್ಯಾರ್ಥಿಗಳನ್ನು ನಿಂದಿಸಲಾಗಿದೆ ಎಂದು ಆರೋಪಿಸಿ, ಮೈಸೂರಿನ ಕೃಷ್ಣವಿಲಾಸ್ ರಸ್ತೆಯಲ್ಲಿರುವ ಅವಿಲಾ ಕಾನ್ವೆಂಟ್ ವಿರುದ್ಧ ಪೋಷಕರು ಮತ್ತು ಹಿಂದೂ ಸಂಘಟನೆಗಳು ಪೊಲೀಸರಿಗೆ ದೂರು ನೀಡಿದ್ದಾರೆ.

ರಕ್ಷಾಬಂಧನ್ ಅಂಗವಾಗಿ ಹಲವು ವಿದ್ಯಾರ್ಥಿಗಳು ಶಾಲೆಗೆ ರಾಖಿ ಕಟ್ಟಿಕೊಂಡು ಬಂದಿದ್ದರು. ಅದನ್ನು ಕಂಡ ಶಿಕ್ಷಕರು ರಾಖಿ ಕಟ್ಟಿಕೊಂಡು ಬರುವಂತಿಲ್ಲವೆಂದು ತಿಳಿಸಿ, ಅದನ್ನು ಕತ್ತರಿಯಿಂದ ಕತ್ತರಿಸಿ, ವಿದ್ಯಾರ್ಥಿಗಳನ್ನು ನಿಂದಿಸಿದ್ದಲ್ಲದೇ, ಮತ್ತೆ ರಾಖಿ ಕಟ್ಟಿಕೊಂಡು ಬಂದರೆ, 50 ರೂ. ದಂಡ ಕಟ್ಟಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆಂದು ಪೋಷಕರು ಆರೋಪಿಸಿದ್ದಾರೆ. ಅಲ್ಲದೇ ಇದರ ಬಗ್ಗೆ ವಿಚಾರಿಸಲು ಹೋದಾಗ ಶಾಲಾ ಆಡಳಿತ ಮಂಡಳಿಯವರು ಸೂಕ್ತ ಉತ್ತರ ನೀಡದೇ ಪೋಷಕರ ವಿರುದ್ಧ ಕೂಗಾಡಿದ್ದಾರೆಂದು ಆರೋಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಶುಕ್ರವಾರ ಮಾಜಿ ಕಾರ್ಪೋರೇಟರ್ ಪ್ರಶಾಂತ್ ಗೌಡ ನೇತೃತ್ವದಲ್ಲಿ ಪೋಷಕರು ಮತ್ತು ಹಿಂದೂ ಸಂಘಟನೆಗಳ ಕಾರ್ಯಕರ್ತರು ಶಾಲಾ ಆಡಳಿತ ಮಂಡಳಿ ವಿರುದ್ಧ ಪ್ರತಿಭಟನೆ ನಡೆಸಲು ಶಾಲೆ ಬಳಿ ತೆರಳಿದ್ದಾಗ ಪೊಲೀಸರು ಅವರನ್ನು ತಡೆದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಶಾಲೆಯಿಂದ ದೇವರಾಜ ಠಾಣೆಯವರೆಗೂ ಮೆರವಣಿಗೆ ತೆರಳಿ ಶಾಲೆ ವಿರುದ್ಧ ದೂರು ಸಲ್ಲಿಸಿದ್ದಾರೆ.

ವಿಟಿಯುನಲ್ಲಿ ಆನ್‌ಲೈನ್ ಪದವಿ, ಸ್ನಾತಕೋತ್ತರ ಪದವಿ ಕೋರ್ಸ್ ಆರಂಭ

ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಸ್.ವಿದ್ಯಾಶಂಕರ್ ಮಾಹಿತಿ



ಮೈಸೂರು, ಸೆ.1(ಆರ್‌ಕೆ)–25 ವರ್ಷಗಳನ್ನು ಪೂರ್ಣಗೊಳಿಸಿರುವ ಕರ್ನಾಟಕದ ಪ್ರತಿಷ್ಠಿತ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ (ವಿಟಿಯು)ದಲ್ಲಿ ಇದೀಗ ಆನ್‌ಲೈನ್ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಆರಂಭಿಸಲಾಗಿದೆ.

ಮೈಸೂರಿನ ಹಂಚ್ಯಾ–ಸಾತಗಳ್ಳಿಯಲ್ಲಿರುವ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ವಿಟಿಯು ಕುಲಪತಿ ಪ್ರೊ. ಎಸ್.ವಿದ್ಯಾಶಂಕರ್, ಜಾಗತಿಕ ಮಟ್ಟದಲ್ಲಿ ಗುಣಮಟ್ಟದ ಪದವಿ ಶಿಕ್ಷಣಕ್ಕೆ ಪ್ರವೇಶ ವಿಸ್ತರಿಸುವ ಸಲುವಾಗಿ ಪದವಿ ಅಧ್ಯಯನ ಮಾಡಲು ಆಸಕ್ತಿ ಉಳ್ಳವರಿಗಾಗಿ ವಿಶ್ವವಿದ್ಯಾನಿಲಯದಲ್ಲಿ ಆನ್‌ಲೈನ್ ಕಾರ್ಯಕ್ರಮ ಆರಂಭಿಸಿರುವುದಾಗಿ ತಿಳಿಸಿದರು.

ವಿದ್ಯಾರ್ಥಿಗಳು ಶಿಕ್ಷಣದ ಗುಣಮಟ್ಟದಲ್ಲಿ ಯಾವುದೇ ರಾಜೀ ಮಾಡಿಕೊಳ್ಳದೆ, ತಾವಿರುವ ಸ್ಥಳದಿಂದಲೇ ತಾಂತ್ರಿಕ ಶಿಕ್ಷಣ ಪಡೆಯಬಹುದಾಗಿದ್ದು, 3 ಪದವಿ ಶ್ರೇಣಿಯ ಹಾಗೂ 12 ಸ್ನಾತಕೋತ್ತರ ಪದವಿ ಶ್ರೇಣಿಯ ಕೋರ್ಸ್‌ಗಳಿಗೆ ಪ್ರವೇಶ ಪಡೆದು ವ್ಯಾಸಂಗ ಮಾಡಲು ಎಐಸಿಟಿಇ ಅನುಮತಿ ನೀಡಿದ್ದು, ವಿಶ್ವವಿದ್ಯಾನಿಲಯವು ಯುಜಿಸಿಯಿಂದ ಅರ್ಹತೆ ಪಡೆದಿದೆ ಎಂದು ತಿಳಿಸಿದರು.

ಬಿಬಿಎ ಡಿಜಿಟಲ್ ಮಾರ್ಕೆಟಿಂಗ್, ಬಿಸಿಎ ಡೇಟಾ ಸೈನ್ಸ್, ಬಿಸಿಎ ಡೇಟಾ ಅನಾಲಿಸಿಸ್, ಯುಜಿ ಪದವಿ ಕೋರ್ಸ್‌ಗಳನ್ನು 6 ಸೆಮಿಸ್ಟರ್‌ಗಳಲ್ಲಿ 3 ವರ್ಷ, ಎಂಬಿಎ ಡಿಜಿಟಲ್ ಮಾರ್ಕೆಟಿಂಗ್ ಎಂಬಿಎ–ಹೆಚ್‌ಆರ್, ಎಂಎಂ, ಎಫ್‌ಎಂ, ಬ್ಯುಸಿನೆಸ್ ಅನಾಲಿಸಿಸ್, ಎಂಸಿಎ, ಎಂಸಿಎ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂಡ್ ಡೇಟಾ ಸೈನ್ಸ್, ಸೈಬರ್ ಸೆಕ್ಯೂರಿಟಿ ಅಂಡ್ ಕ್ಲೌಡ್ ಕಂಪ್ಯೂಟಿಂಗ್ ಸ್ನಾತಕೋತ್ತರ ಕೋರ್ಸ್‌ಗಳನ್ನು 4 ಸೆಮಿಸ್ಟರ್‌ಗಳಲ್ಲಿ 2 ವರ್ಷ ಪೂರೈಸಬಹುದು ಎಂದು ಕುಲಪತಿಗಳು ವಿವರಿಸಿದರು. ಪಿಜಿ ಡಿಪ್ಲೋಮಾ–ಫೈನಾನ್ಸಿಯಲ್ ಅನಾಲಿಟಿಕ್ಸ್, ಮಾರ್ಕೆಟಿಂಗ್ ಅನಾಲಿಟಿಕ್ಸ್, ಹೆಚ್‌ಆರ್ ಅನಾಲಿಟಿಕ್ಸ್, ಇನ್ವೆಸ್ಟ್‌ಮೆಂಟ್ ಮ್ಯಾನೇಜ್‌ಮೆಂಟ್, ರಿಸ್ಕ್ ಮ್ಯಾನೇಜ್‌ಮೆಂಟ್ ಫೈನಾನ್ಸಿಯಲ್ ಮ್ಯಾನೇಜ್ ಮೆಂಟ್, ರೀಟೇಲ್ ಮ್ಯಾನೇಜ್‌ಮೆಂಟ್, ಸೈಬರ್ ಅಂಡ್ ಕ್ಲೌಡ್ ಕಂಪ್ಯೂಟಿಂಗ್, ಬಿಗ್ ಡೇಟಾ ಅನಾಲಿಟಿಕ್ಸ್ ಹಾಗೂ ಸಾಫ್ಟ್‌ವೇರ್ ಟೆಸ್ಟಿಂಗ್ ಕೋರ್ಸ್‌ಗಳನ್ನು 4 ಸೆಮಿಸ್ಟರ್‌ಗಳಲ್ಲಿ 2 ವರ್ಷ ಪಡೆಯಬಹುದಾಗಿದೆ ಎಂದು ಅವರು ತಿಳಿಸಿದರು.

ಆನ್‌ಲೈನ್ ಪ್ರೋಗ್ರಾಂಗೆ ವೆಬ್‌ಸೈಟ್ https:||onlinedegree.vtu.ac.inಗೆ ಭೇಟಿ ನೀಡಬೇಕು. ಪ್ರವೇಶ ಪಡೆಯಲು ಸೆಪ್ಟೆಂಬರ್ 30ರವರೆಗೆ ಅವಕಾಶವಿದೆ. ಪ್ರವೇಶ ಶುಲ್ಕ ಪಾವತಿ, ತರಗತಿಗಳು, ಪಠ್ಯ ಸಾಮಗ್ರಿ, ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಆನ್‌ಲೈನ್‌ನಲ್ಲಿ ಮಾಹಿತಿ ಲಭ್ಯವಿದೆ ಎಂದು ಪ್ರೊ. ವಿದ್ಯಾಶಂಕರ್ ನುಡಿದರು.

ಪ್ರಸ್ತುತ ವಿಟಿಯು ರಾಜ್ಯಾದ್ಯಂತ 212 ಇಂಜಿನಿಯರಿಂಗ್ ಮತ್ತು ಆರ್ಕಿಟೆಕ್ಚರ್ ಕಾಲೇಜುಗಳನ್ನು ಹೊಂದಿದ್ದು, 25 ಸ್ವಾಯತ್ತ, 17 ಸರ್ಕಾರಿ, 26 ಆರ್ಕಿಟೆಕ್ಚರ್, 1 ಕಾನ್‌ಸ್ಟಿಟ್ಯುಯೆಂಟ್ ಕಾಲೇಜನ್ನು ಒಳಗೊಂಡಿದೆ. 3 ಲಕ್ಷ ವಿದ್ಯಾರ್ಥಿಗಳು 42 ಪದವಿ ಹಾಗೂ 94 ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ನೀಡುತ್ತಿದೆ. ವಿವಿಧ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 923 ವಿಭಾಗಗಳನ್ನು ಸಂಶೋಧನಾ ಕೇಂದ್ರಗಳನ್ನಾಗಿ ಗುರ್ತಿಸಿರುವುದು ವಿಶ್ವವಿದ್ಯಾನಿಲಯದ ಸಾಧನೆಯಾಗಿದೆ ಎಂದ ಅವರು, 9000 ಸಂಶೋಧನಾ ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ನೀಡಿರುವುದಲ್ಲದೆ, ಎಂಎಸ್ಸಿ (Eng.) ಮುಂದುವರಿಸಲು ವೇದಿಕೆ ಒದಗಿಸಿದೆ ಎಂದರು.

ಮೈಸೂರು ಮಿತ್ರ ಶನಿವಾರ 2 ಸೆಪ್ಟೆಂಬರ್ 2023

ಕುಶಾಲನಗರದಲ್ಲಿ 40 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರು ಯೋಜನೆ ಆರಂಭ

ಸಾರಿಗೆ ಬಸ್ ನಿಲ್ದಾಣದ ಬಳಿ ಇಂದಿರಾ ಕ್ಯಾಂಟೀನ್



ಕುಶಾಲನಗರ, ಸೆ.1– ನಗರ ನೀರು ಸರಬರಾಜು ಯೋಜನೆಯಡಿ 40 ಕೋಟಿ ರೂ. ಅನುದಾನಕ್ಕೆ ಸದ್ಯದಲ್ಲಿಯೆ ಅಪೆಕ್ಸ್ ನಿಂದ ಅನುಮೋದನೆ ದೊರೆತು ಅನುದಾನ ಕೂಡ ಬಿಡುಗಡೆಯಾಗಲಿದೆ ಎಂದು ಶಾಸಕ ಡಾ.ಮಂಥರ್‌ಗೌಡ ತಿಳಿಸಿದ್ದಾರೆ.

ಇಲ್ಲಿನ ಕಾವೇರಿ ನದಿ ರಸ್ತೆಯಲ್ಲಿರುವ ಪುರಸಭೆ ಕಚೇರಿಯಲ್ಲಿ ಶುಕ್ರವಾರ ಪುರಸಭೆ ಆಡಳಿತಾಧಿಕಾರಿ ಡಾ.ಯತೀಶ್ ಉಲ್ಲಾಳ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಭೆಯಲ್ಲಿ ಶಾಸಕರು ಮಾತನಾಡಿ, ಕುಡಿಯುವ ನೀರಿನ ಸರಬರಾಜು ಯೋಜನೆಯಡಿ ಪುರಸಭೆ ವ್ಯಾಪ್ತಿಯ ಪಟ್ಟಣ ಸೇರಿದಂತೆ ಮುಳ್ಳುಸೋಗೆ, ಗಂಧದ ಕೋಟೆ ಗ್ರಾಮಗಳಿಗೂ ಕಾವೇರಿ ನದಿಯಿಂದ ಜಾಕ್ ವೆಲ್ ಮೂಲಕ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಪಟ್ಟಣದ ತಾವರೆ ಕೆರೆ ಹಾಗೂ ಮುಳ್ಳುಸೋಗೆ ಬಸವೇಶ್ವರ ಕೆರೆಗಳನ್ನು 2 ಕೋಟಿ ರೂ. ವೆಚ್ಚದಲ್ಲಿ ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಪಟ್ಟಣದ ಯೋಜನಾ ಪ್ರಾಧಿಕಾರದಲ್ಲಿ ಕೆರೆಗಳ ಅಭಿವೃದ್ಧಿಗೆ ಮೀಸಲಿರಿಸಿರುವ 2 ಕೋಟಿ ರೂ. ಅನುದಾನದಲ್ಲಿ ಹೊಸದಾಗಿ ಡಿಪಿಆರ್ ಸಿದ್ಧಪಡಿಸಿ ಎರಡು ಕೆರೆಗಳನ್ನು ಅಭಿವೃದ್ಧಿ ಪಡಿಸಿ ಕಾರಂಜಿ ಹಾಗೂ ದೋಣಿ ವಿಹಾರದೊಂದಿಗೆ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿ ರೂಪಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಅದೇ ರೀತಿ ಕುಶಾಲನಗರ ಪಟ್ಟಣಕ್ಕೆ ಇಂದಿರಾ ಕ್ಯಾಂಟೀನ್ ಮಂಜೂರಾಗಿದ್ದು, ಕೆಎಸ್‌ಆರ್‌ಟಿಸಿ ಅಥವಾ ಸಮುದಾಯ ಆರೋಗ್ಯ ಕೇಂದ್ರ ಬಳಿ ಕ್ಯಾಂಟೀನ್ ತೆರೆಯಲು ಕ್ರಮ ಕೈಗೊಳ್ಳಲಾಗುತ್ತದೆ ಎಂದ ಅವರು, ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ 5 ಕೋಟಿ ರೂ. ಅನುದಾನ ಮಂಜೂರಾತಿ ಪ್ರಯತ್ನಿಸಿದ್ದು, ಸದ್ಯದಲ್ಲಿಯೇ ಸರ್ಕಾರದಿಂದ ಅನುದಾನ ಬಿಡುಗಡೆಯಾಗಲಿದೆ ಎಂದು ಹೇಳಿದರು.

ಒಳಚರಂಡಿ ಯೋಜನೆ ಕಾಮಗಾರಿ ಪ್ರಗತಿ ಬಗ್ಗೆ ಸಭೆಗೆ ಮಾಹಿತಿ ನೀಡಿದ ಯುಜಿಡಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಜಯ್ ಮುಂದಿನ ಮೂವತ್ತು ದಿನಗಳ ಒಳಗೆ ಕಾಮಗಾರಿಗೆ ಚಾಲನೆ ನೀಡಲಾಗುತ್ತದೆ ಎಂದು ಹೇಳಿದರು. ಮುಂದಿನ ವಾರ ಯುಜಿಡಿ ಹಾಗೂ ಕುಡಿಯುವ ನೀರಿನ ಯೋಜನೆ ಅನುಷ್ಠಾನ ಕುರಿತು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಲಾಗುತ್ತದೆ. ಈ ತಿಂಗಳ ಅಂತ್ಯದೊಳಗೆ ಯುಜಿಡಿಗೆ ಪ್ರಾಯೋಗಿಕವಾಗಿ ಚಾಲನೆ ನೀಡದೆ ಹೋದರೆ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಇದೇ ಸಂದರ್ಭ ಪುರಸಭೆ ಕಚೇರಿ ಕಟ್ಟಡದ ಮುಂದುವರಿದ ಕಾಮಗಾರಿಗೆ ರೂ.1.60 ಕೋಟಿಗೆ ಕ್ರಿಯಾಯೋಜನೆಗೆ ಹಾಗೂ ನಮ್ಮ ಕ್ಲಿನಿಕ್ ದುರಸ್ತಿ ಕಾಮಗಾರಿ ರೂ.3 ಲಕ್ಷ ಕ್ರಿಯಾಯೋಜನೆಗೆ, ಶ್ರದ್ಧಾಂಜಲಿ ವಾಹನದ ಬಾಡಿಬಿಲ್ಡಿಂಗ್ ಕಾಮಗಾರಿ ರೂ.2.10 ಲಕ್ಷ ಕ್ರಿಯಾಯೋಜನೆಗೆ, ಬೀದಿದೀಪ ನಿರ್ವಹಣೆಗೆ ರೂ.30 ಲಕ್ಷಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಯಿತು. ಈ ಸಂದರ್ಭ ಪುರಸಭೆ ಮುಖ್ಯಾಧಿಕಾರಿ ಕೃಷ್ಣಪ್ರಸಾದ್, ಸದಸ್ಯರಾದ ಪ್ರಮೋದ್ ಮುತ್ತಪ್ಪ, ಬಿ.ಜೈವರ್ಧನ್, ರೇಣುಕಾ, ವಿ.ಎಸ್.ಆನಂದ್ ಕುಮಾರ್, ಖಾಲಿ ಮುಲ್ಲಾ, ಅಮೃತ್ ರಾಜ್, ಜಗದೀಶ್, ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ವರ್ಗವಾಗಿರುವ ಡಿಪೋ ಮ್ಯಾನೇಜರ್ ವಜಾಕ್ಕೆ ಆಗ್ರಹ

ಮಡಿಕೇರಿ, ಸೆ.1– ಮಡಿಕೇರಿ ವಿಭಾಗದ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ಕರ್ತವ್ಯದಲ್ಲಿದ್ದು, ಇದೀಗ ರಾಮನಾಥಪುರಕ್ಕೆ ವರ್ಗಾವಣೆಗೊಂಡಿರುವ ವ್ಯವಸ್ಥಾಪಕರನ್ನು ತಕ್ಷಣ ಸೇವೆಯಿಂದ ವಜಾಗೊಳಿಸಬೇಕೆಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ವ್ಯವಸ್ಥಾಪಕಿಯ ವಿರುದ್ಧದ ಆರೋಪಗಳು ಗಂಭೀರ ಸ್ವರೂಪದಿಂದ ಕೂಡಿರುವುದರಿಂದ ಕೇವಲ ವರ್ಗಾವಣೆ ಒಂದೇ ಶಿಕ್ಷೆಯಾಗಬಾರದು, ತಕ್ಷಣ ಇವರನ್ನು ಸೇವೆಯಿಂದ ವಜಾಗೊಳಿಸಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ. ಕೆಎಸ್‌ಆರ್‌ಟಿಸಿ ನೌಕರ ಹೆಬ್ಬಾಲೆಯ ಅಭಿಷೇಕ್ ಎಂಬವರು ಇತ್ತೀಚೆಗೆ ಕೆಎಸ್‌ಆರ್‌ಟಿಸಿ ಡಿ.ಸಿ. ಹಾಗೂ ವ್ಯವಸ್ಥಾಪಕರ ಎದುರೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಈ ಪ್ರಯತ್ನಕ್ಕೆ ವ್ಯವಸ್ಥಾಪಕರು ಕಿರುಕುಳ ನೀಡಿರುವುದೇ ಕಾರಣವೆಂದು ಅಭಿಷೇಕ್ ಆರೋಪಿಸಿದ್ದಾರೆ. ಕಳೆದ 8 ವರ್ಷಗಳಿಂದ ತಮ್ಮ ಪ್ರಭಾವ ಬಳಸಿ ಮಡಿಕೇರಿಯಲ್ಲೇ ಸೇವೆ ಸಲ್ಲಿಸುತ್ತಿದ್ದ ವ್ಯವಸ್ಥಾಪಕರ ವಿರುದ್ಧ ಕಿರುಕುಳ ಆರೋಪ ಹೊರಿಸಿ ಇಲ್ಲಿನ ನೌಕರರು ಹಾಗೂ ಕಾರ್ಮಿಕ ವರ್ಗ ಹಲವು ಬಾರಿ ಲಿಖಿತ ರೂಪದಲ್ಲಿ ದೂರು ನೀಡಿದ್ದರೂ ಅಧಿಕಾರಿಗಳು ಕ್ರಮ ಕೈಗೊಂಡಿರಲಿಲ್ಲ.

ನೌಕರರ ಇಚ್ಛೆಯಂತೆ ವ್ಯವಸ್ಥಾಪಕರನ್ನು ವರ್ಗಾವಣೆಗೊಳಿಸಲೇಬೇಕೆಂದು ಕಳೆದ 3 ತಿಂಗಳಿನಿಂದ ನಾವುಗಳು ಮಾಡಿದ ಪ್ರಯತ್ನಕ್ಕೆ ಇದೀಗ ಫಲ ದೊರೆಯಿತು. ಆದರೆ ವರ್ಗಾವಣೆಯಾದರೂ ಕಳೆದ ಮೂರು ವಾರಗಳಿಂದ ಬಿಡುಗಡೆಗೊಳ್ಳದೆ ಮತ್ತೆ ತಮ್ಮ ಪ್ರಭಾವ ಬಳಸಿ ಮಡಿಕೇರಿಯಲ್ಲೇ ಠಿಕಾಣಿ ಹೂಡಿದ್ದಾರೆ. ಇವರಿಂದ ಮತ್ತಷ್ಟು ಕಿರುಕುಳ ಎದುರಿಸಬೇಕಾಗುತ್ತದೆ ಎನ್ನುವ ಆತಂಕದಲ್ಲಿ ಅಭಿಷೇಕ್ ಎಲ್ಲರೆದುರೇ ವಿಷ ಸೇವಿಸಿದ್ದಾರೆ. ಇದೊಂದು ಗಂಭೀರ ಸ್ವರೂಪದ ಪ್ರಕರಣವಾಗಿದ್ದು, ವ್ಯವಸ್ಥಾಪಕಿಯನ್ನು ವಜಾಗೊಳಿಸಿದರಷ್ಟೇ ನೊಂದವರಿಗೆ ನ್ಯಾಯ ಸಿಗಲು ಸಾಧ್ಯವಿಲ್ಲ ಎಂದು ಚಂದ್ರಕಲಾ ಅಭಿಪ್ರಾಯಪಟ್ಟಿದ್ದಾರೆ.

ನಕಲಿ ಮದ್ಯ ತಯಾರಿಕಾ ಜಾಲಪತ್ತೆ

ಆರೋಪಿ ಬಂಧನ, ಮದ್ಯ, ಲೇಬಲ್‌ಗಳ ವಶ





ಮಡಿಕೇರಿ, ಸೆ.1– ಕೇರಳ ರಾಜ್ಯದಲ್ಲಿ ಅಕ್ರಮವಾಗಿ ಮಾರಾಟ ಮಾಡಲು ಕೊಡಗು ಜಿಲ್ಲೆಯಲ್ಲಿ ನಕಲಿ ಮದ್ಯ ತಯಾರಿಸುತ್ತಿದ್ದ ಜಾಲವನ್ನು ಭೇದಿಸುವಲ್ಲಿ ಕೊಡಗು ಪೊಲೀಸರು ಯಶಸ್ವಿಯಾಗಿದ್ದಾರೆ. ಭಾಗಮಂಡಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ಬೆಳಕಿಗೆ ಬಂದಿದ್ದು, ತಾವೂರು ಗ್ರಾಮದ ನಿವಾಸಿ ಹಾಸೀಂ (47) ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ತಾವೂರು ಗ್ರಾಮದ ತೋಟದ ಲೈನ್ ಮನೆಯೊಂದರಲ್ಲಿ ಕೇರಳ ಮೂಲದ ವ್ಯಕ್ತಿ ಅಕ್ರಮ ಮದ್ಯ ತಯಾರಿಸುತ್ತಿರುವ ಕುರಿತು ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆ ದಾಳಿ ನಡೆಸಿದ ಪೊಲೀಸರು ಆರೋಪಿ ಸಹಿತ ಮದ್ಯ ತಯಾರಿಸಲು ಬಳಸುವ 60 ಕೆ.ಜಿ 300 ಗ್ರಾಂ ಕಾಸ್ಟಿಕ್ ಕ್ಯಾರಮಲ್, 2 ಸಾವಿರ ಖಾಲಿ ಬಾಟಲ್, ಕ್ಯಾಪ್ ಮತ್ತು ವಿವಿಧ ಬ್ರ್ಯಾಂಡ್‌ಗಳ ಲೇಬಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಮಡಿಕೇರಿ ಉಪ ವಿಭಾಗದ ಡಿವೈಎಸ್‌ಪಿ ಎಂ.ಜಗದೀಶ್, ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಭಾಗಮಂಡಲ ಪಿಎಸ್‌ಐ ಶೋಭಾ ಲಮಾಣಿ ಹಾಗೂ ಸಿಬ್ಬಂದಿಗಳು ವಿಶೇಷ ತಂಡವನ್ನು ರಚಿಸಿ ತನಿಖೆ ಕೈಗೊಂಡು ಕಾರ್ಯಾಚರಣೆ ನಡೆಸಿದ್ದಾರೆ.


ಆನೆಕಾಡು ಬಳಿ ಕಾರಿನ ಮೇಲೆ ಬಿದ್ದ ಮರದ ರೆಂಬೆ ಅಪಾಯದಿಂದ ಪಾರು



ಕುಶಾಲನಗರ, ಸೆ1– ಸಮೀಪದ ಆನೆಕಾಡು ಬಳಿ ಚಲಿಸುತ್ತಿದ್ದ ಕಾರಿನ ಮೇಲೆ ಮರದ ರೆಂಬೆ ಬಿದ್ದ ಪರಿಣಾಮ ಕಾರು ಜಖಂಗೊಂಡಿದ್ದು, ಕಾರಿನ ಚಾಲಕ ಅಪಾಯದಿಂದ ಪಾರಾದ ಘಟನೆ ಶುಕ್ರವಾರ ಮಧ್ಯಾಹ್ನ ನಡೆದಿದೆ.

ಕರ್ನಾಟಕ ಕಾವಲು ಪಡೆ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಎಂ.ಕೃಷ್ಣ ತಮ್ಮ ಕಾರಿನಲ್ಲಿ ಹೋಗುತ್ತಿದ್ದ ಸಂದರ್ಭ ಮರವೊಂದು ರಸ್ತೆ ಮೇಲೆ ಉರುಳಿ ಬಿದ್ದಿದ್ದು, ಈ ಮರದ ಕೊಂಬೆವೊಂದು ಕಾರಿನ ಮೇಲೆ ಬಿದ್ದಿದೆ ಅದೃಷ್ಟವಶಾತ್ ಕೃಷ್ಣ ಅಪಾಯ ದಿಂದ ಪಾರಾಗಿದ್ದು, ಕಾರಿನ ಮುಂಭಾಗಕ್ಕೆ ಹಾನಿ ಉಂಟಾಗಿದೆ. ಸ್ಥಳಕ್ಕೆ ಅರಣ್ಯಾಧಿಕಾರಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.


ವಿಧಾನಸೌಧದಲ್ಲಿ ಸಿಎಂ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅವರ ಕಚೇರಿ ಉದ್ಘಾಟನೆ



ಬೆಂಗಳೂರು, ಸೆ.1– ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಮತ್ತು ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಎ.ಎಸ್. ಪೊನ್ನಣ್ಣ ಅವರ ಕಚೇರಿ ವಿಧಾನಸೌಧದಲ್ಲಿ ಉದ್ಘಾಟನೆಗೊಂಡಿತು.

ವಿಧಾನಸೌಧದ ಎರಡನೇ ಮಹಡಿಯ ಕೊಠಡಿ ಸಂಖ್ಯೆ 237, 238 ರಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಕಚೇರಿ ಕಾರ್ಯಾರಂಭಗೊಂಡಿತು. ಶಾಸಕ ಎ.ಎಸ್. ಪೊನ್ನಣ್ಣ ಅವರು ತಮ್ಮ ಪತ್ನಿ ಕಾಂಚನ ಪೊನ್ನಣ್ಣ ಮತ್ತು ತಮ್ಮ ಬೆಂಬಲಿಗರು, ಪಕ್ಷದ ಮುಖಂಡರ ಸಮ್ಮುಖದಲ್ಲಿ ಟೇಪು ಕತ್ತರಿಸುವ ಮೂಲಕ ಕಚೇರಿಯನ್ನು ಉದ್ಘಾಟಿಸಿದರು.

ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ, ಕಾಂಗ್ರೆಸ್ ಮುಖಂಡ ತನ್ನೀರ ಮೈನಾ, ನಾಪೋಕ್ಲು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಇಸ್ಮಾಯಿಲ್, ವಿರಾಜಪೇಟೆ ಪ.ಪಂ ಸದಸ್ಯ ಮತೀನ್, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಿದೇರಿರ ನವೀನ್, ರೆಹಮಾನ್ ಖಾನ್ ಸೇರಿದಂತೆ ಪ್ರಮುಖರು ಈ ವೇಳೆ ಉಪಸ್ಥಿತರಿದ್ದು, ಶಾಸಕರಿಗೆ ಶುಭ ಕೋರಿದರು.



ಕಚೇರಿ ಉದ್ಘಾಟನೆಗೆ ಆಗಮಿಸಿದ್ದ ನಗರಾಭಿವೃದ್ಧಿ ಇಲಾಖೆ ಸಚಿವ ಬೈರತಿ ಸುರೇಶ ಅವರನ್ನು ಶಾಸಕ ಪೊನ್ನಣ್ಣ ಹೂಗುಚ್ಛ ನೀಡಿ ಅಭಿನಂದಿಸಿದರು.

ಗಾಂಜಾ ಮಾರಾಟ: ಓರ್ವನ ಬಂಧನ



ಮಡಿಕೇರಿ, ಸೆ.1– ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ನರಿಯಂದಡ ಗ್ರಾಮದ ಬಸ್ ನಿಲ್ದಾಣದ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದಡಿ ಓರ್ವನನ್ನು ಪೊಲೀಸರು ಬಂಧಿಸಿದ್ದಾರೆ. ಪರಂಬಾಡಿ ನಿವಾಸಿ ಶರ್ಫುದ್ದೀನ್ (27) ಎಂಬಾತ ಬಂಧಿತ ಆರೋಪಿಯಾಗಿದ್ದು, ಈತನ ಬಳಿ ಇದ್ದ 180 ಗ್ರಾಂ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮಡಿಕೇರಿ ಉಪ ವಿಭಾಗದ ಡಿವೈಎಸ್‌ಪಿ ಎಂ. ಜಗದೀಶ್, ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಾಪೋಕ್ಲು ಪಿಎಸ್‌ಐ ಈ.ಮಂಜುನಾಥ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ವಿರಾಜಪೇಟೆ ಬಳಿ ಮಟ್ಕಾ ದಂಧೆ ಪತ್ತೆ: ಇಬ್ಬರ ಬಂಧನ

ವಿರಾಜಪೇಟೆ, ಸೆ.1– ಗ್ರಾಮಾಂತರ ಠಾಣಾ ವ್ಯಾಪ್ತಿಯ ಚೊಕಂಡಳ್ಳಿಯಲ್ಲಿ ಮಟ್ಕಾ ದಂಧೆಯಲ್ಲಿ ತೊಡಗಿದ್ದ ಇಬ್ಬರನ್ನು ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಚೊಕಂಡಳ್ಳಿ ಅಂಗಡಿ ಒಂದರ ಸಮೀಪ ಹೊರ ರಾಜ್ಯದ ಲಾಟರಿ ಫಲಿತಾಂಶಕ್ಕೆ ಚೀಟಿ ಕೊಡುವ ಮೂಲಕ ಮಟ್ಕಾ ದಂಧೆ ನಡೆಸುತ್ತಿದ್ದಾಗ ಖಚಿತ ವರ್ತಮಾನದ ಮೇಲೆ ದಾಳಿ ನಡೆಸಿ ಇಬ್ಬರು ಆರೋಪಿಗಳಾದ ಆಟೋ ಚಾಲಕ ಕಿರಣ್ ಲೋಬೋ, ಅಝೀಜ್ ಎಂಬುವರನ್ನು ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ 2140 ರೂ. ವಶಪಡಿಸಿಕೊಳ್ಳಲಾಗಿದೆ. ವಿರಾಜಪೇಟೆ ಡಿವೈಎಸ್‌ಪಿ ಹಾಗೂ ವೃತ್ತ ನಿರೀಕ್ಷಕರ ಮಾರ್ಗದರ್ಶನದಲ್ಲಿ ಗ್ರಾಮಾಂತರ ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿಗಳು ಈ ಕಾರ್ಯಾಚರಣೆಯನ್ನು ನಡೆಸಿದ್ದಾರೆ ಎಂದು ಹೇಳಲಾಗಿದೆ.

ಕಳೆದೆರಡು ತಿಂಗಳ ಹಿಂದೆ ನಿರಂತರವಾಗಿ ವಿರಾಜಪೇಟೆ ಪಟ್ಟಣದ ಕೆಲವು ನಿರ್ದಿಷ್ಟ ಅಂಗಡಿಯಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ ಆರು ಗಂಟೆ ತನಕ, ಮಣಿಪುರ, ಮಿಝೋರಾಂ, ಕೇರಳ, ನಾಗಾಲ್ಯಾಂಡ್, ರಾಜ್ಯದ ಲಾಟರಿ ಟಿಕೇಟ್‌ಗಳ ಕೊನೆಯ ಮೂರು ಸಂಖ್ಯೆಗೆ 100 ರೂಪಾಯಿಯನ್ನು ಪಡೆದುಕೊಂಡು ಹೆಸರು ಹಾಗೂ ಚೀಟಿಯಲ್ಲಿ ಬರೆದಿಟ್ಟು ಫಲಿತಾಂಶ ಗಂಟೆಗೊಂದು ಬಾರಿ ಹೊರ ಬಿದ್ದ ತಕ್ಷಣ ಕಟ್ಟಿರುವ ಸಂಖ್ಯೆ ಸರಿ ಇದ್ದರೆ 20 ಸಾವಿರ ನೀಡುವ ದಂಧೆ ನಿರಂತರವಾಗಿ ನಡೆಯುತ್ತಿತ್ತು.

ಇದರಿಂದ ಕಾರ್ಮಿಕರು ಆಟೋ ಚಾಲಕರು, ಸರಕಾರಿ ನೌಕರರು, ಕೆಲವು ಸಣ್ಣ ವ್ಯಾಪಾರಿಗಳು ಇದರ ಗೀಳಿಗೆ ಬಿದ್ದು ಲಕ್ಷಾಂತರ ಹಣ ಕಳೆದುಕೊಂಡಿದ್ದರು. ಈ ದಂಧೆಯಲ್ಲಿ ಕೆಲವರು ಲಕ್ಷಾಂತರ ಹಣ ಸಂಪಾದಿಸಿ ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾಗಿ, ಸ್ಥಿತಿವಂತರಾಗಿ ಮೆರೆಯುತ್ತಿದ್ದರು, ಇತ್ತೀಚೆಗೆ ಈ ದಂಧೆಗೆ ನೂತನ ಶಾಸಕರು ಕಡಿವಾಣ ಹಾಕಿದ್ದರು. ಆದರೆ ಇದೀಗ ಅಂಗಡಿಯ ಬದಲು ಬೇರೆ ಬೇರೆ ಕಡೆ ಮೊಬೈಲ್ ಮೂಲಕ ಸಂಪರ್ಕವನಿಟ್ಟುಕೊಂಡು ಈ ದಂಧೆ ನಡೆಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಟೆನ್ನಿಸ್ ಡಬಲ್ಸ್‌ನಲ್ಲಿ ಪದ್ಮಪ್ರಿಯಾಗೆ ಜಯ

ಯಳಂದೂರು, ಸೆ1– ಅಖಿಲ ಭಾರತ ಟೆನಿಸ್ ಅಸೋಸಿಯೇಷನ್ 12 ವರ್ಷ ದೊಳಗಿನವರ ವಿಭಾಗದವರಿಗೆ ಹೈದರಾಬಾದ್‌ನ ಆಶ್ ಅಕಾಡೆಮಿ ನಡೆಸಿದ ರಾಷ್ಟ್ರೀಯ ಸರಣಿಯಲ್ಲಿ ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ 6ನೇ ತರಗತಿ ವಿದ್ಯಾರ್ಥಿನಿ ಪದ್ಮಪ್ರಿಯಾ ಡಬಲ್ಸ್‌ನಲ್ಲಿ ಪ್ರಥಮ ಮತ್ತು ಸಿಂಗಲ್ಸ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.



ಈ ಪಂದ್ಯಾವಳಿಯಲ್ಲಿ ಭಾರತದ ವಿವಿಧ ಭಾಗಗಳಿಂದ (ಕರ್ನಾಟಕ, ತಮಿಳುನಾಡು, ತೆಲಂಗಾಣ, ಮಹಾರಾಷ್ಟ್ರ, ಆಂಧ್ರಪ್ರದೇಶ, ಉತ್ತರ ಪ್ರದೇಶ, ಮಧ್ಯಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ) ಸುಮಾರು 48 ಟೆನಿಸ್ ಆಟಗಾರರು (ಬಾಲಕಿಯರ ವಿಭಾಗ) ಭಾಗವಹಿಸಿದ್ದರು. ಪದ್ಮಪ್ರಿಯಾ ಅವರು ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯಾ ಮತ್ತು ಮೈಸೂರಿನ ಅರಣ್ಯ ಇಲಾಖೆಯ ಕಾರ್ಯನಿರ್ವಹಣೆ ಯೋಜನೆಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ಪಿ. ರಮೇಶ್‌ಕುಮಾರ್ ಅವರ ಪುತ್ರಿ.

ಇಂದು ಮಕ್ಕಳ ಹಕ್ಕುಗಳು, ಬಾಲ್ಯವಿವಾಹ, ಪೋಕ್ಸೋ ಕಾಯ್ದೆ ಕುರಿತು ಅರಿವು ಕಾರ್ಯಕ್ರಮ

ಚಾಮರಾಜನಗರ, ಸೆ1– ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಮಕ್ಕಳ ಹಕ್ಕುಗಳು, ಬಾಲ್ಯ ವಿವಾಹ, ಪೋಕ್ಸೋ ಕಾಯ್ದೆ, ಮಾದಕ ದ್ರವ್ಯ ಅಥವಾ ಮಾದಕ ವಸ್ತು ತಂಬಾಕು ಮಾರಾಟ ನಿಷೇಧ ಕುರಿತು ಜಾಥಾ, ಅರಿವು ಕಾರ್ಯಕ್ರಮವನ್ನು ಸೆ2ರಂದು ಬೆಳಗ್ಗೆ 10 ಗಂಟೆಗೆ ತಾಲೂಕಿನ ಕುದೇರು ಗ್ರಾಮದ ಸರ್ಕಾರಿ ಎಂ. ಸಂಗಶೆಟ್ಟಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಶೀರ್ಷಾಸನ ಚಳವಳಿ



ಚಾಮರಾಜನಗರ, ಸೆ.1– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಶೀರ್ಷಾಸನ ಚಳವಳಿ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಮುಖ್ಯಗೇಟ್ ಮುಂಭಾಗದಲ್ಲಿ ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಾ.ಮುರಳಿ ತಲೆ ಕೆಳಗೆ ಮಾಡಿ ಕರ್ನಾಟಕ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನಿರ್ವಹಣಾ ಮಂಡಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಶಾ.ಮುರಳಿ ಮಾತನಾಡಿ, ಕಾವೇರಿ ನಿರ್ವಹಣಾ ಮಂಡಳಿ ರಚನೆಯಿಂದ ಕರ್ನಾಟಕಕ್ಕೆ ನಿರಂತರ ಅನ್ಯಾಯವಾಗಿದೆ. ರಾಜ್ಯದಲ್ಲಿ ಸರಿಯಾಗಿ ಮಳೆಯಾಗಿಲ್ಲ. ಜಲಾಶಯಗಳಲ್ಲಿ ನೀರಿಲ್ಲ. ಆದರೂ ಕೂಡ ತಮಿಳುನಾಡು ಸರ್ಕಾರ ರಾಜಕೀಯ ತೀಟೆಗಾಗಿ ಪದೇ ಪದೆ ಕಾವೇರಿ ವಿಷಯದಲ್ಲಿ ಕ್ಯಾತೆ ತೆಗೆಯುತ್ತಿದೆ. ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ತಮಿಳುನಾಡಿಗೆ ಕಾವೇರಿ ನೀರು ಬಿಡುವಂತೆ ಒತ್ತಾಯ ಮಾಡುವುದು ಅತ್ಯಂತ ಖಂಡನೀಯವಾಗಿದೆ ಎಂದರು.

ಕಾವೇರಿ ನಿರ್ವಹಣಾ ಮಂಡಳಿ ತಮಿಳುನಾಡು ಏಜೆಂಟ್ ಆಗಿ ಕೆಲಸ ಮಾಡುತ್ತಿದೆ. ಈ ನಿರ್ವಹಣಾ ಮಂಡಳಿ ಕರ್ನಾಟಕಕ್ಕೆ ಒಳ್ಳೆಯದು ಮಾಡಿಲ್ಲ. ತೀರ್ಪು ನೀಡಿಲ್ಲ. ತಮಿಳುನಾಡಿನ ಪರ ತೀರ್ಪು ನೀಡುತ್ತಾ ಬಂದಿದೆ. ಕರ್ನಾಟಕದಲ್ಲಿ ಕುಡಿಯುವ ನೀರಿಗೆ ತೊಂದರೆ ಇದ್ದರೂ ಕೂಡ ತಮಿಳುನಾಡು ಸರ್ಕಾರ 3ನೇ ಬೆಳೆಗೆ ನೀರು ಕೇಳುತ್ತಿದೆ. ಹೀಗೆ ನಿರಂತರವಾಗಿ ತಮಿಳುನಾಡಿಗೆ ನೀರು ಬಿಟ್ಟರೇ ಜಲಾಶಯಗಳು ಬರಿದಾಗಿ ರಾಜ್ಯದ ಜನತೆ ತುಂಬಾ ತೊಂದರೆ ಸಿಗುತ್ತಾರೆ ಎಂದರು.

ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ರಾಜ್ಯದ 28 ಸಂಸದ ಸದಸ್ಯರು, 12 ರಾಜ್ಯಸಭಾ ಸದಸ್ಯರು, 4 ಕೇಂದ್ರ ಸಚಿವರು ರಾಜ್ಯ ಪರವಾಗಿ ಚಕಾರವೆತ್ತಿಲ್ಲ. ನೀವೆಲ್ಲರೂ ಮುಂದಿನ ದಿನಗಳಲ್ಲಿ ರಾಜ್ಯದ ಪರ ಹೋರಾಟ ಮಾಡಬೇಕು ಇಲ್ಲದಿದ್ದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಕ್ಕಪಾಠ ಕಲಿಸಬೇಕಾಗುತ್ತದೆ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ನಿಜಧ್ವನಿ ಗೋವಿಂದರಾಜು, ಮಹೇಶ್ ಗೌಡ, ಕಾರ್ ಬಸವರಾಜು, ಡ್ಯಾನ್ಸ್ ಬಸವರಾಜು, ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಚಾ.ರಾ.ಕುಮಾರ್, ಪ್ಯಾದಹುಂಡಿ ರಾಜು, ಲಿಂಗರಾಜು, ತಾಂಡವಮೂರ್ತಿ, ನಂಜುಂಡಸ್ವಾಮಿ ಇತರರು ಭಾಗವಹಿಸಿದ್ದರು.

ಮ.ಬೆಟ್ಟದ ಹುಂಡಿಯಲ್ಲಿ 2.38 ಕೋಟಿ ರೂ. ಸಂಗ್ರಹ



ಹನೂರು, ಸೆ.1– ಮಲೆ ಮಹದೇಶ್ವರ ಸ್ವಾಮಿ ಬೆಟ್ಟದ ಹುಂಡಿಯಲ್ಲಿ 2.38 ಕೋಟಿ ರೂ. ನಗದು ಮತ್ತು ಚಿನ್ನ, ಬೆಳ್ಳಿ ಸಂಗ್ರಹವಾಗಿದೆ. ಶ್ರೀ ಮಲೆ ಮಹದೇಶ್ವರ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ನೇತೃತ್ವದಲ್ಲಿ ಶುಕ್ರವಾರ ಹುಂಡಿಗಳನ್ನು ತೆರೆದು ಎಣಿಕೆ ನಡೆಸಿದಾಗ 2,26,96,591 ರೂ. ನೋಟುಗಳು, 11,46,586 ನಾಣ್ಯಗಳು ಸಂಗ್ರಹವಾಗಿದೆ. ಇದರೊಂದಿಗೆ 3 ಕೆಜಿ 173 ಗ್ರಾಂ ಬೆಳ್ಳಿ ಮತ್ತು 63 ಗ್ರಾಂ ಚಿನ್ನ ಸಂಗ್ರಹವಾಗಿದೆ. ಜು.27 ರಿಂದ ಆ.31ರವರೆಗೆ 36 ದಿನಗಳಲ್ಲಿ ಈ ಹಣ ಮತ್ತು ಚಿನ್ನಾಭರಣ ಸಂಗ್ರಹವಾಗಿದೆ ಎಂದು ಪ್ರಾಧಿಕಾರದ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಆಲೂರು ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಶೇಷಣ್ಣ ಅವಿರೋಧ ಆಯ್ಕೆ



ಆಲೂರು, ಸೆ.1– ಚಾಮರಾಜನಗರ ತಾಲೂಕು ಆಲೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಸರಗೂರು ಮೋಳೆಯ ಕಾಂಗ್ರೆಸ್ ಬೆಂಬಲಿತ ಎಂ. ಶೇಷಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಾರ್ಯಾಲಯದಲ್ಲಿ ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಇವರೊಬ್ಬರೇ ನಾಮಪತ್ರ ಸಲ್ಲಿಸಿದ ಕಾರಣ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಗಳಾಗಿ ಸಹಕಾರ ಸಂಘಗಳ ಇಲಾಖೆಯ ಸುರೇಶ್ ಭಾಗವಹಿದರು.

ಸಭೆಯಲ್ಲಿ ಉಪಾಧ್ಯಕ್ಷ ಎ.ಎಂ ರಾಜೇಂದ್ರ, ಮಾಜಿ ಅಧ್ಯಕ್ಷ ಹೆಚ್.ಎನ್. ಸ್ವಾಮಿ ಹಾಗೂ ರಮೇಶ, ನಿರ್ದೇಶಕರುಗಳಾದ ಬಸವರಾಜು, ಗೋಪಾಲಸ್ವಾಮಿ, ಬಸವಶೆಟ್ಟಿ, ಮಾದೇಶ್, ಮಲ್ಲಣ್ಣ, ಚಿಕ್ಕತಾಯಮ್ಮ, ಬಸಮ್ಮ, ಬಸವರಾಜು, ಪ್ರಭಾರ ಸಿಇಓ ಸುನೀತಾ, ಮೇಲ್ವಿಚಾರಕರಾದ ಲಿಂಗರಾಜು ಹಾಜರಿದ್ದರು.

ನೂತನ ಅಧ್ಯಕ್ಷ ಶೇಷಣ್ಣ ಮಾತನಾಡಿ, ಸಂಘದ ಅಭಿವೃದ್ಧಿಗೆ ತಮ್ಮ ಅಧಿಕಾರದ ಅವಧಿಯಲ್ಲಿ ಶ್ರಮಿಸುವುದಾಗಿ ತಿಳಿಸಿ ರೈತರ ಅನೂಕುಲಕ್ಕೆ ಸರ್ಕಾರ ಜಾರಿಗೆ ತರುವ ಯೋಜನೆಗಳನ್ನು ತಂದು ಮಾದರಿ ಸಂಘವನ್ನಾಗಿ ಮಾಡುವುದೇ ನನ್ನ ಗುರಿ ಎಂದರು. ಎಪಿಎಂಸಿ ನಿರ್ದೇಶಕ ಪ್ರದೀಪ್ ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿ, ರೈತರ ಏಳ್ಗೆಗೆ ಶ್ರಮಿಸಿ ಸರ್ಕಾರದಿಂದ ಸಾಲಸೌಲಭ್ಯ ಕೊಡಿಸುವಂತೆ ಅಧ್ಯಕ್ಷರಿಗೆ ತಿಳಿಸಿದರು.

ಮುಖಂಡರುಗಳಾದ ಪುಟ್ಟಸ್ವಾಮಿ, ಶಿವಶಂಕರ, ಸಚಿನ್, ಚನ್ನಂಜಸ್ವಾಮಿ, ಕೃಷ್ಣ, ಶೇಷಣ್ಣ, ಶಿವರಾಜು, ಬಂಗಾರು, ಸರಗೂರು ಮೋಳೆಯ ಚಿಕ್ಕಮಾದಶೆಟ್ಟಿ, ಶಂಕರನಾಯ್ಕ, ದೊರೆಸ್ವಾಮಿ ಹಾಜರಿದ್ದರು.

ಸೆ.9, ಜಿಲ್ಲೆಯಾದ್ಯಂತ ಮೆಗಾ ಲೋಕ್ ಅದಾಲತ್

ಚಾಮರಾಜನಗರ, ಸೆ.1– ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಸೆ.9ರಂದು ಜಿಲ್ಲೆಯಾದ್ಯಂತ ಮೆಗಾ ಲೋಕ್ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರು ತಿಳಿಸಿದರು.

ನಗರದ ನ್ಯಾಯಾಲಯದ ಆವರಣದಲ್ಲಿರುವ ವ್ಯಾಜ್ಯ ಪೂರ್ವ ಪರಿಹಾರ ಕೇಂದ್ರದ ಸಭಾಂಗಣದಲ್ಲಿ ಲೋಕ್ ಅದಾಲತ್ ಸಂಬಂಧ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದನ್ವಯ ಸೆ.9ರಂದು ರಾಜ್ಯಾದ್ಯಂತ ಮೆಗಾ ಲೋಕ್ ಅದಾಲತ್ ನಡೆಯಲಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಮತ್ತು ಕೊಳ್ಳೇಗಾಲ ತಾಲೂಕು ನ್ಯಾಯಾಲಯಗಳಲ್ಲಿ ಬೈಠಕ್‌ಗಳನ್ನು ಏರ್ಪಡಿಸಿ ಸಂಧಾನಕಾರರನ್ನು ನೇಮಿಸಿ ಆಯಾ ನ್ಯಾಯಾಲಯದಲ್ಲಿ ಲೋಕ್ ಅದಾಲತ್ ಏರ್ಪಡಿಸಲಾಗಿದೆ.

ಕಳೆದ ಬಾರಿ ವಕೀಲರ, ಕಕ್ಷಿದಾರರ, ಪೊಲೀಸರ, ವಿಮಾ ಕಂಪನಿಗಳ ಹಾಗೂ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಲೋಕ್ ಅದಾಲತ್ ಯಶಸ್ವಿಯಾಗಿ ನಡೆದಿತ್ತು. ಒಟ್ಟು 18,224 ಪ್ರಕರಣಗಳಲ್ಲಿ 14,837 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ಎಂದರು.

ಜಿಲ್ಲೆಯ ವಿವಿಧ ಭಾಗಗಳಲ್ಲಿ ಕೋಟ್ಪಾ ದಾಳಿ : 8300 ರೂ. ದಂಡ ವಸೂಲಿ

ಚಾಮರಾಜನಗರ, ಸೆ.1– ಜಿಲ್ಲಾ ತಂಬಾಕು ನಿಯಂತ್ರಣ ಘಟಕ, ಜಿಲ್ಲಾ ಕಣ್ಗಾವಲು ಘಟಕ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆಯನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಕೋಟ್ಪಾ ತನಿಖಾ ತಂಡದ ಸಹಯೋಗದೊಂದಿಗೆ ಆಗಸ್ಟ್ ಮಾಹೆಯಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕೋಟ್ಪಾ ದಾಳಿ ನಡೆಸಿ ಒಟ್ಟು 93 ಪ್ರಕರಣಗಳಿಗೆ 8300 ರೂ. ದಂಡ ವಿಧಿಸಲಾಗಿದೆ.

ಕೋಟ್ಪಾ ದಾಳಿಯ ವೇಳೆ ನಿಯಮ ಉಲ್ಲಂಘನೆ ಮಾಡಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳು, ಕೋಟ್ಪಾ ಸೆಕ್ಷನ್–4 ಎಚ್ಚರಿಕೆ ನಾಮಫಲಕವನ್ನು ಪ್ರದರ್ಶಿಸದ ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್‌ಗಳು, ಟೀ ಸ್ಟಾಲ್, ಚಿಲ್ಲರೆ ಅಂಗಡಿಗಳು ಹಾಗೂ ಇತರೆ ಅಂಗಡಿಗಳು, ಕೋಟ್ಪಾ ಸೆಕ್ಷನ್–6 (ಎ) ನಾಮಫಲಕವನ್ನು ಪ್ರದರ್ಶಿಸದ ತಂಬಾಕು ಮಾರಾಟವಿರುವ ಅಂಗಡಿಗಳು, ಶಿಕ್ಷಣ ಸಂಸ್ಥೆಯ 100 ಗಜಗಳ ಅಂತರದ ಒಳಗೆ ತಂಬಾಕು ಪದಾರ್ಥಗಳ ಮಾರಾಟ ಮತ್ತು ಸೇವನೆಗೆ ಉತ್ತೇಜನ ನೀಡುವ ಅಂಗಡಿಗಳಿಗೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದ ವ್ಯಕ್ತಿಗಳಿಗೆ ಸ್ಥಳದಲ್ಲೇ ಪ್ರಕರಣ ದಾಖಲಿಸಿ ದಂಡ ವಿಧಿಸಲಾಗಿದೆ. ಕರಪತ್ರ ವಿತರಿಸಿ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳು ಮತ್ತು ತಂಬಾಕು ನಿಯಂತ್ರಣ ಕಾಯ್ದೆ ಕೋಟ್ಪಾ–2003ರ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಚಾಮರಾಜನಗರ ತಾಲೂಕಿನ ಯಡಪುರ ಹಾಗೂ ಉಮ್ಮತ್ತೂರು ಗ್ರಾಮ, ಗುಂಡ್ಲುಪೇಟೆ ಪಟ್ಟಣ, ಕೊಳ್ಳೇಗಾಲ ತಾಲೂಕಿನ ಕುಂತೂರು ಗ್ರಾಮ ಹಾಗೂ ಕೊಳ್ಳೇಗಾಲ ಪಟ್ಟಣ, ಯಳಂದೂರು ತಾಲೂಕಿನ ಬಸಾಪುರ ಹಾಗೂ ಮಲ್ಲಿಗೆ ಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ದಾಳಿ ನಡೆಸಲಾಯಿತು. ಜಿಲ್ಲೆಯಲ್ಲಿರುವ ಎಲ್ಲಾ ಸಾರ್ವಜನಿಕ ಸ್ಥಳದ ಮಾಲೀಕರು, ಮುಖ್ಯಸ್ಥರು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕೋಟ್ಪಾ ಕಾಯ್ದೆ ಉಲ್ಲಂಘನೆಯಾಗದಂತೆ ಕಟ್ಟೆಚ್ಚರ ವಹಿಸುವಂತೆ ಜಿಲ್ಲಾ ತಂಬಾಕು ನಿಯಂತ್ರಣ ಘಟಕ ಕಾರ್ಯಕ್ರಮಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹದೇಶ್ವರ ಬೆಟ್ಟದ ದಾಸೋಹ ಭವನಕ್ಕೆ ಪ್ರಾಧಿಕಾರದ ಕಾರ್ಯದರ್ಶಿ ದಿಢೀರ್ ಭೇಟಿ

ಗುಣಮಟ್ಟದ ತರಕಾರಿ ಬಳಸಿ ಅಡುಗೆ ಸಿದ್ಧಪಡಿಸಲು ಸೂಚನೆ



ಹನೂರು, ಸೆ.1– ಶ್ರೀ ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಶುಕ್ರವಾರ ಬೆಳ್ಳಂಬೆಳಗ್ಗೆ ದಾಸೋಹ ಭವನಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಶ್ರೀ ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಪ್ರಾಧಿಕಾರದ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಇದೇ ನಿಟ್ಟಿನಲ್ಲಿ ದಾಸೋಹ ಭವನಕ್ಕೆ ತೆರಳಿ ಭಕ್ತಾದಿಗಳಿಗೆ ನೀಡುವ ಬೆಳಗಿನ ತರಕಾರಿ ಬಾತ್ ಅನ್ನು ಸರತಿ ಸಾಲಿನಲ್ಲಿ ನಿಂತು ಪಡೆದುಕೊಂಡು ಸೇವನೆ ಮಾಡಿದ್ದಾರೆ.

ಇದೇ ಸಂದರ್ಭದಲ್ಲಿ ದಾಸೋಹ ಭವನದ ಉಸ್ತುವಾರಿ ಯಾದ ಶಾಸ್ತ್ರಿ ಅವರಿಗೆ ಗುಣಮಟ್ಟ ಕಾಪಾಡಿಕೊಂಡು ಹೆಚ್ಚಿನ ತರಕಾರಿ ಬಳಸಿ ಭಕ್ತರಿಗೆ ನೀಡುವಂತೆ ಸೂಚನೆ ನೀಡಿದ್ದಾರೆ. ದಾಸೋಹ ಭವನದ ಒಳಗಡೆ ಪರಿಶೀಲನೆ ನಡೆಸಿದ ಅವರು ಸ್ವಚ್ಛತೆ ಕಾಪಾಡಿಕೊಳ್ಳುವಂತೆಯು ತಿಳಿಸಿದ್ದಾರೆ. ದಾಸೋಹ ಭವನದ ನೆಲ ಅಂತಸ್ತಿನಲ್ಲಿ ನೆಲಹಾಸು ಮತ್ತು ಟೇಬಲ್ ಅಳವಡಿಕೆ ಕಾಮಗಾರಿ ದುರಸ್ತಿ ನೆನಗುದಿಗೆ ಬಿದ್ದಿರುವುದರಿಂದ ಭಕ್ತಾದಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿ ಮಾಡಲಾಗಿತ್ತು. ವರದಿಗೆ ಸ್ಪಂದಿಸಿದ ಅವರು ದಾಸೋಹ ಭವನದ ನೆಲ ಅಂತಸ್ತು ಕಾಮಗಾರಿ ಪರಿಶೀಲನೆ ನಡೆಸಿ ಅಪೂರ್ಣ ಕಟ್ಟಡ ನಿರ್ಮಾಣ ಕಂಪನಿಯವರನ್ನು ಸ್ಥಳಕ್ಕೆ ಕರೆಸಿ ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ತಿಳಿಸಿದ್ದಾರೆ.

ಆರಾಧನಾ ಮಹೋತ್ಸವದ ಅಂಗವಾಗಿ ದೇವರನಾಮ



ಚಾಮರಾಜನಗರ, ಸೆ.1– ಚಾಮರಾಜನಗರದ ಶಂಕರಪುರದ ವಾದಿರಾಜನಗರದಲ್ಲಿ ಇರುವ ಶ್ರೀ ಗುರುರಾಘವೇಂದ್ರ ಸ್ವಾಮಿಯವರ 352ನೇ ಆರಾಧನಾ ಮಹೋತ್ಸವದ ಅಂಗವಾಗಿ ಶ್ರೀ ರಾಘವೇಂದ್ರ ಮಠದಲ್ಲಿ ಗುರುವಾರ ಚಾಮರಾಜನಗರದ ಸ್ಥಳೀಯ ಕಲಾವಿದರಾದ ಈಶ್ವರಿ ಸಂಗೀತ ಶಾಲೆಯ ಸಂಸ್ಥಾಪಕ ಸಿ.ಎಂ. ವೆಂಕಟೇಶ್ ಹಾಗೂ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಯೋಗ ಬಂಧುಗಳಿಂದ ದೇವರನಾಮ ಕಾರ್ಯಕ್ರಮ ನಡೆಯಿತು.

ನಂತರ ಶ್ರೀರಾಘವೇಂದ್ರ ಸ್ವಾಮಿಗಳ ವಿಗ್ರಹವನ್ನು ಮೆರವಣಿಗೆ ಮಾಡಲಾಯಿತು. ಸಾವಿರಾರು ಭಕ್ತಾದಿಗಳು ದೇವರ ದರ್ಶನ ಪಡೆದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

NELE CONSTRUCTIONS
ನಿಮ್ಮ ಕನಸಿನ ಮನೆಯನ್ನು ನಾವು ನಿರ್ಮಿಸುತ್ತೇವೆ ಉತ್ತಮ ಗುಣಮಟ್ಟ ಮತ್ತು ಆಧುನಿಕ ವಿನ್ಯಾಸದೊಂದಿಗೆ
- ವಾಸ್ತು ಪ್ರಕಾರ ವಸತಿ ಕಟ್ಟಡಗಳ ನಿರ್ಮಾಣ
- ವಾಣಿಜ್ಯ ಮತ್ತು ಸಣ್ಣ ಕೈಗಾರಿಕಾ ಕಟ್ಟಡಗಳ ನಿರ್ಮಾಣ
- ಕಟ್ಟಡ ನವೀಕರಣ ಕಾರ್ಯಗಳು
- ಮಾಡ್ಯುಲರ್ & ಇಟಾಲಿಯನ್ ವರ್ಕ್
- ಕಿಚನ್ ಮತ್ತು ಇಂಟೀರಿಯರ್ ವರ್ಕ್
- ಜಲನಿರೋಧಕ ಕಾರ್ಯಗಳನ್ನು ನಿರ್ಮಿಸುವುದು

9108883332

IMMEDIATELY WANTED
Project Head
- Good communication
- Age limit 30-35 yrs below

Excellent salary Will be offered
Call us or send your resume
9606052598

ಬ್ಯೂಟಿಷಿಯನ್ ಲೇಡೀಸ್ ಕೋರ್ಸ್ ಓಪನ್
ಪ್ರೈವೇಟ್ ಲೇಡೀಸ್ ಪ್ರೊಫೆಷನಲ್ ಬ್ಯೂಟಿಷಿಯನ್ ಕೋರ್ಸ್ ಕ್ಲಾಸ್ ನಡೆಸಲಾಗುವುದು. ಆಸಕ್ತಿ ಉಳ್ಳವರು ಮಾತ್ರ ಸಂಪರ್ಕಿಸಿ: ಮೈಸೂರು
9108022653

ಸುವರ್ಣ ಯಾತ್ರ
1) ಮಧ್ಯಪ್ರದೇಶ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 4 ದಿನಗಳು 8/09/23
2) ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು 21/09/23
3) 2 ಜ್ಯೋತಿರ್ಲಿಂಗ ಸೇರಿ ಕಾಶಿ ಪ್ರವಾಸ 7 ದಿನಗಳು 07/10/23
4) ಭೂತಾನ್ ಪ್ರವಾಸ 6 ದಿನಗಳು 12/10/23

9008381022
9019462508

ಮುಡಾ ಖಾತಾ ಸೈಟ್ ಸೇಲ್
30x40
ಜ್ಞಾನಭಾರತಿ ಲೇಔಟ್, ಈಸ್ಟ್ ಫೇಸಿಂಗ್. ಬೆಲೆ: 30 ಲಕ್ಷ.
ಡೈರೆಕ್ಟ್ ಓನರ್
93421 23373

MUDA APPROVED SITE FOR SALE
30×40 NORTH FACING
25 lakhs
With Clear Document
Hassel Free Registration
Call 98800 65122
98459 84587

WANTED FURNISHING SHOP
Prefered Female Candidate For Accountant Job (Min Have 1 to 2 Year Tally Experience), Address: Akbar Road Near Ashoka Road, Timming: 10am to 6pm Salary : 10K to 15K
9916459786

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6361276795

HOUSE FOR RENT
18X36, 1st & IInd Floor 2BHK, Gas Geyser East Facing Bike Parking, Near Shantala Theater Signal Light
9738760299

ಸೈಟು ಮಾರಾಟಕ್ಕಿದೆ
30x40 S/F
56 ಲಕ್ಷ, ರೂಪನಗರ, ಬೋಗಾದಿ ಮೈಸೂರು
9986856999

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬೇಕಾಗಿದ್ದಾರೆ
Receptionist ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 20000-30000/-
Ph.9380142144
SHIVARAMPET, MYSURU

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

SITE FOR RENT
50X80 South Face Roopa Nagar Near Bogadi SBM Layout. More Details Please Contact
9986948594
7676935926

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು ವಯೋಮಿತಿ–18–25 ವಿದ್ಯಾರ್ಹತೆ, ಪಿಯುಸಿ, ಯಾವುದೇ ಡಿಗ್ರಿ ಸೆರಾಕೇರ್ ಮೈಸೂರು ಹೆಲ್ತ್ ಸೆಂಟರ್ ನ್ಯೂ ಕಾಂತರಾಜು ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು
8296366894
7996011692

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಉತ್ತಮ ಗುಣಮಟ್ಟದ ಕಟ್ಟಡ ಸಾಮಾಗ್ರಿಗಳು ದೊರೆಯುತ್ತದೆ
ಎಂ. ಸ್ಯಾಂಡ್, 20MM, 40MM, ಇಟ್ಟಿಗೆ ಸೈಜ್, ಬೋರ್ಡ್ಸ್
9886526009
9620467233

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥಳಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

3 ಬೆಡ್ರೂಮ್ ಹೊಸ ಮನೆ ಮಾರಾಟಕ್ಕಿದೆ
20x30, ದಟ್ಟಗಳ್ಳಿ, ಮೈಸೂರು, ತ್ರಿವೇಣಿ ಸೂಪರ್ ಮಾರ್ಕೆಟ್ ಹತ್ತಿರ.
Price: Rs. 79 Lakhs.
ಮಾಲೀಕರು ಸಂಪರ್ಕಿಸಿ:
Mob: 6361295132

RV CONSTRUCTIONS
RATE STARTS FROM Rs. 1690/- Per Sqft.
NO ADVANCE
BILLING ON STAGE
By Stage Completion
Office : 0821-2002063
7975110915
D.Subbaiah Road, Mysore

ಕುಕ್ ಬೇಕಾಗಿದ್ದಾರೆ
ಬೆಂಗಳೂರು ಮತ್ತು ಕೋಲಾರದಲ್ಲಿ 250 ಹುಡುಗರಿರುವ ಇಂಜಿನಿಯರಿಂಗ್ ಹಾಸ್ಟೆಲ್‌ಗೆ ಕುಕ್ ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9380394364

ಬೇಕಾಗಿದ್ದಾರೆ
ಶ್ರೀ ಛಾಯಾದೇವಿ ವಿಶೇಷ ದತ್ತು ಕೇಂದ್ರ, ಜಯನಗರ, ಮೈಸೂರು ಇಲ್ಲಿ ಚಿಕ್ಕ ಚಿಕ್ಕ ಮಕ್ಕಳನ್ನು (1 ದಿನದ ಮಗುವಿನಿಂದ 06 ವರ್ಷದ ವರೆಗೆ) ಸಂಸ್ಥೆಯಲ್ಲಿ ಉಳಿದುಕೊಂಡು ಮಕ್ಕಳನ್ನು ನೋಡಿಕೊಳ್ಳಲು ಕೆಲಸದವರು ಬೇಕಾಗಿರುತ್ತಾರೆ. ಆಸ್ಪತ್ರೆಗಳಲ್ಲಿ ಕೆಲಸ ಮಾಡಿ ಅನುಭವ ಇರುವ ನರ್ಸಿಂಗ್ ಪಾಸ್ ಅಥವಾ ಫೇಲ್ ಆಗಿರುವವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ.
8431750240

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

40×60 SITE FOR SALE
MUDA APPROVED
East facing
Rajeev Nagar 2nd Stage
Near Gupta Store, MYSORE
Rs. 1 Crore
Call : 9845286583

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
21–9–23: ನೇಪಾಳ್ ಮುಕ್ತಿನಾಥ್, ಕಠ್ಮಂಡು, ಮನೋಕಾಮನ, ಪೋಖ್ರ, ಲುಂಬಿನಿ, ಜೋಮೋ ಸೋಮ್, ಪಶುಪತಿನಾಥ್, ಸ್ವಯಂಭುನಾಥ್, ಅಯೋಧ್ಯೆ, ಗೋರಖ್‌ಪುರ್.
30–9–23: ಕಾಶಿ, ಗಯಾ, ಅಯೋಧ್ಯೆ, ಪ್ರಯಾಗ್‌ರಾಜ್.
11–9–23: ಪುರಿ ಜಗನ್ನಾಥ್, ಕೋಣಾರ್ಕ್, ಚಂದ್ರಭಾಗ್ ಬೀಚ್, ಭುವನೇಶ್ವರ.
25–10–23: ಗುಜರಾತ್, ಸೋಮನಾಥ್, ನಾಗನಾಥ್, ದ್ವಾರಕಾ, ಸರ್ದಾರ್ ವಲ್ಲಭ್‌ಭಾಯ್ ಪಟೇಲ್ ಸ್ಟ್ಯಾಚ್ಯು.
9591017782, 9964527782

Looking for a independent 2 to 3 bedroom house for residence cum clinic practice for Doctor in Mysore.
Please contact:
Mob: 8884333064

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಸಂಬಳ 15000 ದಿಂದ 20000 (ESI, PF ಸೌಲಭ್ಯ ಇರುತ್ತದೆ.
8050699742, 7760043596

SITES FOR SALE
30x40, 20x40, 30x35 Sites, Bank Loan upto 80%, near Gurur Bus Stop, Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

AFFIDAVIT
I, Jaffer Pasha, S/o Iqbal Pasha, residing at D.No. 184, 1st Cross, Rajendranagar, 1st STage, Kesare, Mysore-570 007, declare that my son now named as Muhammad Hanzalah is studying at Presentation Public School, Rammanahalli, Mysore. I declare that my son's name appears as Muhammad Hanzalah in his school records. But my son's correct name is Muhammad Hamdan which is mentioned in his birth certificate and Aadhar Card. I declare this in front of Notary C.R. Seetharam on 30-8-2023.
Sd/- Jaffer Pasha

SITE FOR SALE
MUDA auction residential / semi-commercial, North facing 45x60 site for sale at J.P. Nagar.
9916644996, 9606026182

DOCUMENT LOST
Bhujappa S.M., Door No. 2253, 1st Stage, Rajivnagar, Mysore-570 019, lost allotment document No. 441, issued to Bhujappa S.M. at xerox shop in Rajivnagar. Finders please contact:
Mob: 9900117988

ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀನಿಧಿ ಹಾಲಿಡೇಸ್ ಆಫೀಸ್‌ನಲ್ಲಿ ಕೆಲಸ ಮಾಡಲು ಇಂಗ್ಲೀಷ್ ಮಾತನಾಡಲು ಬರುವವರು, ಕಂಪ್ಯೂಟರ್ ಕಲಿತಿರುವವರು. No age limit. ಸಂಪರ್ಕಿಸಿ:
9740776666, 7557553777

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಮನೆ ಬಾಡಿಗೆಗೆ ಇದೆ
ಸಿದ್ಧಾರ್ಥನಗರ 2ನೇ ಹಂತ ವೈಶಾಲಿ ಕಾನ್ವೆಂಟ್ ಹತ್ತಿರ F/F 2BHK (ಸಸ್ಯಾಹಾರಿಗಳಿಗೆ ಮಾತ್ರ)
9448979139
0821-4062104
ಫರ್ನಿಚರ್ ಶೋರೂಂಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.

ನೇಮಕಾತಿ
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
ಸಂದರ್ಶನ ಸಮಯ:
ಬೆಳಿಗ್ಗೆ 10.00 ರಿಂದ ಸಂಜೆ 3.00 ಹುದ್ದೆ–100
ವೈಟಲ್ ರೆಕಾರ್ಡ್ಸ್ ಪ್ರೈ.ಲಿ.
#42, ಜೆಕೆ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
hr@centuryvitalrecords.com
0821-2332005, 8867064586

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

SITE FOR SALE
MUDA APPROVED
East face
30x40
Bank loan available. Near KHB Kenchalagudu, Mysore.
Mob: 9916503184

ಬೇಕಾಗಿದ್ದಾರೆ
ಡ್ರೈವರ್ – 10 ಜನ
(Full time - Spare Driver)
Marketing Executive (2 years exp.)
(Any Service Industry)
Marketing Manager (2 years exp.)
(ANY SERVICE INDUSTRY)
MOVE MY GOODS.
Call: 901 902 903 6

SITE FOR SALE
30x50 site sale suvarna nagar (Bogadi gaddige road)
9740088990

ಸೈಟು ಮಾರಾಟಕ್ಕಿದೆ
30x40
ಸೈಟ್ ಮಾರಾಟಕ್ಕಿದೆ ಶಾರದಾ ರೈಲ್ವೆ ಬಡಾವಣೆ (ಹರಿ ವಿದ್ಯಾಲಯ ಹತ್ತಿರ)
9880273834

ಬೇಕಾಗಿದ್ದಾರೆ
ಮಹಿಳಾ ಕೆಲಸದವರು ಮನೆ ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ: ಸಿದ್ಧಾರ್ಥ ಲೇಔಟ್, ಮೈಸೂರು. ವಯಸ್ಸು: 40 ವರ್ಷ ಮೇಲ್ಪಟ್ಟು, ವಸತಿ ಸೌಕರ್ಯ ಇರುತ್ತದೆ. ಸಂಪರ್ಕಿಸಿ:
Mob: 8073412866

SHARING ROOMS available for student
Rent: Rs. 1500.
Advance: 7500.
K.G. Koppal.
Mob: 9845481973

5 Gunta Farm Land FOR SALE
@RS 60 LAKHS, BEHIND CHAMUNDI HILL, 2KMS FROM LALITHADRIPURA
95385 83377

30x40 2 Sites for Sale
@ 'OLIVE ENCLAVE'
MYS-B'LORE HIGHWAY 3 KM FROM COLOUMBIA HOSPITAL 26 LAKHS
95388 39926

ಸೈಟು ಮಾರಾಟಕ್ಕಿದೆ
ಶಕ್ತಿ ನಗರ 30x40 ಬಿ.ವಿ.ಎಲ್ ರೆಡ್ಡಿ ಲೇಔಟ್ 40x45 ಕಾರ್ನರ್, ಜೆಎಸ್‌ಎಸ್ ಲೇಔಟ್ 30x50.
ಸಂಪರ್ಕಿಸಿ
99017 72178

WANTED
Lady customer care Executives Age 27-42 Years, Any PUC/ Degree/Diploma with Computer Knowledgef Must VANAJARAO QUCK MARRIAGES PVT LTD, Saraswathipuram, Mysore-09
0821-2344882
9448933333

ಸೈಟು ರಿಯಾಯಿತಿ ದರದಲ್ಲಿ ಮಾರಾಟಕ್ಕಿದೆ
ಮಂಡ್ಯದಲ್ಲಿ 25x40 ಹಾಗೂ 2 ಅಸಮಾನ ಅಳತೆಯ ಸೈಟುಗಳು ಮಾರಾಟಕ್ಕಿದೆ
(ಡಿ.ಸಿ.ಅಲಿನೇಷನ್ ALN.303/08-09)
9901234073

ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ ಹುಡುಗಿಯರು 8, 9, ಎಸ್‌ಎಸ್‌ಎಲ್‌ಸಿ ಪಾಸ್/ಫೇಲಾದ ಯುವಕ, ಯುವತಿಯರು, ಮಹಿಳೆಯರು ಅಲ್ಲೇ ಇದ್ದು ಮೈಸೂರ್ , ಮಡಿಕೇರಿ, ಬೆಂಗಳೂರಿನಲ್ಲಿ ಕೆಲಸ ಮಾಡುವವರು ಫುಲ್ ಟೈಮ್ ಅಥವಾ ಪಾರ್ಟ್ ಟೈಮ್ ವಯಸ್ಸಾದವರನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಳಿದುಕೊಳ್ಳಲು ವ್ಯವಸ್ಥೆ, ಸಂಬಳ, ನರ್ಸಿಂಗ್, ಯೂನಿಫಾರ್ಮ್ ಇರುತ್ತದೆ. ಸಂಪರ್ಕಿಸಿ
81236 30683

ಮನೆಗಳು ಭೋಗ್ಯಕ್ಕಿವೆ
ಮೈಸೂರಿನ ವಿಜಯನಗರದಲ್ಲಿ 2 ಬೆಡ್‌ರೂಮಿನ ಮನೆ ಹೆಬ್ಬಾಳದ–ಭೈರವೇಶ್ವರ ನಗರ, ಸುಭಾಶ್‌ನಗರದಲ್ಲಿ 2 ಬೆಡ್ ರೂಮಿನ ಮನೆ, ಮಹದೇವಪುರದಲ್ಲಿ 2 ಬೆಡ್‌ರೂಮಿನ ಮನೆ, 1 ಬೆಡ್‌ರೂಮಿನ ಮನೆ ಭೋಗ್ಯಕ್ಕೆ ಇವೆ.
ಸುರೇಶ್ 9206470833

40x73 East Face Site @Rs 94 Lakhs
MUDA APPROVED LAYOUT NEXT TO VIJAYANAGAR 4TH STAGE 12KMS FROM MYSORE CITY CENTER
95385 83377

ಸುವರ್ಣಾವಕಾಶ
ಸ್ವಂತ ವ್ಯಾಪಾರ ಪ್ರಾರಂಭಿಸಿ ನಿಮ್ಮದೇ ಊರಿನಲ್ಲೇ ಕಡಿಮೆ ಬಂಡವಾಳ, ಅಧಿಕ ಲಾಭ, ನಿತ್ಯ ಉಪಯೋಗಿಸುವ ವಸ್ತುಗಳ ವ್ಯಾಪಾರ, ಆಸಕ್ತರು ಸಂಪರ್ಕಿಸಿ: ರಾಯಲ್
8884633339

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಪುರುಷರು/ ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 12,000/–
7899754149

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡುಗಳು 10 ಹುದ್ದೆ ಉತ್ತಮ ವೇತನ ESI/PF ಹಾಗೂ ಉಚಿತ ವಸತಿ, ಊಟದ ವ್ಯವಸ್ಥೆಯಿದೆ.
9686422400
9242406261

ಜಮೀನು ಮತ್ತು ತೋಟ ಮಾರಾಟಕ್ಕಿದೆ
ಪಿರಿಯಾಪಟ್ಟಣ ಟೌನ್ ನಿಂದ ಕುಶಾಲನಗರ ಮಾರ್ಗದಲ್ಲಿ ಎರಡು ಕಿಲೋಮೀಟರ್ ವ್ಯಾಪ್ತಿಯ ಒಳಗೆ 10 ಎಕರೆ ಜಮೀನು ಮತ್ತು ತೋಟ ಮಾರಾಟಕ್ಕಿದೆ ಇದರಲ್ಲಿ ಅಡಿಕೆ ತೆಂಗು ಸೇರಿದಂತೆ ಉಳಿಕೆ ಖಾಲಿ ಜಮೀನು ಇರುತ್ತದೆ ಆಸಕ್ತರು ತಕ್ಷಣವೇ ಸಂಪರ್ಕಿಸಿ
9448165451

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಮತ್ತು ಹಿಮ್ಮಾವು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: 16500/-+W/o (8hrs)
ಸಂಪರ್ಕಿಸಬೇಕಾದ ಸಂಖ್ಯೆ
9620667819
9538567819

ಖಾಲಿ ಜಾಗ
5000 ಅಡಿ ಬಾಡಿಗೆಗೆ ದೊರೆಯುತದೆ 1ನೇ ಹಂತೆ, ವಿಜಯನಗರ ವಾಟರ್ ಟ್ಯಾಂಕ್ ಪಕ್ಕ
9448978383

MUDA APPROVED RESIDENTIAL PLOTS FOR SALE
20x30, 30x40 Location: Off Bogadhi Road, K.Hemanahalli, Mysore Ready to Register, Bank loan available, Ideal for Investment
8095444834, 9611760503

ಬೇಕಾಗಿದ್ದಾರೆ
ಹಿರಿಯರನ್ನು ನೋಡಿಕೊಂಡು ಮತ್ತು ಅವರಿಗೆ ಅಡುಗೆ ಮಾಡುವವರು ಮನೆಯಂತೆಯೇ ನೋಡಿಕೊಳ್ಳುವವರು ಮತ್ತು ಮನೆಯಲ್ಲಿ ಉಳಿದುಕೊಳ್ಳುವವರು ಬೇಕಾಗಿದ್ದಾರೆ. ಸಂಬಳ: 8000 ಊಟ, ವಸತಿ ಸೌಲಭ್ಯವಿದೆ.
7411492591

ಸೈಟು ಮಾರಾಟಕ್ಕಿದೆ
30x40
ಪೂರ್ವದಿಕ್ಕಿನ ಸೈಟು KBL Cilicon City ಬಸ್ತಿಪುರ NIE College Near BEML
9880490014

HOUSE FOR LEASE
Newly Built 2BHK Independent House, Fully Furnished with Solar Ground Floor Only @ Lalithadri Nagar, Near Ring Road Behind Indian Oil Petrol Bunk
9964414484

ಬೇಕಾಗಿದ್ದಾರೆ
ಫ್ಯಾನ್ಸಿ ಫುಟ್‌ವೇರ್ ಶಾಪ್‌ಗೆ ತಕ್ಷಣ ಕೆಲಸಕ್ಕೆ ಸೇಲ್ಸ್ ಬಾಯ್ ಬೇಕಾಗಿದ್ದಾರೆ
ಹಿ&ಶಿ ಕಲೆಕ್ಷನ್
ರಿಂಗ್ ರೋಡ್ ದೇವೇಗೌಡ ಸರ್ಕಲ್ ಆಲನಹಳ್ಳಿ, ಮೈಸೂರು
9148748787

SITES FOR SALE
30FT x 46FT West facing
40ft x 60ft North West Corner, Near JSS Layout 2nd Stage, T.N.Pura Main Road
9686935355

WANTED
Professional Saloon Men Beautician / Hair Dresser for Reflect Hair And Skin professional Saloon J.P Nagar Mysore
9880548126
9916887478

FOR RENT
1300 sqft, + 25 hp power for Rent JCK industrial Layout Belagola Industrial area Mysore-570016
9980341494

ತಕ್ಷಣ ಕೆಲಸ
ಮೈಸೂರಿನ ಹೆಸರಾಂತ ಹೆಲ್ ಕೇರ್ ಸಂಸ್ಥೆಗೆ ಹೋಂ ನರ್ಸಿಂಗ್ ಕೆಲಸ ಮಾಡಲು ತಕ್ಷಣವೇ ಸಂಪರ್ಕಿಸಿ. ಊಟ ವಸತಿ ಉಚಿತದೊಂದಿಗೆ ಆಕರ್ಷಕ ಸಂಬಳ ನೀಡಲಾಗುವುದು (ಸರ್ಕಾರಿ ನೊಂದಯಿತಾ ಸಂಸ್ಥೆ) ಅಗ್ರಹಾರ
9739292222

ಪ್ರಕಟಣೆ
2023–24ನೇ ಸಾಲಿನಲ್ಲಿ ಮೈಸೂರು ನಗರದಲ್ಲಿ ಪದವಿ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಅತ್ಯಂತ ಕಡಿಮೆ ದರದಲ್ಲಿ ತಿಂಡಿ, ಊಟ ಮತ್ತು ವಸತಿ ಸೌಲಭ್ಯವನ್ನು ಕಲ್ಪಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ಪ್ರವೇಶ ಅರ್ಜಿಗಳನ್ನು ನಿಲಯಪಾಲಕರು, ಶ್ರೀ ಮದ್ದಾನೇಶ್ವರ ವಿದ್ಯಾರ್ಥಿನಿಲಯ, ಝಾನ್ಸಿ ಲಕ್ಷ್ಮಿ ಬಾಯಿ ರಸ್ತೆ, (ಹೋಟೆಲ್ ಮೆಟ್ರೋಪೋಲ್ ಹತ್ತಿರ) ಮೈಸೂರು–05 ಇವರಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
0821-2442012
8884565185, 9732963071

ಗೋಲ್ಡನ್ ಆಪರ್ಚ್ಯೂನಿಟಿ
ಪಾರ್ಟ್ ಟೈಮ್/ಫುಲ್ ಟೈಮ್ ವಿದ್ಯಾರ್ಥಿಗಳು, ನಿವೃತ್ತಿ ಹೊಂದಿರುವವರು ಡಿಗ್ರಿ ಹೋಲ್ಡರ್ಸ್, ಬಿಸಿನೆಸ್ ಪೀಪಲ್ ಪ್ರತಿ ದಿನ 2 ಗಂಟೆಗಳು ಮಾತ್ರ ಕೆಲಸ
Per Day 500/- to 1000/-
ಕರೆ ಮಾಡಿ
9513271652
9008993704

ಶಾದಿಗುರೂಜಿ.ಕಾಂ
ವಧು–ವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ
6361740552

40x60 ಅಳತೆಯ DTCP
'ಎ' ಖಾತೆಯುಳ್ಳ ಸೊಸೈಟಿ ಸೈಟು ಮಾರಾಟಕ್ಕಿದೆ 23 ಲಕ್ಷಗಳು ನಂಜುಂಡೇಶ್ವರ ನಗರ ಟಿ.ವಿ.ಎಸ್.ಫ್ಯಾಕ್ಟರಿ ಹತ್ತಿರ, ಮೈಸೂರು
20x30 ಅಳತೆಯ KHB ಸೈಟು ಮಾರಾಟಕ್ಕಿದೆ 9 ಲಕ್ಷಗಳು ಇಲವಾಲದ ಹತ್ತಿರ, ಮೈಸೂರು
9742198093

WANTED
Security Guard Field Officer (M)
(Min 2-3yrs Exp. in Security Agency)
Accountant (Female)
((Min 2-3yrs Exp.) Driver (M)
(Min 2-3yrs Exp. As Driver)
For Liaising Work (M)
(experience in field work)
Contact : 6366366388
Call between 9.30AM to 5.30PM
Mail your C.V : acpltd123@gmail.com

ನವೀಕೃತ NGRS ಭವನ (Veg)
ಹಳೇ ತಿರುಮಕೂಡಲು, ಟಿ.ನರಸೀಪುರ
ಶುಭ ಸಮಾರಂಭಗಳಿಗೆ ಲಭ್ಯವಿದೆ. ಸಭಾಂಗಣ, ಅಡುಗೆ/ಊಟದ ಮನೆ, ರೂಮ್‌ಗಳು ಹಾಗೂ ಇತರೆ ಸೌಲಭ್ಯಗಳನ್ನು ಒಳಗೊಂಡಿದೆ.
9945141668
8105847866

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ


ಸೋನಿಯಾ ಗಾಂಧಿಗೆ ಪೌರತ್ವ ಕೊಡಬಾರದು ಎಂದಿದ್ದ ಸಿದ್ದರಾಮಯ್ಯ ಈಗ ಅವರ ಅಡಿಯೇ ಇದ್ದಾರೆ...

● ನಿಮ್ಮನ್ನು ಮೊದಲ ಬಾರಿ ಶಾಸಕರನ್ನಾಗಿ ಮಾಡಿದವರ ಎಂದಾದರೂ ನೆನೆಸಿಕೊಂಡಿದ್ದೀರಾ? ● ಬೇರೆಯವರ ಬಗ್ಗೆ ಏಕವಚನದಲ್ಲಿ, ದರ್ಪದಿಂದ ಮಾತನಾಡುವುದನ್ನು ಮೊದಲು ಬಿಡಿ; ಇದು ನಿಮಗೆ ಶೋಭೆಯಲ್ಲ ● ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಶಾಸಕ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ವಾಗ್ದಾಳಿ

ಬೆಂಗಳೂರು, ಸೆ.1(ಕೆಎಂಶಿ)– ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರಿಗೆ ರಾಷ್ಟ್ರದ ಪೌರತ್ವ ನೀಡ ಬಾರದು ಎಂದು ಅಂದು ಒತ್ತಾಯಿಸಿದ್ದ ಹಾಲಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ಇಂದು ಅವರ ಅಡಿಯಲ್ಲೇ ಇದ್ದಾರೆ ಎಂದು ಮಾಜಿ ಸಚಿವ, ಹಾಲಿ ಶಾಸಕ, ಜೆಡಿಎಸ್ ಕೋರ್‌ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಅವರು ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ನಡೆದ ಕೋರ್ ಕಮಿಟಿ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವನ್ನು ಸೀಮೆಎಣ್ಣೆ ಪಾರ್ಟಿ ಎಂದು, ಬಿಜೆಪಿಯನ್ನು ಬೆಂಕಿಪೊಟ್ಟಣ ಪಾರ್ಟಿ ಎಂದು ನಿಂದಿಸಿದ್ದ ನೀವೇ ಈಗ ಅವರೊಂದಿಗೆ ಕೈಜೋಡಿಸಿ ಅಧಿಕಾರ ಪಡೆದಿದ್ದೀರಿ.

ಅವರು ಯಾರೇ ಆಗಿರಲಿ ಗೌರವ ಕೊಡುವುದನ್ನು ಮೊದಲು ಕಲಿಯಿರಿ. ಚಾಮುಂಡೇಶ್ವರಿಯಲ್ಲಿ ಐದು ಬಾರಿ ಶಾಸಕನಾಗಿದ್ದು, ಅಲ್ಲಿ ನನ್ನನ್ನು ಸೋಲಿಸಲು ಬಂದ ನಿಮ್ಮನ್ನೇ ಸೋಲಿಸಿದ್ದೇನೆ. ಈ ಕ್ಷೇತ್ರದಲ್ಲಿ 5 ಬಾರಿ ಶಾಸಕರಾಗಿದ್ದ ನೀವು ಸಚಿವರಾಗಿ, ಹಣಕಾಸು ಸಚಿವರಾಗಿ, ಉಪ ಮುಖ್ಯಮಂತ್ರಿಯಾಗಿ ಇಲ್ಲಿನ ಜನರಿಗೆ ಏನಾದರೂ ಕಾವೇರಿ ಕುಡಿಯುವ ನೀರು ಕಲ್ಪಿಸಿದ್ದೀರಾ? ಗ್ರಾಮಗಳಲ್ಲಿ ಶಾಶ್ವತ ಸ್ವಚ್ಛತಾ ಕಾರ್ಯ ಮಾಡಿದ್ದೀರಾ? ಶಾಲಾ–ಕಾಲೇಜುಗಳನ್ನು ನಿರ್ಮಾಣ ಮಾಡಿದ್ದೀರಾ, ತೆರೆದಿದ್ದೀರಾ? ಎಂದು ತರಾಟೆಗೆ ತೆಗೆದುಕೊಂಡ ಗೌಡರು, 83ರಲ್ಲಿ ಪ್ರಪ್ರಥಮ ಬಾರಿಗೆ ನಿಮ್ಮನ್ನು ಶಾಸಕರನ್ನಾಗಿ ಮಾಡಿದ ಕೆಂಪೀರೇಗೌಡ, ಲಾಯರ್ ಸಿದ್ದೇಗೌಡ, ಪಿ.ಎಂ.ಚಿಕ್ಕಬೋರಯ್ಯ, ಸೆಕ್ರೆಟರಿ ಆಗಿದ್ದ ನನ್ನನ್ನು ಬಿಡಿ, ಹೋಗಲಿ ಇವರ ಹೆಸರ



ನ್ನಾದರೂ ಎಲ್ಲಿಯಾದರೂ ಇದುವರೆಗೆ ಹೇಳಿದ್ದೀರಾ? ಎಂದು ಪ್ರಶ್ನಿಸಿದರು. ನಾನು 1971 ರಿಂದಲೂ ತುಳಸಿದಾಸಪ್ಪ, ತಿಮ್ಮೇಗೌಡರು, ಕೆ.ಪುಟ್ಟಸ್ವಾಮಿ, ಕೆಂಪೀರೇಗೌಡರು ಹಾಗೂ ಎಂ.ರಾಜಶೇಖರ ಮೂರ್ತಿಯವರು ಹಾಗೂ ಅವರ ಕುಟುಂಬದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದೆ. ನೀವು 83ರಲ್ಲಿ ಶಾಸಕರಾದರೆ, ನಿಮಗೆ ವಿರುದ್ಧವಾಗಿ ನಾನು ಎಪಿಎಂಸಿ ಅಧ್ಯಕ್ಷ ನಾದೆ. ನನ್ನ ವಿಚಾರದಲ್ಲಿ ಅನಗತ್ಯ ಆರೋಪ ಮಾಡುವುದನ್ನು ನಿಲ್ಲಿಸಿ. ಒಳ್ಳೆಯ ಬಟ್ಟೆ ಹಾಕಿದರೆ, ಚೆನ್ನಾಗಿ ಓದಿದರೆ ಬ್ರಾಹ್ಮಣರು ಸಹಿಸಲ್ಲ ಎಂದು ನೀವು ಹೇಳುತ್ತೀರಿ. ನೀವೇ ಈಗ ಯಾವ ತರಹ ಆಗಿದ್ದೀರಿ ಅಂದರೆ ಬೇರೆಯವರು ಅಧಿಕಾರ ಮಾಡುವು ದನ್ನು ಸಹಿಸುವುದಿಲ್ಲ. ಎಲ್ಲವೂ ನಿಮಗೆ ಬೇಕು ಎಂದು ತೀವ್ರ ವಾಗ್ದಾಳಿ ನಡೆಸಿದರು.

ನಾನು ಜಿಲ್ಲಾ ಪರಿಷತ್‌ನಲ್ಲಿ 5 ವರ್ಷ ಅಧಿಕಾರ ನಡೆಸುತ್ತೇನೆ ಎಂಬ ಕಾರಣಕ್ಕೆ 20 ತಿಂಗಳಿಗೆ ಇಳಿಸಿದ್ದೀರಿ. ನಂತರ ಕುಮಾರಸ್ವಾಮಿ ನಾಯಕತ್ವ ಸಹಿಸಲಾಗದೆ, ಯಡಿಯೂರಪ್ಪ ಅವರ ಜತೆ ಕೈಜೋಡಿಸಿ ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಿದ್ದೀರಿ. ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ನಂತರ ಎಲ್ಲಾ ಅಧಿಕಾರ ಪಡೆದಿದ್ದೀರಿ. ಆದರೆ, ಆ ಪಕ್ಷಕ್ಕೆ ನಿಮ್ಮ ಕೊಡುಗೆ ಏನು? ಎಂದು ಜಿ.ಟಿ. ದೇವೇಗೌಡರು ಪ್ರಶ್ನಿಸಿದರು. ಚಾಮುಂಡೇಶ್ವರಿ ಕ್ಷೇತ್ರಕ್ಕೆ ಶಾಶ್ವತವಾದ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೀರಿ? 1983ರಲ್ಲಿ ನಿಮ್ಮನ್ನು ಗೆಲ್ಲಿಸಿದ ಸಮುದಾಯ ಯಾವುದು? ಆಗ ನಿಮ್ಮ ಗೆಲುವಿಗೆ ಶ್ರಮಿಸಿದವರನ್ನು ಸ್ಮರಿಸಿದ್ದೀರಾ? ಎಂದು ಟೀಕಾ ಪ್ರಹಾರ ನಡೆಸಿದರು.

ಕೆಲಸಕ್ಕೆ ಬಾರದವನನ್ನು ಗೆಲ್ಲಿಸಿದ್ದೀರಿ ಎಂದು ಬೇರೆಯವರ ಬಗ್ಗೆ ಏಕ ವಚನದಲ್ಲಿ, ದರ್ಪದಿಂದ ಮಾತನಾಡಿ ಕ್ಷೇತ್ರ, ಜಿಲ್ಲೆ ಹಾಗೂ ರಾಜ್ಯದ ಜನರಿಗೆ ಅಪಮಾನ ಮಾಡಿದ್ದೀರಿ. ಇದು ನಿಮಗೆ ಶೋಭೆಯಲ್ಲ. ಇನ್ನಾದರೂ ಲಘುವಾಗಿ ಮಾತನಾಡುವುದನ್ನು ಬಿಡಿ. ಸದಾ ಸಂವಿಧಾನದ ಬಗ್ಗೆ ಮಾತನಾಡುವ ನೀವು ಸಂವಿಧಾನದ ಪ್ರಕಾರ ನಡೆದುಕೊಳ್ಳುತ್ತಿದ್ದೀರಾ? ಎಂದು ವಾಗ್ದಾಳಿ ನಡೆಸಿ, ಆಕ್ರೋಶ ಹೊರ ಹಾಕಿದರು.

ಸುದರ್ಶನ ಕ್ರಿಯೆ

ಮೈಸೂರು, ಸೆ. 1– ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಸೆಪ್ಟೆಂಬರ್ 5 ರಿಂದ 9 ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6 ರಿಂದ 8.30 ಹಾಗೂ ಸಂಜೆ 6 ರಿಂದ 8.30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ, 9480476825, 9845685892 ಸಂಪರ್ಕಿಸಬಹುದು.

ಮಹದೇಶ್ವರರ ಜಯಂತಿ ಅರ್ಥಪೂರ್ಣ ಆಚರಣೆ; ಮಹದೇಶ್ವರಬೆಟ್ಟ ಅಭಿವೃದ್ಧಿಗೆ ಮುಖ್ಯಮಂತ್ರಿಗಳಿಗೆ ಮಾದೇಗೌಡರ ಮನವಿ

ಮೈಸೂರು, ಸೆ.1–ಮಲೈ ಮಹದೇಶ್ವರ ಬೆಟ್ಟದಲ್ಲಿ ಸೆಪ್ಟೆಂಬರ್ 7 ಮತ್ತು 8ರಂದು ನಡೆಯಲಿರುವ ಮಹದೇಶ್ವರರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಹಾಗೂ ಮಹದೇಶ್ವರ ಬೆಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು ಎಂದು ವಿಧಾನಪರಿಷತ್ ಮಾಜಿ ಸದಸ್ಯ ಡಿ. ಮಾದೇಗೌಡರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದ್ದಾರೆ.

ಮಹದೇಶ್ವರಬೆಟ್ಟದಲ್ಲಿ ಈಗಾಗಲೇ ನಡೆದಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಶ್ರೇಯಸ್ಸು ಮಾಜಿ ಶಾಸಕ ಹೆಚ್. ಗಂಗಾಧರನ್ ಅವರಿಗೆ ಸಲ್ಲಬೇಕಾಗುತ್ತದೆ. ಅವರ ವಿಶೇಷ ಆಸ್ಥೆಯಿಂದ 2012ರ ಸೆಪ್ಟೆಂಬರ್ 8ರಂದು ಮೈಸೂರಿನ ವಸ್ತು ಪ್ರದರ್ಶನ ಆವರಣದಲ್ಲಿ ಮಹದೇಶ್ವರರ ಜಯಂತಿ ವೈಭವದಿಂದ ನಡೆಸಲಾಯಿತು. ಅಂದು ಮುಖ್ಯಮಂತ್ರಿಗಳಾಗಿದ್ದ ಜಗದೀಶ್ ಶೆಟ್ಟರ್ ಅವರು ಸುತ್ತೂರು ಶ್ರೀಗಳ ಸಮ್ಮುಖದಲ್ಲಿ ಮಹದೇಶ್ವರಬೆಟ್ಟದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸರ್ಕಾರ ನೆರವು ನೀಡುತ್ತದೆ ಎಂದು ಭರವಸೆ ನೀಡಿದ್ದರಾದರೂ ಅದು ಈಡೇರಿಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಮುಜರಾಯಿ ಇಲಾಖೆಗೆ ಸೇರಿದ ಮಹದೇಶ್ವರಬೆಟ್ಟದಲ್ಲಿ ಮೂಲಭೂತ



ಸೌಲಭ್ಯಗಳು ಸಮರ್ಪಕವಾಗಿಲ್ಲ ಎಂದಿರುವ ಅವರು, ಅಲ್ಲಿನ ಪಾತಾಳಗಂಗೆ ಕಲುಷಿತಗೊಂಡು ಭಕ್ತಾದಿಗಳು ಸ್ನಾನ ಮಾಡಲು ತೊಂದರೆಯಾಗುತ್ತಿದೆ. ಹೀಗಾಗಿ ಆ ಸ್ಥಳದಲ್ಲಿ ನೀರು ಶುದ್ಧೀಕರಣ ಘಟಕ ಸ್ಥಾಪಿಸುವುದರ ಜೊತೆಗೆ ಮಹಿಳೆಯರ ಹಾಗೂ ಪುರುಷರಿಗೆ ಪ್ರತ್ಯೇಕ ಸ್ನಾನದ ಕೊಠಡಿಗಳನ್ನು ನಿರ್ಮಿಸಬೇಕು. ಆಧುನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿ ಅದಕ್ಕೆ ಸಮರ್ಪಕವಾದ ಒಳಚರಂಡಿ ವ್ಯವಸ್ಥೆ ಮಾಡಬೇಕು. ಕಸ ವಿಲೇವಾರಿಗೆ ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಬೇಕು ಹಾಗೂ ತಿರುಪತಿ ಮತ್ತು ಧರ್ಮಸ್ಥಳ ಮಾದರಿಯಲ್ಲಿ ಹೆಚ್ಚಿನ ವಸತಿ ಗೃಹಗಳನ್ನು ನಿರ್ಮಿಸಬೇಕು ಎಂದು ಮನವಿ ಮಾಡಿದ್ದಾರೆ.

ಚಾಮರಾಜನಗರದಲ್ಲಿ ನೂತನವಾಗಿ ಸ್ಥಾಪಿಸಿರುವ ವಿಶ್ವವಿದ್ಯಾನಿಲಯಕ್ಕೆ ಶ್ರೀ ಮಲೈ ಮಹದೇಶ್ವರರ ಹೆಸರಿಡಬೇಕು ಹಾಗೂ ಅಲ್ಲಿ ಮಲೈ ಮಹದೇಶ್ವರರ ಅಧ್ಯಯನ ಪೀಠ ಸ್ಥಾಪಿಸಬೇಕು ಎಂದು ಡಿ.ಮಾದೇಗೌಡರು ಮನವಿ ಮಾಡಿದ್ದಾರೆ.

ಬಾಕ್ಸ್ ಆಫೀಸ್‌ನಲ್ಲಿ ದೂಳೆಬ್ಬಿಸಿದ ಜೈಲರ್ ರಜನಿಗೆ ಸನ್ ಪಿಕ್ಚರ್ಸ್ ಸಂಸ್ಥೆಯಿಂದ 100 ಕೋಟಿ ಚೆಕ್

ಬೆಂಗಳೂರು, ಸೆ.1– ಸೂಪರ್ ಸ್ಟಾರ್ ರಜನಿಕಾಂತ್ ಅಭಿನಯದ 'ಜೈಲರ್' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಧೂಳೆಬ್ಬಿಸಿದ್ದು, ದೇಶಾದ್ಯಂತ ಯಶಸ್ವಿ ಪ್ರದರ್ಶನ ಮುಂದುವರಿಸಿದ್ದು, ರೂ. 600 ಕೋಟಿಗೂ ಹೆಚ್ಚು ಕಲೆಕ್ಷನ್ ಮಾಡಿದೆ ಎಂದು ಅಧಿಕೃತ ಮಾಹಿತಿಗಳು ತಿಳಿಸಿವೆ. ಜೈಲರ್ ಯಶಸ್ವಿ ಪ್ರದರ್ಶನದಿಂದ ಖುಷಿಯಾಗಿರುವ ಚಿತ್ರ ನಿರ್ಮಾಪಕರು ಹಾಗೂ ಸನ್ ಪಿಕ್ಚರ್ಸ್ ಮಾಲೀಕರು ಆದ ಕಲಾನಿಧಿ ಮಾರನ್ ಅವರು ರಜನಿಕಾಂತ್ ಅವರಿಗೆ 100 ಕೋಟಿ ರೂ. ಉಡುಗೊರೆ ರೂಪದ ಚೆಕ್ ನೀಡಿದ್ದಾರೆ ಎನ್ನಲಾಗಿದೆ. ಈ ಕುರಿತ ಫೋಟೋವೊಂದನ್ನು ಸನ್ ಟ್ವೀಟರ್‌ನಲ್ಲಿ ಹಂಚಿಕೊಂಡಿದೆ. ಅಲ್ಲದೇ, ಸನ್ ಪಿಕ್ಚರ್ಸ್ ಸಂಸ್ಥೆಯಿಂದ ರಜನಿಕಾಂತ್ ಅವರಿಗೆ ದುಬಾರಿ ಬೆಲೆಯ ಬಿಎಂಡಬ್ಲ್ಯೂ ಕಾರನ್ನು ಸಹ ಉಡುಗೊರೆಯಾಗಿ ನೀಡಲಾಗಿದೆ.

ಸಂತೋಷ್ ರಾಷ್ಟ್ರೀಯ ನಾಯಕರಂತೆ ಮಾತಾಡಲಿ

ಬೆಂಗಳೂರು, ಸೆ1– 'ಬಿ.ಎಲ್. ಸಂತೋಷ್ ರಾಷ್ಟ್ರೀಯ ನಾಯಕರು ಎಂದು ಭಾವಿಸಿದ್ದೇವೆ. ಅವರು ಕೆ.ಎಸ್. ಈಶ್ವರಪ್ಪ, ಸಿ.ಟಿ. ರವಿ ಅವರಂತೆ ಮಾತಾಡಿದರೆ ನಾವು ಏನು ಮಾಡುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೇಳಿದರು.


ಕಾಂಗ್ರೆಸ್‌ನ 40–45 ಶಾಸಕರು ಬಿಜೆಪಿ ಸಂಪರ್ಕದಲ್ಲಿದ್ದಾರೆ ಎಂಬ ಸಂತೋಷ್ ಹೇಳಿಕೆ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಅವರು ನಮ್ಮ 136 ಶಾಸಕರ ಜತೆಗೂ ಸಂಪರ್ಕ ಇರಿಸಿಕೊಳ್ಳಲಿ. ತಪ್ಪೇನಿದೆ ಎಂದು ಪ್ರಶ್ನಿಸಿದರು. ಸಂತೋಷ್ ದೇಶ ಆಳುತ್ತಿರುವ ಪಕ್ಷದ ನಾಯಕರು. ಅವರ ಮಾತಿಗೆ ತೂಕವಿರುತ್ತದೆ. ಈ ರೀತಿ ಘನತೆಗೆ ಧಕ್ಕೆಯಾಗುವಂತೆ ಮಾತನಾಡಬಾರದು ಎಂದರು. ಕಾಂಗ್ರೆಸ್ ಶಾಸಕರು ಅವರ ಸಂಪರ್ಕದಲ್ಲಿರುವ ಮಾಹಿತಿ ನನಗಿಲ್ಲ. ಹಿಂದೆ ಒಮ್ಮೆ ನಮ್ಮ ಸರ್ಕಾರದ ವಿರುದ್ಧ ಷಡ್ಯಂತ್ರ ರೂಪಿಸಲು ಸಭೆ ನಡೆದಿತ್ತು. ಈಗ ತಣ್ಣಗಾಗಿದೆ ಹೆಚ್ಚಿನ ಮಾಹಿತಿ ಬೇಕಿದ್ದರೆ



ಶಾಸಕರನ್ನೇ ಕೇಳಿ ಎಂದು ಹೇಳಿದರು.

ಒಂದು ದೇಶ–ಒಂದು ಚುನಾವಣೆ ಕುರಿತು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಈ ವಿಷಯದ ಬಗ್ಗೆ ದೀರ್ಘ ಕಾಲದಿಂದ ಚರ್ಚೆ ನಡೆಯುತ್ತಿದೆ. ಹಲವು ರಾಜ್ಯಗಳಲ್ಲಿ ಬೇರೆ ಬೇರೆ ಸಮಯದಲ್ಲಿ ಚುನಾವಣೆ ನಡೆಯುತ್ತಿದೆ. ಈ ಕುರಿತು ನಮ್ಮ ರಾಷ್ಟ್ರೀಯ ನಾಯಕರು ಪ್ರತಿಕ್ರಿಯಿಸುತ್ತಾರೆ ಎಂದರು.

ಎಚ್ಚರಿಕೆ ಗಂಟೆ: ಪ್ರಜ್ವಲ್ ರೇವಣ್ಣ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿರುವ ಬಗ್ಗೆ ಕೇಳಿದಾಗ, ಎಲ್ಲ ಶಾಸಕರು, ಸಂಸದರಿಗೆ ಇದು ಎಚ್ಚರಿಕೆ ಗಂಟೆ. ಜನಪ್ರತಿನಿಧಿಗಳು ಜಾಗರೂಕರಾಗಿ ಇರಬೇಕು. ತೀರ್ಪು ಏನಿದೆ ತಿಳಿದ ಬಳಿಕ ಪ್ರತಿಕ್ರಿಯಿಸುತ್ತೇನೆ ಎಂದು ಉತ್ತರಿಸಿದರು.



ಮೈಸೂರಿನ ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿ, ಹೆಬ್ಬಾಳು ವತಿಯಿಂದ ಶ್ರೀ ಗುರು ರಾಘವೇಂದ್ರ ಸ್ವಾಮಿಯ 352ನೇ ಆರಾಧನಾ ಮಹೋತ್ಸವ ಆಚರಿಸಲಾಯಿತು. ಈ ವೇಳೆ ಮಯೂರ ಸರ್ಕಲ್, ಅರಳಿಕಟ್ಟೆ ಹೆಬ್ಬಾಳ್ ಸದಸ್ಯರಾದ ರಮೇಶ್ ಹೆಬ್ಬಾಳ್, ಕಾಂಗ್ರೆಸ್ ಯುವ ಮುಖಂಡರು, ಮಹೇಶ್, ಚಂದ್ರು, ಚನ್ನೇಗೌಡ, ಜಯರಾಮ್, ಚುಂಚೇಗೌಡ, ವೆಂಕಟೇಶ್ ವಿಷಕಂಠ, ಶಿವು, ಮಹೇಶ್, ಡೆಲ್ಲಿ ರವಿ, ರಾಮಚಂದ್ರು ಮತ್ತಿತರರು ಉಪಸ್ಥಿತರಿದ್ದರು.

ಹಿಂದೂಗಳಿಗೆ ತುಳಸಿ ಗಿಡ ಎಂದರೆ ಅತ್ಯಂತ ಪವಿತ್ರ

ಹಿರಿಯ ಸಮಾಜ ಸೇವಕರಾದ ಕೆ.ರಘುರಾಮ್ ವಾಜಪೇಯಿ ತುಳಸಿ ಮಹತ್ವ ವಿವರಣೆ

ಮೈಸೂರು, ಸೆ.1–ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಹಾಗೂ ಶ್ರೀಕೃಷ್ಣ ಮಿತ್ರ ಮಂಡಳಿ ವತಿಯಿಂದ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಭಕ್ತಾದಿಗಳಿಗೆ ವಿವಿಧ ಬಗೆಯ ತುಳಸಿ ಗಿಡಗಳನ್ನು ವಿತರಿಸಿದರು.

ಬಳಿಕ ಮಾತನಾಡಿದ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ತುಳಸಿ ಗಿಡವು ಹಿಂದೂ ಧರ್ಮದಲ್ಲಿನ ಜನರಿಗೆ ಅವಿಭಾಜ್ಯ ಅಂಗ ಮತ್ತು ಇದನ್ನು ಮನೆಯಲ್ಲಿ ಬೆಳೆಸಿ ಬಳಸಿದರೆ ವಿವಿಧ ಕಾಯಿಲೆಗಳು ಬರುವುದಿಲ್ಲ. ಹಾಗೇ ತುಳಸಿಗಿಡವು ಯಥೇಚ್ಛವಾಗಿ ಆಮ್ಲಜನಕವನ್ನು ಉತ್ಪತ್ತಿ ಮಾಡುತ್ತದೆ. ಆದ್ದರಿಂದ ಅಂದಿನ ದಿನಗಳಲ್ಲಿ ರಾಯರು ಸಹಾ ತುಳಸಿ ಗಿಡದ ಮಹತ್ವವನ್ನು ಜಗಕ್ಕೆ



ಸಾರಿದ್ದರು. ಆದ್ದರಿಂದಲೇ ಅವರು ಬೃಂದಾವನದಲ್ಲಿ ಲೀನವಾದರು ಎಂದು ರಾಯರನ್ನು ಸ್ಮರಿಸಿದರು. ತುಳಸಿ ಗಿಡದ ಎಲೆಗಳನ್ನು ಬಳಸಿದರೆ ಡೆಂಗ್ಯೂ ಕಾಯಿಲೆಯೂ ವಾಸಿಯಾಗುತ್ತದೆ ಎಂದು ಹೇಳಿದರು. ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಮಾತನಾಡಿ, ಶ್ರೀರಾಮಚಂದ್ರ, ಕೃಷ್ಣ ಪರಮಾತ್ಮರ ಕಾಲದಿಂದಲೂ ಸಹ ಪ್ರತಿನಿತ್ಯದ ಆಚರಣೆ ಆರೋಗ್ಯ ಆಹಾರ ಪದ್ಧತಿಯಲ್ಲಿ ಆಯುರ್ವೇದ ಬಳಕೆಯ ಪರಂಪರೆ ಬಂದಿದೆ. ತುಳಸಿಯೂ ಪ್ರಾರ್ಥನೆ ಪೂಜಾಕೈಂಕರ್ಯದ ಜೊತೆಯಲ್ಲಿ ಮನುಷ್ಯನಿಗೆ ರೋಗ ನಿರೋಧಕ ಶಕ್ತಿ ವೃದ್ಧಿಸಲು ಸಹಕಾರಿಯಾಗುತ್ತದೆ. ಎಲ್ಲರ ಮನೆಗಳ ಮುಂದೆ ತುಳಸಿ ಗಿಡ ಸೇರಿದಂತೆ ಇನ್ನಿತರ ಆಯುರ್ವೇದ ಗಿಡಗಳಿಗೆ ನೀರೆರೆದು ಪೋಷಿಸಿದರೆ ಪರಿಸರ ಸಂರಕ್ಷಣೆಯಾಗಿ ರೋಗರುಜಿನಗಳು ನಿವಾರಣೆಯಾಗುತ್ತವೆ. ಸಂಘ ಸಂಸ್ಥೆಗಳು ಯುವಸಮೂಹ ಹೆಚ್ಚಾಗಿ ಆಯುರ್ವೇದ ಗಿಡಗಳನ್ನು ನೆಡುವ ಅಭಿಯಾನ ಹಮ್ಮಿಕೊಳ್ಳಬೇಕಿದೆ ಎಂದು ಹೇಳಿದರು.

ಹೋಟೆಲ್ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿ ಶಾಸ್ತ್ರಿ, ಸುಬ್ರಹ್ಮಣ್ಯ ತಂತ್ರಿ, ಎಂ.ಕೆ.ಪುರಾಣಿಕ್, ಮುಖಂಡರಾದ ಕಡಕೋಳ ಜಗದೀಶ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಸುಚೇಂದ್ರ, ಚಕ್ರಪಾಣಿ, ಹಾಗೂ ಇನ್ನಿತರರು ಹಾಜರಿದ್ದರು.

ಸುಳ್ಯ ಬಳಿ ರಸ್ತೆ ಬದಿ ನಿಂತಿದ್ದವರಿಗೆ ಕಾರು ಡಿಕ್ಕಿ; ಹಾವೇರಿ ಮೂಲದ ಮೂವರು ಸಾವು

ಸುಳ್ಯ, ಸೆ.1– ಇಲ್ಲಿನ ಅಡ್ಕಾರ್ ಬಳಿ ರಸ್ತೆಬದಿಯಲ್ಲಿ ನಿಂತಿದ್ದವರಿಗೆ ಕಾರೊಂದು ಚಾಲಕನ ನಿಯಂತ್ರಣ ಕಳೆದುಕೊಂಡು ಡಿಕ್ಕಿ ಹೊಡೆದ ಪರಿಣಾಮ ಮೂವರು ಮೃತಪಟ್ಟು ಓರ್ವ ಗಂಭೀರ ಗಾಯಗೊಂಡಿರುವ ಘಟನೆ ಗುರುವಾರ ನಡೆದಿದೆ. ಮೃತರನ್ನು ಚಂದ್ರಪ್ಪ, ರೇಗಪ್ಪ ಮತ್ತು ಮಾಂತೇಶ್ ಎಂದು ಗುರುತಿಸಲಾಗಿದೆ. ಇವರೆಲ್ಲರೂ ಹಾವೇರಿಯ ರಾಣೆಬೆನ್ನೂರಿನವರು. ಇಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು.

ಮಡಿಕೇರಿಯಿಂದ ಮಂಗಳೂರಿಗೆ ತೆರಳುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿ ನಿಂತಿದ್ದ ನಾಲ್ವರಿಗೆ ಡಿಕ್ಕಿ ಹೊಡೆದಿದೆ. ಬಳಿಕ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಕೂಡಲೇ ಅವರೆಲ್ಲರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮೂವರು ಕೂಲಿ ಕಾರ್ಮಿಕರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಮತ್ತೋರ್ವ ವೆಂಕಪ್ಪ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಂತ್ರಮಾಂಗಲ್ಯದಲ್ಲಿ ಸಂಸಾರ 'ಬಂಧಿ'ಗಳಾದ ಪೊಲೀಸ್ ದಂಪತಿ

ಮೈಸೂರು, ಸೆ. 1– ಮೈಸೂರಿನ ಗೋಕುಲಂ 3ನೇ ಹಂತದ ಕಾಂಟೂರ್ ರಸ್ತೆಯಲ್ಲಿರುವ ಶಾಗಲೆ ಹೌಸ್‌ನಲ್ಲಿ ಕುವೆಂಪು ಅವರ ಮಂತ್ರಮಾಂಗಲ್ಯದ ಮೂಲಕ ಸರಳವಾಗಿ ಪ್ರೇಮವಿವಾಹವೊಂದು ಶುಕ್ರವಾರ ನೆರವೇರಿತು. ಜಾತ್ಯತೀತ ಒಲವಿನ ವಿವಾಹ ವೇದಿಕೆಯಾದ ಮಾನವ ಮಂಟಪದ ಮೂಲಕ ಕಾನ್‌ಸ್ಟೇಬಲ್‌ಗಳಾದ ಮಹೇಶಕುಮಾರ್ ಆರ್. ಹಾಗೂ ಮಹಾಲಕ್ಷ್ಮಿ ಟಿ.ಜೆ. ಮದುವೆಯಾದರು. ಮಾನವ ಮಂಟಪದ ಡಾ.ಕೆ. ಕಾಳಚನ್ನೇಗೌಡರು ಮದುವೆಯ ಪ್ರತಿಜ್ಞಾ ವಿಧಿ ಬೋಧಿಸಿದರು.

ಕುವೆಂಪು ಅವರ ಮಂತ್ರಮಾಂಗಲ್ಯದ ಮಹತ್ವ ಕುರಿತು ಮಾನವ ಮಂಟಪದ ಸಂಚಾಲಕ ಧನಂಜಯ್ ಎಲಿಯೂರು ಮಾತನಾಡಿ, ಕುವೆಂಪು ಅವರು ತಮ್ಮ ಪುತ್ರ ಪೂರ್ಣಚಂದ್ರ ತೇಜಸ್ವಿ ಹಾಗೂ ರಾಜೇಶ್ವರಿ ಅವರ ಮದುವೆಯನ್ನು ಮಂತ್ರಮಾಂಗಲ್ಯದ ಮೂಲಕ ಕೈಗೊಂಡರು. ಮದುವೆಗೆ 50ಕ್ಕೂ ಹೆಚ್ಚು ಜನ ಸೇರಬಾರದೆಂಬುದು ಅವರ ಅಪೇಕ್ಷೆಯಾಗಿತ್ತು. ಇದಕ್ಕಾಗಿ ಮದುವೆಯ ದಿನ ತಮ್ಮ ಗೆಳೆಯರಿಗೆ ಯಾವತ್ತಾದರೂ ಬಂದು ಆಶೀರ್ವದಿಸಿ ಎಂದು ಪತ್ರ ಬರೆದಿದ್ದರು. ಇಂಥ ಮಂತ್ರಮಾಂಗಲ್ಯದ ಮದುವೆಗಾಗಿ ಮಾನವ ಮಂಟಪ ಶುರು ಮಾಡಿದವರು



ಕೆ.ರಾಮದಾಸ್, ಎಚ್.ಗೋವಿಂದಯ್ಯ, ಶಿವರಾಮ ಕಾಡನಕುಪ್ಪೆ ಮೊದಲಾದವರು. ಈ ಮಾನವ ಮಂಟಪದ ಮೂಲಕ ಸಾವಿರಾರು ಮದುವೆಗಳು ನಡೆದಿವೆ ಎಂದರು.

ಡಾ.ಕೆ.ಕಾಳಚನ್ನೇಗೌಡರು ಮಾತನಾಡಿ, ಮಂತ್ರ ಮಾಂಗಲ್ಯದ ಮೂಲಕ ಮದುವೆಯಾಗಲು ಮುಂದೆ ಬಂದವರು ನಿಜವಾಗಲೂ ಪ್ರೀತಿಸುವವರಾ ಎಂದು ಪರಿಶೀಲಿಸುತ್ತೇವೆ. ನಗರಗಳ ಬೆಳವಣಿಗೆಯಾದರೂ ಅಂತರ್ಜಾತಿ ಮದುವೆಗಳನ್ನು ಒಪ್ಪಿಕೊಳ್ಳದವರಿದ್ದಾರೆ. ಇದರಿಂದ ಮರ್ಯಾದಾ ಹತ್ಯೆಗಳು ನಡೆಯುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಲ. ಜಗನ್ನಾಥ್ ಮಾತನಾಡಿ ಭಾರ್ಗವಿ ಅವರಿಗೆ ತಾಳಿ ಕಟ್ಟದೆ ಮದುವೆಯಾದೆ. ಇಂಥ ಮದುವೆಗಳು ಹೆಚ್ಚಲಿ. ಈ ಮೂಲಕ ಜಾತಿ ನಿರ್ಮೂಲನೆಯಾಗಲಿ ಎಂದರೆ, ಪರಿಸರ ಬಳಗದ ಪರಶುರಾಮೇಗೌಡರು, ರೈತ ಮುಖಂಡರಾಗಿದ್ದ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಪ್ರಭಾವದಿಂದಾಗಿ ನಾನೂ ಸರಳವಾಗಿ ಮದುವೆಯಾದೆ ಎಂದರು. ರಂಗಕರ್ಮಿ ಮೈಮ್ ರಮೇಶ್, ನಾನು ಅವಿವಾಹಿತನಾಗಿರಬೇಕೆಂದು ಕೊಂಡಿದ್ದೆ. ಆದರೆ ರಂಗಾಯಣ ಗೆಳೆಯರು, ಸಾಹಿತಿಗಳ ಒತ್ತಾಯದಿಂದ ಮದುವೆಯಾದೆ. ಅದು ಕೂಡಾ ಪ್ರೀತಿಸಿ. ಪ್ರೀತಿಯಿಂದ ಬಾಳಿದರೆ ಜಾತಿ, ಧರ್ಮ ನಗಣ್ಯ ಎಂದರು.

ಮಾನವ ಮಂಟಪದ ಡಾ.ವೆಂ.ವನಜಾ ಮಾತನಾಡಿ, ಶೃಂಗೇರಿಯಿಂದ ಮೈಸೂರಿಗೆ ಓದಲು ಬಂದ ನನಗೆ, ನನ್ನ ತಾಯಿಯೇ ಯಾರನ್ನಾದರೂ ಮದುವೆಯಾಗಬಹುದು ಎಂದು ಅನುಮತಿ ನೀಡಿದಳು. ನಮ್ಮ ತಂದೆ ಕೂಡಾ ನಮ್ಮ ಮಗಳು ಜಾತಿ ಬಿಟ್ಟು ಮದುವೆಯಾಗುತ್ತಿದ್ದಾಳೆ ಎಂದು ಊರಿಗೆಲ್ಲ ಹೇಳಿದ್ದರು. ಹಾಗೆಯೇ ಕೆ.ಕಾಳಚನ್ನೇಗೌಡರನ್ನು ನಮ್ಮ ಶೃಂಗೇರಿಗೇ ಪರಿಚಯಿಸಿದರು ಎಂದು ವಿವರಿಸಿದರು. ಪ್ರೊ.ಕುಮಾರ ಸ್ವಾಮಿ, ಮಹಿಳಾ ಮತ್ತು ಕಲ್ಯಾಣ ಇಲಾಖೆಯಲ್ಲಿ ನಿವೃತ್ತ ಅಧಿಕಾರಿ ರಾಜು, ಜಿಪಿಐಇಆರ್ ತಂಡದ ಸಂಚಾಲಕ ಎಂ.ಪಿ. ಹರಿದತ್ತ, ಕಲಾವಿದರಾದ ಸುಮನ್, ಚಂದನ್ ಹಾಜರಿದ್ದರು.

ಆಲಗೂಡು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರ ವಿರುದ್ಧದ ಅವಿಶ್ವಾಸಕ್ಕೆ ಸೋಲು



ತಿ.ನರಸೀಪುರಸೆ1– ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ. ವೀರಭದ್ರಪ್ಪನವರ ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಗಿದ್ದು, ನಿರ್ಣಯದ ವಿರುದ್ಧ ನಾಯಕತ್ವ ವಹಿಸಿದ್ದವರಿಗೆ ಭಾರೀ ಮುಖಭಂಗ ಉಂಟಾಗಿದೆ.

ಪುರಸಭಾ ವ್ಯಾಪ್ತಿಗೊಳಪಡುವ ಹೆಳವರ ಹುಂಡಿ ಗ್ರಾಮದಲ್ಲಿರುವ ಆಲಗೂಡು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿದ್ದ ಬಿ.ವೀರಭದ್ರಪ್ಪನವರ ಅಧಿಕಾರಾವಧಿ ಮುಗಿದಿದ್ದರೂ(ಆಂತರೀಕ ಒಪ್ಪಂದದಂತೆ) ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸದ್ದನ್ನು ವಿರೋಧಿಸಿ ಸಂಘದ ಒಟ್ಟು 12 ಸದಸ್ಯರ ಪೈಕಿ ಹೆಳವರಹುಂಡಿ ಗ್ರಾಮದ ಸಹಕಾರ ಸಂಘದ ನಿರ್ದೇಶಕ ಕೆ.ಎನ್.ಮೂರ್ತಿ ಹಾಗೂ ಕೇತಹಳ್ಳಿ ಗ್ರಾಮದ ಎಸ್.ಬಸವರಾಜು ನೇತೃತ್ವದಲ್ಲಿ 7 ಮಂದಿ ಸದಸ್ಯರು ಅಧ್ಯಕ್ಷರ ಮೇಲೆ ತಮಗೆ ವಿಶ್ವಾಸವಿಲ್ಲವೆಂದು ಸಹಿ ಮಾಡಿದ ಪತ್ರವನ್ನು ಮೈಸೂರಿನ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ನೀಡಿ ಅವಿಶ್ವಾಸ ನಿರ್ಣಯದ ಸಭೆ ಕರೆಯುವಂತೆ ಮನವಿ ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ಶುಕ್ರವಾರ ಗ್ರಾಮದ ಸಹಕಾರ ಸಂಘದ ಕಚೇರಿಯಲ್ಲಿ ಅವಿಶ್ವಾಸ ನಿರ್ಣಯದ ಸಭೆ ಕರೆಯಲಾಗಿತ್ತು. ಗುಪ್ತ ಮತದಾನದ ಮೂಲಕ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಯಿತು. ಚುನಾವಣೆಯಲ್ಲಿ ಅವಿಶ್ವಾಸದ ಪರವಾಗಿ 7 ಮತಗಳು ಚಲಾವಣೆಗೊಂಡರೆ, ವಿರುದ್ಧವಾಗಿ 5 ಮತಗಳು ಚಲಾವಣೆಗೊಂಡವು. ಹಾಗಾಗಿ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಗಿ ವೀರಭದ್ರಪ್ಪರವರೇ ಅಧ್ಯಕ್ಷರಾಗಿ ಮುಂದುವರೆಯುವಂತಾಯಿತು.

ಸಹಕಾರ ಸಂಘದ ನಿಯಮದಂತೆ 3ನೇ ಒಂದರಷ್ಟು ಸದಸ್ಯರು ವೀರಭದ್ರಪ್ಪ ಪರವಾಗಿ ಮತ ಚಲಾಯಿಸಿದ್ದರಿಂದ ಅವಿಶ್ವಾಸ ನಿರ್ಣಯದ ವಿರುದ್ಧವಾದ ತೀರ್ಪು ಹೊರಬಿತ್ತು. ಅನಿರೀಕ್ಷಿತ ಬೆಳವಣಿಗೆ ಗಮನಿಸಿದ ನಿರ್ಣಯದ ಪರವಾಗಿ ಮತ ಚಲಾಯಿಸಿದ ನಿರ್ದೇಶಕರು ಒಬ್ಬೊಬ್ಬರಾಗಿ ಕಚೇರಿಯಿಂದ ಹೊರ ನಡೆದರು. ಸಹಕಾರ ಅಭಿವೃದ್ಧಿ ಅಧಿಕಾರಿ ರಾಜಣ್ಣ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಗಿದೆ ಎಂದು ಘೋಷಿಸಿದರು. ಅವಿಶ್ವಾಸ ನಿರ್ಣಯ ಗೆದ್ದ ಬಿ.ವೀರಭದ್ರಪ್ಪರನ್ನು ಮುಖಂಡರು ಅಭಿನಂದಿಸಿದರು. ಈ ವೇಳೆ ಮಾತನಾಡಿದ ಅಧ್ಯಕ್ಷ ವೀರಭದ್ರಪ್ಪ ವೈಯಕ್ತಿಕ ದ್ವೇಷದಿಂದ ನನ್ನ ಮೇಲೆ ಮಂಡಿಸಿದ್ದ ನಿರ್ಣಯಕ್ಕೆ ಸೋಲಾಗಿದೆ. ಮುಂದೆ ಸಹಕಾರ ಸಂಘದ ಬೆಳವಣಿಗೆಗೆ ಪ್ರಾಮಾಣಿಕವಾಗಿ ದುಡಿದು ಜಿಲ್ಲೆಯಲ್ಲಿಯೇ ಮಾದರಿ ಸಂಘವನ್ನಾಗಿ ಮಾಡುವ ಗುರಿ ಹೊಂದಿದ್ದೇನೆ ಎಂದರು.

ಅವಿಶ್ವಾಸ ನಿರ್ಣಯದ ವಿರುದ್ಧವಾಗಿ ಮತ ಚಲಾಯಿಸಿದ ಸ್ನೇಹಿತರಿಗೆ ನಾನು ಋಣಿಯಾಗಿದ್ದೇನೆ, ಮುಂಬರುವ ದಿನಗಳಲ್ಲಿ ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ಸಂಘದ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯರವರ ಉಪಸ್ಥಿತಿಯಲ್ಲಿಯೇ ಲೋಕಾರ್ಪಣೆಗೊಳಿಸುತ್ತೇನೆ. ಎಲ್ಲ ಸದಸ್ಯರು ಇದಕ್ಕೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಚುನಾವಣೆಯಲ್ಲಿ ಉಪಾಧ್ಯಕ್ಷ ನಂಜುಂಡ, ಧರ್ಮಯ್ಯನಹುಂಡಿ ಮಲ್ಲಣ್ಣ, ಹೆಚ್. ಬಿ.ಚಿಕ್ಕನಂಜಯ್ಯ, ಎಂ.ಗುರುಸ್ವಾಮಿ, ಎನ್.ಮೂರ್ತಿ, ಬಿ.ಎಸ್.ಯಶೋಧ, ಸಾಕಮ್ಮ, ಜಯಣ್ಣ, ಎಂ.ನಿಂಗರಾಜು, ಶಿವಲಿಂಗೇಗೌಡ, ಬಸವರಾಜು ಭಾಗವಹಿಸಿದ್ದರು.

ಶಾಲೆಯಲ್ಲಿ ರಕ್ಷಾಬಂಧನ್

ಹನಗೋಡು, ಸೆ.1– ಹನಗೋಡಿನ ಶ್ರೀ ಲಕ್ಷ್ಮಣ್ ತೀರ್ಥ ವಿದ್ಯಾ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿದ್ದ ರಕ್ಷಾ ಬಂಧನದ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಪರಸ್ಪರ ಸೋದರ ಸೋದರಿ ಮನೋಭಾವದಿಂದ ರಾಕಿಯನ್ನು ಕಟ್ಟಿ ಸೋದರರಿಗೆ ಸಿಹಿ ತಿನ್ನಿಸುವ ಮೂಲಕ ಸಂಭ್ರಮಿಸಿದರು.

ಅಣ್ಣ ತಂಗಿಯ ಜೀವನದ ಒಂದು ಉತ್ತಮ ಪ್ರೀತಿಯ ಸಂಕೇತ. ಒಬ್ಬರೊಬ್ಬರನ್ನು ಪರಸ್ಪರ ರಕ್ಷಣೆ ಮಾಡುವ ಮನಸ್ಸನ್ನು ಹೊಂದಿರುತ್ತಾರೆ. ರಕ್ಷಾ ಬಂಧನ ಪ್ರಾಚೀನ ಕಾಲದಿಂದ ಬಹಳ ಪ್ರಾಮುಖ್ಯತೆ ಹೊಂದಿದೆ. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರದ ನಟರಾಜು ಮತ್ತು ಇತರ ಶಿಕ್ಷಕರು ಹಾಜರಿದ್ದರು.

ತಳ ಸಮುದಾಯಕ್ಕೆ ಸಮಾನತೆ ನೀಡಿದವರು ನಾರಾಯಣ ಗುರು

ಹೆಚ್.ಡಿ.ಕೋಟೆ, ಸೆ.1– ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳ ಆಚರಣೆಯಂತಹ ಕೆಟ್ಟ ವ್ಯವಸ್ಥೆಯನ್ನು ಹೋಗಲಾಡಿಸಿ, ತಳ ಸಮುದಾಯಕ್ಕೆ ಸಮಾನತೆ ನೀಡಿದವರು ಮಹಾತ್ಮ ಬ್ರಹ್ಮಶ್ರೀ ನಾರಾಯಣ ಗುರು ಎಂದು ಸಾಹಿತಿ ಡಾ:ಕಿರಣ್ ಸಿಡ್ಲೇಹಳ್ಳಿ ತಿಳಿಸಿದರು.

ತಾಲೂಕು ಆಡಳಿತ ಸೌಧದಲ್ಲಿ ಏರ್ಪಡಿಸಿದ್ದ ಬ್ರಹ್ಮಶ್ರೀ ನಾರಾಯಣ ಗುರುಗಳ 169ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ತಳ ಸಮುದಾಯಗಳು ಒಂದು ರೀತಿಯಲ್ಲಿ ಶೋಷಣೆಗೆ ಒಳಪಟ್ಟಿದ್ದರು. ಬಸವಣ್ಣ, ಪೆರಿಯಾರ್, ನಾರಾಯಣಗುರು, ಡಾ.ಬಿ.ಆರ್. ಅಂಬೇಡ್ಕರ್‌ರಂತಹ ಸಮಾಜ ಸುಧಾರಕರಿಂದ ತಳ ಸಮುದಾಯಗಳು ಗೌರವಯುತವಾಗಿ ಬದುಕಲು ಸಾಧ್ಯವಾಯಿತು ಎಂದರು.



ನಾರಾಯಣ ಗುರುಗಳು ಹಿಂದೂ ಧರ್ಮವನ್ನು ಬಿಡದೆ, ಪ್ರತ್ಯೇಕ ಧರ್ಮವನ್ನು ಸ್ಥಾಪಿಸದೆ ತಮ್ಮ ಹೋರಾಟದ ಮೂಲಕ ಅಸಮಾನತೆಯನ್ನು ಸರಿಪಡಿಸಿದರು. ಹಾಗೇ ತಳ ಸಮುದಾಯದ ಜನರಿಗೆ ದೇವಸ್ಥಾನಗಳಿಗೆ ಪ್ರವೇಶ ನೀಡದಿದ್ದಾಗ ತಾವೇ ಸ್ವತಃ 80ಕ್ಕೂ ಹೆಚ್ಚು ದೇವಸ್ಥಾನಗಳನ್ನು ಸ್ಥಾಪಿಸಿದರು. ದೇವಸ್ಥಾನಗಳಲ್ಲಿ ವಿಶಿಷ್ಟವಾಗಿ ಹಣತೆ ಮತ್ತು ಕನ್ನಡಿಗಳನ್ನು ಇಡುವ ಮೂಲಕ ಜನರು ತಮ್ಮನ್ನು ತಾವು ಅರಿಯಬೇಕು ಎಂಬ ಸಂದೇಶ ಸಾರಿದರು. ಹಾಗಾಗಿ ಸಮಾಜಕ್ಕೆ ಕೊಡುಗೆ ನೀಡಿದ ಮಹಾನೀಯರ ಜಯಂತಿಯಂದು ಪ್ರತಿಯೊಬ್ಬರು ಸ್ಮರಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಹಶೀಲ್ದಾರ್ ಎಲ್.ಸಣ್ಣ ರಾಮಪ್ಪ ವಹಿಸಿದ್ದರು. ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತಿ ಇಓ ಧರಣೇಶ್, ಸರಗೂರು ಪಟ್ಟಣ ಪಂಚಾಯತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಅಧಿಕಾರಿಗಳಾದ ಡಾ.ರವಿಕುಮಾರ್, ಎಇಇ ನಾಗರಾಜ್, ಗೋವಿಂದನಾಯಕ್, ರಾಮಸ್ವಾಮಿ, ಮಹೇಶ್, ರೇಣುಕಾಸ್ವಾಮಿ, ಆರ್ಯ ಈಡಿಗ ಸಮಾಜದ ಅಧ್ಯಕ್ಷ ಎಸ್.ಎನ್. ರಂಗೇಗೌಡ, ಟೌನ್ ಅಧ್ಯಕ್ಷ ಅನಿಲ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕನ್ನಡ ಪ್ರಮೋದ, ವರ್ತಕರ ಸಂಘದ ಅಧ್ಯಕ್ಷ ವಿನಯ್, ವಿಶ್ವಹಿಂದೂ ಪರಿಷತ್ ತಾಲೂಕು ಅಧ್ಯಕ್ಷ ಸುಧಾಕರ್, ಮುಖಂಡರಾದ ನಂಜುಂಡೇಗೌಡ, ನಾಗಣ್ಣ ಮುತ್ತುರಾಜು, ಶಂಕರ್, ಮಂಜುನಾಥ್, ಎಸ್.ಎನ್.ನಾಗರಾಜು, ಕೃಷ್ಣ, ಶ್ರೀನಿವಾಸ್, ಸೌಮ್ಯ, ಶೈಲಾ ಸುಧಾಮಣಿ, ಅನುಷಾ ಇದ್ದರು.

ಪತ್ನಿ ಇರಿದು ಕೊಲೆಗೆ ಯತ್ನಿಸಿದ ಪತಿ ಜೈಲಿಗೆ

ಹುಣಸೂರು.ಸೆ.1– ಪತ್ನಿಯ ನಡತೆ ಶಂಕಿಸಿ ಪತಿಯೇ ಚಾಕುವಿನಿಂದ ಇರಿದು ಕೊಲೆಯ ಯತ್ನಿಸಿದ ಘಟನೆ ತಾಲೂಕಿನ ಯಶೋಧರಪುರ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ವಾಸಿ ಸುಶೀಲಮ್ಮ(60) ಎಂಬುವರೇ ತಮ್ಮ ಪತಿ ವೆಂಕಟೇಶರಿಂದ ಹಲ್ಲೆಗೊಳಗಾದವರಾಗಿದ್ದು, ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಸುಶೀಲಮ್ಮ ಅವರ ನಡತೆ ಬಗ್ಗೆ ಸಂಶಯಗೊಂಡ ಪತಿ ವೆಂಕಟೇಶ್ ಜಮೀನಿಗೆ ತಿಂಡಿ ತರುತ್ತಿದ್ದ ವೇಳೆ ಅಡ್ಡಗಟ್ಟಿ ಚಾಕುವಿನಿಂದ ಸಿಕ್ಕ ಸಿಕ್ಕ ಕಡೆ ಚುಚ್ಚಿ ತೀವ್ರ ಗಾಯಗೊಳಿಸಿದ್ದಾನೆ.

ಇದರಿಂದ ಸುಶೀಲಮ್ಮ ಕೂಗಿಕೊಂಡಾಗ ಅಕ್ಕ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದವರು ಹತ್ತಿರ ಬರುತ್ತಿದ್ದಂತೆ ಆರೋಪಿ ವೆಂಕಟೇಶ್ ಓಡಿ ಹೋಗಿದ್ದಾನೆ. ತೀವ್ರವಾಗಿ ಗಾಯಗೊಂಡಿದ್ದ ಸುಶೀಲಮ್ಮರನ್ನು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಈ ಸಂಬಂಧ ಪುತ್ರ ಮಲ್ಲೇಶ್ ತಾಯಿ ಮೇಲೆ ಅನುಮಾನ ವ್ಯಕ್ತಪಡಿಸಿ ತಂದೆ ಹಲ್ಲೆ ನಡೆಸಿದ್ದಾನೆ ಎಂದು ನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದರ ಮೇರೆಗೆ ಇನ್‌ಸ್ಪೆಕ್ಟರ್ ದೇವೇಂದ್ರ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

ಕ್ರೀಡೆಯಿಂದ ಮಾನಸಿಕ, ದೈಹಿಕ ಆರೋಗ್ಯ ವೃದ್ಧಿ

ನಂಜನಗೂಡು, ಸೆ.1– ಕ್ರೀಡೆ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ವೃದ್ಧಿಸುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಶಿಕ್ಷಣದಷ್ಟೇ ಕ್ರೀಡಾ ಚಟುವಟಿಕೆಗಳಿಗೂ ಒತ್ತು ನೀಡಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ಅವರು ನಂಜನಗೂಡಿನ ಜೆಎಸ್‌ಎಸ್ ಕಾಲೇಜು ಆವರಣದಲ್ಲಿ ನಡೆದ ಪದವಿ ಪೂರ್ವ ಕಾಲೇಜುಗಳ ತಾಲೂಕು ಮಟ್ಟದ ಕ್ರೀಡಾ ಕೂಟಕ್ಕೆ ಚಾಲನೆ ನೀಡಿ, ವಿವಿಧ ಕ್ರೀಡೆಯಲ್ಲಿ ವಿಜಯಶಾಲಿ ತಂಡಗಳಿಗೆ ಟ್ರೋಫಿ ಜೊತೆಗೆ ಪ್ರಮಾಣಪತ್ರ ನೀಡಿ ಮಾತನಾಡಿದರು.



ಕ್ರೀಡೆ ವಿದ್ಯಾರ್ಥಿಗಳಲ್ಲಿ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಹೆಚ್ಚಿಸುವ ಜೊತೆಗೆ ಏಕಾಗ್ರತೆಯನ್ನು ಹೆಚ್ಚಿಸಿ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಸಾಧನೆ ಮಾಡಲು ಸಹಕಾರಿಯಾಗಲಿದೆ ಅಲ್ಲದೆ ಜೀವನದಲ್ಲಿ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವನೆಯನ್ನು ಬೆಳೆಸುತ್ತದೆ. ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮರಿಸ್ವಾಮಿ, ಜೆ.ಎಸ್.ಎಸ್ ಕಾಲೇಜಿನ ಪ್ರಾಂಶುಪಾಲ ಹೊನ್ನೇಗೌಡ, ಯದುಗಿರೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶರಣರ ಸಾಹಿತ್ಯದ ಸಾರವನ್ನು ವಿದ್ಯಾರ್ಥಿಗಳು ಅರಿಯಬೇಕು

ಸರಗೂರು, ಸೆ.1– ಶರಣರ ತತ್ವ ಸಂದೇಶ ಸಾರುವ ದತ್ತಿ ಕಾರ್ಯಕ್ರಮಕ್ಕೆ ಸಾರ್ವಜನಿಕರ ಸಹಕಾರ ಅವಶ್ಯಕವಾಗಿದ್ದು, ಶರಣ ಸಾಹಿತ್ಯದ ಸಾರವನ್ನು ವಿದ್ಯಾರ್ಥಿಗಳು ಅರಿಯಬೇಕು ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟ ಪೂರ್ವ ಅಧ್ಯಕ್ಷ ಎಂ.ಚಂದ್ರಶೇಖರ್ ತಿಳಿಸಿದರು.

ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆಯಲ್ಲಿ ಬುಧವಾರ ತಾಲೂಕು ಶರಣ ಸಾಹಿತ್ಯ ಪರಿಷತ್, ಲಯನ್ಸ್ ಅಕಾಡೆಮಿ ಶಾಲೆ ವತಿಯಿಂದ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108ನೇ ದಿನಾಚರಣೆ ಅಂಗವಾಗಿ ನಡೆಸಿದ ಸಂಸ್ಥಾಪಕರ ದಿನಾಚರಣೆ, ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹನ್ನೆರಡನೆ ಶತಮಾನದ ಶರಣ ವಚನಗಳು 21 ನೇ ಶತಮಾನಕ್ಕೂ ಪ್ರಸ್ತುತವಾಗಿವೆ. ಇಂಥ ವೇಳೆ ಶರಣರ ಸಂದೇಶಗಳ ಬಗ್ಗೆ ಅರಿತುಕೊಳ್ಳಬೇಕು.



ಆ ಮೂಲಕ ಇಂದಿನ ಯುವ ಪೀಳಿಗೆ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು. ಶರಣರ ಚಿಂತನೆಗಳನ್ನು ಉಳಿಸಿ, ಬೆಳೆಸಲು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಜೀವನ ಸಂದೇಶ ಕುರಿತು ಉಪನ್ಯಾಸ ನೀಡಿದ ಜೆಎಸ್‌ಎಸ್ ಶಾಲೆ ಶಿಕ್ಷಕ ಸಿದ್ದಲಿಂಗಸ್ವಾಮಿ, ಮಾತನಾಡಿ ಜನಮುಖಿ, ಸಮಾಜಮುಖಿ ಚಿಂತನೆ, ಕೆಲಸಗಳನ್ನು ಮಾಡಿದ ರಾಜೇಂದ್ರ ಶ್ರೀಗಳನ್ನು ನಿತ್ಯ ಸ್ಮರಣೆ ಮಾಡಲಾಗುತ್ತದೆ. ಶೈಕ್ಷಣಿಕ ಕ್ಷೇತ್ರದಲ್ಲಿದಲ್ಲಿನ ಕ್ರಾಂತಿಯಿಂದಾಗಿ ಜಗತ್ತಿನಲ್ಲಿ ಶೈಕ್ಷಣಿಕ ಸಂಸ್ಥೆಗಳು ತೆರೆದುಕೊಂಡಿವೆ. ಶಿಕ್ಷಣ, ಅನ್ನ, ಆರೋಗ್ಯ ಸೇವೆ ಮಾಡಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಸ್ಥಾಪಿಸಿದರು. ಅವರ ಆಶಯಗಳನ್ನು ನೆನೆಸಿಕೊಳ್ಳಬೇಕು ಎಂದರು.

ದಡದಹಳ್ಳಿ ಗುರುಮಲ್ಲೇಶ್ವರ ಪಟ್ಟದ ಮಠದ ಷಡಕ್ಷರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಕ್ಕಳಿಗೆ ಆರ್ಶೀವಚನ ನೀಡಿದರು. ಎಸ್.ಪಿ.ಬೃಂಗೀಶ್ ಮತ್ತು ಸುಮಂಗಳಮ್ಮ ಸಿದ್ದಲಿಂಗಪ್ಪ ದತ್ತಿ ನಿಧಿ ಸ್ಥಾಪಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವನಹುಂಡಿ ಸಿದ್ದಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶಿಕ್ಷಣಕ್ಕೆ ಶ್ರೀಗಳು ನೀಡಿದ ಕೊಡುಗೆ ಬಗ್ಗೆ ಸರಳವಾಗಿ ವಿವರಿಸಿದರು,

ಸರಗೂರು ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷಕೆ.ಗುರುಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಲಯನ್ಸ್ ಅಕಾಡಮಿ ಶಾಲೆ ಅಧ್ಯಕ್ಷ ಬ್ರಹ್ಮದೇವಯ್ಯ, ಕಾರ್ಯದರ್ಶಿ ಎಸ್.ಎಸ್. ಪ್ರಭುಸ್ವಾಮಿ, ಎನ್.ಎಸ್.ಪ್ರತಾಪ್, ಎಸ್.ಬಿ.ನಾಗರಾಜು, ಲಯನ್ಸ್ ಅಕಾಡಮಿ ಶಾಲೆ ಪ್ರಾಂಶುಪಾಲ ಬಿ.ಡಿ ದಾಸಾಚಾರ್, ಮುಖ್ಯಶಿಕ್ಷಕರಾದ ಪದ್ಮಾ, ಮುಖಂಡರಾದ ಬಿ.ಸಿ.ಶ್ರೀಕಂಠ, ಶೇಖರ್, ಪತ್ರಕರ್ತ ಎಸ್.ಆರ್. ನಾಗರಾಮ, ನಾಗೇಶ್ ವಾಸುಕಿ, ಲಯನ್ಸ್ ಅಕಾಡಮಿ ಶಾಲಾ ಶಿಕ್ಷವೃಂದ ಹಾಗೂ ಮಕ್ಕಳು, ಭಾಗವಹಿಸಿದ್ದರು.

ನಗರ್ಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ



ನಗರ್ಲೆ, ಸೆ.1– ನಂಜನಗೂಡು ತಾಲೂಕು ನಗರ್ಲೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಕಾರ್ಯಕ್ರಮವನ್ನು ಗಣ್ಯರು ಹಾಗೂ ಶಾಲಾ ಮಕ್ಕಳು ಉದ್ಘಾಟಿಸಿದರು. ನಂತರ ತಾಲ್ಲೂಕು ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮ ರತ್ನಾಕರ್ ಮಾತನಾಡಿ, ಈ ಪ್ರತಿಭಾ ಕಾರಂಜಿ ಕಾರ್ಯಕ್ರಮ ಮಕ್ಕಳ ಪ್ರತಿಭೆಯನ್ನು ಹೊರ ತೆಗೆಯಲು ಉತ್ತಮ ವೇದಿಕೆಯಾಗಿದೆ. ಶಾಲಾ ಮಕ್ಕಳು ಸೋಲು–ಗೆಲುವನ್ನು ಮನಸ್ಸಿನಲ್ಲಿಡದೇ ತಮ್ಮ ಪ್ರತಿಭೆಯನ್ನು ಪ್ರಸ್ತುತ ಪಡಿಸುವ ಕಡೆ ಹೆಚ್ಚು ಗಮನ ಹರಿಸಬೇಕು, ಆಗ ಉತ್ತಮ ಫಲಿತಾಂಶ ನಿಮ್ಮದಾಗುತ್ತದೆ ಎಂದರು.

ಇದೇ ವೇಳೆ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ವಿವಿಧ ವೇಷ ತೊಟ್ಟ ಪ್ರತಿಭೆ ಪ್ರದರ್ಶಿಸಿದರು. ಮುಖ್ಯ ಶಿಕ್ಷಕಿ ವಿಜಯಾರವರು ಅಧ್ಯಕ್ಷತೆ ವಹಿಸಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಇ.ಸಿ.ಓ ಸಿದ್ದರಾಜು, ಬಿ.ಆರ್.ಪಿ ಪ್ರಭಾವತಿ, ಸಿ.ಆರ್.ಪಿ ನಾಗಲಕ್ಷ್ಮಿ, ಬಿಳಿಗೆರೆ ಸಿ.ಆರ್.ಪಿ ನಾಗರಾಜು, ಸಿ.ಆರ್.ಪಿ ಕಿರಣ್ ತಾಲ್ಲೂಕು ಶಿಕ್ಷಕರ ಸಂಘದ ಕಾರ್ಯದರ್ಶಿ ಸೋಮೇಶ್, ನಗರ್ಲೆ ಸ.ಹಿ.ಪ್ರಾ.ಶಾಲೆಯ ಮುಖ್ಯ ಶಿಕ್ಷಕಿ ವಿಜಯ, ಸಹ ಕಾರ್ಯದರ್ಶಿ ಶಕೀಲ್ ಭಾಷ, ಆಲಂಬೂರು ಶಾಲೆಯ ಮು.ಶಿ. ಮೀನಾಕ್ಷಿ, ಹೊರಳವಾಡಿ ಮು.ಶಿ. ಸುಬ್ಬಶೆಟ್ಟಿ, ಹನಿಯಂಬಳ್ಳಿ ಶಿಕ್ಷಕರಾದ ಮಹದೇವಯ್ಯ, ಸೇರಿದಂತೆ ಎಲ್ಲಾ ಶಾಲೆಯ ಸಹ ಶಿಕ್ಷಕರುಗಳು ಮತ್ತು ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು.

ಹಾವು ಕಚ್ಚಿ ಮಹಿಳೆ ಸಾವು



ಹೆಚ್.ಡಿ.ಕೋಟೆ, ಸೆ.1– ನಾಗರಹಾವು ಕಚ್ಚಿ ರೈತ ಮಹಿಳೆ ಸಾವನ್ನಪ್ಪಿರುವ ಘಟನೆ ತಾಲೂಕಿನ ಗೆಂಡತ್ತೂರು ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಗ್ರಾಮದ ವೆಂಕಟೇಗೌಡ ಅವರ ಪತ್ನಿ ಭಾಗ್ಯ (28) ಮೃತ ಮಹಿಳೆ. ತಮ್ಮ ಜಮೀನಿನಲ್ಲಿ ಶುಂಠಿ ಬೆಳೆ ಬೆಳೆದಿದ್ದು, ಕೆಲಸ ಮಾಡುತ್ತಿದ್ದ ಕೂಲಿ ಕೆಲಸಗಾರರಿಗೆ ಶೆಡ್‌ನಲ್ಲಿ ಅಡುಗೆ ಮಾಡುತ್ತಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ನಾಗರಹಾವು ಮಹಿಳೆಗೆ ಕಚ್ಚಿದೆ. ಈ ಸಂದರ್ಭದಲ್ಲಿ ಮಹಿಳೆ ಕೂಗಿಕೊಂಡಾಗ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಗಂಡ ಹಾಗೂ ಇತರರು ಸಹಾಯಕ್ಕೆ ಬಂದಿದ್ದಾರೆ. ಅಲ್ಲೇ ಇದ್ದ ಹಾವನ್ನು ಹಿಡಿದು ಚೀಲದಲ್ಲಿ ಹಾಕಿ ನಂತರ ಮಹಿಳೆಯನ್ನು ಎನ್.ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದಾರೆ. ಚಿಕಿತ್ಸೆ ಫಲಕಾರಿಯಾಗದೆ ಮಹಿಳೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ನಂತರ ಮಹಿಳೆಯ ಮೃತದೇಹವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ತಂದು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಘಟನೆಗೆ ಸಂಬಂಧಿಸಿದಂತೆ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸಕಾಲದಲ್ಲಿ ಸಾಲ ಮರು ಪಾವತಿಸಿ, ಸೌಲಭ್ಯ ಪಡೆಯಿರಿ

ತಿ.ನರಸೀಪುರ, ಸೆ1– ನಿಗದಿತ ಅವಧಿಯಲ್ಲಿ ಸಾಲ ಮರು ಪಾವತಿ ಮಾಡುವುದರ ಮೂಲಕ ಸಹಕಾರ ಸಂಘದ ಸವಲತ್ತುಗಳನ್ನು ಬಳಸಿಕೊಳ್ಳಿ ಎಂದು ತಾಲೂಕಿನ ನೆರಗ್ಯಾತನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎನ್.ಎಂ.ಜಯಪ್ಪ ಹೇಳಿದರು.

ಗ್ರಾಮದ ಸಹಕಾರ ಸಂಘದ ಆವರಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ 2022–23ನೇ ಸಾಲಿನ ಸರ್ವ ಸದಸ್ಯರ ಸಭೆಯ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಸಂಘದಿಂದ ವಿವಿಧೋದ್ದೇಶಗಳಿಗೆ ಸಾಲ ಪಡೆದ ಸಂಘದ ಸದಸ್ಯರು ಸಕಾಲಕ್ಕೆ ಸಾಲವನ್ನು ಮರುಪಾವತಿ ಮಾಡಿದಲ್ಲಿ ಸಂಘದ ಬೆಳವಣಿಗೆ ಸಾಧ್ಯವಾಗಲಿದ್ದು, ಆರ್ಥಿಕವಾಗಿ ಮುಂದುವರೆಯಲು ಸಹಕಾರಿಯಾಗುತ್ತದೆ. ಹಾಗಾಗಿ ಸಾಲ ಪಡೆದ ರೈತರು ಸುಸ್ತಿದಾರರಾಗದೇ ಸಕಾಲಕ್ಕೆ ಸಾಲ ಮರು ಪಾವತಿಸಿ ಮತ್ತೆ ಹೆಚ್ಚುವರಿ ಸಾಲ ಪಡೆದು ಸ್ವಾವಲಂಭಿ ಜೀವನ ನಡೆಸುವಂತೆ ಮನವಿ ಮಾಡಿದರು.

ಸಭೆಯಲ್ಲಿ ಸೊಸೈಟಿ ವತಿಯಿಂದ ಸೀಮೆ ಎಣ್ಣೆ ವಿತರಣೆ ಸ್ಥಗಿತಗೊಳಿಸಿರುವ ಬಗ್ಗೆ ಚರ್ಚೆ ನಡೆಸಲಾಯಿತು. ಸೀಮೆಎಣ್ಣೆ ಸರಬರಾಜು ಇಲ್ಲದ್ದರಿಂದ ಸೀಮೆಎಣ್ಣೆ ಕೊಡಲಾಗುತ್ತಿಲ್ಲ. ಸರಬರಾಜಾದರೆ ಎಂದಿನಂತೆ ವಿತರಣೆ ಮಾಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು. ಸಂಘದ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವ ಬಗ್ಗೆ ಚರ್ಚೆ ನಡೆದು ಉದ್ದೇಶಿತ ಕಾರ್ಯಕ್ಕೆ ಸ್ಥಳಾವಕಾಶ ನೀಡಲು ತೀರ್ಮಾನಿಸಲಾಯಿತು. ನಬಾರ್ಡ್ ವತಿಯಿಂದ ಪೆಟ್ರೋಲ್ ಬಂಕ್ ನಿರ್ಮಿಸಲು ಅವಕಾಶ ಇದ್ದು ಸಹಕಾರ ಸಂಘದಿಂದ ಇದರ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ ಎಂದು ಮಾಹಿತಿ ನೀಡಲಾಯಿತು.

ಸಭೆಯಲ್ಲಿ 2023–24ನೇ ಸಾಲಿನ ಸಂಘದ ಅಂದಾಜು ಬಜೆಟ್ ಮಂಜೂರು ಮಾಡುವ ವಿಚಾರದ ಬಗ್ಗೆ ಚರ್ಚಿಸಲಾಯಿತಲ್ಲದೇ, ಸರ್ಕಾರದ ಆದೇಶಾನುಸಾರ ಹೊಸ ಮಾದರಿ ಬೈಲಾ ಅಳವಡಿಸಿ ಕೊಳ್ಳುವ ವಿಚಾರ ಚರ್ಚೆಗೆ ಬಂದು ಬೈಲಾ ಅಳವಡಿಸಿಕೊಳ್ಳಲು ಒಪ್ಪಿಗೆ ಸೂಚಿಸಲಾಯಿತು.

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್.ಎಸ್.ಧನಂಜಯ್ ವಾರ್ಷಿಕ ವರದಿ ಮಂಡಿಸಿ ಸಂಘವು 2022–23ನೇ ಸಾಲಿನಲ್ಲಿ 56,455 ರೂ.ಗಳ ನಿವ್ವಳ ಲಾಭ ಗಳಿಸಿದೆ ಎಂದು ಮಾಹಿತಿ ನೀಡಿದರು.



ಸಹಕಾರ ಸಂಘದ ಉಪಾಧ್ಯಕ್ಷ ಸಿದ್ದರಾಜು, ನಿರ್ದೇಶಕರಾದ ದುಂಡಪ್ಪ, ಬಸವರಾಜಪ್ಪ, ನಾಗೇಶ್, ಬಸವರಾಜು, ಎಂ.ಪ್ರಭುಸ್ವಾಮಿ, ಎಂ. ಶಿವರಾಜು, ಡಿ.ಮಂಟೇಸ್ವಾಮಿ, ಶಿವಕುಮಾರ್, ಕೆಂಪಮ್ಮಣಿ, ಸುಂದ್ರಮ್ಮ, ಮುಖಂಡರಾದ ಕೋಣಗಳ್ಳಿ ಬಸವರಾಜಪ್ಪ, ನಾಗರಾಜು, ಪ್ರಭುಸ್ವಾಮಿ, ಮುಡುಕನಪುರ ಕೂಸಪ್ಪ ಮಹದೇವಪ್ಪ ಎಂ.ಎಲ್.ಹುಂಡಿ ಸಿದ್ದವೀರ ಸ್ವಾಮಿ, ಚಿಟಗಯ್ಯನಕೊಪ್ಪಲು ನಂಜುಂಡೇಗೌಡ, ರವಿ, ನಾಗಲಗೆರೆ ಮಹದೇವ, ಮಹೇಶ್, ನೆರಗ್ಯಾತನಹಳ್ಳಿ ಚಂದ್ರು, ನಟರಾಜು, ಗಿರೀಶ್, ನಾಗಪ್ಪ, ಡೈರಿ ಗುರುಮೂರ್ತಿ, ತಾ.ಪಂ ಮಾಜಿ ಅಧ್ಯಕ್ಷ ಕುಮಾರಸ್ವಾಮಿ ಸಂಘದ ಮೇಲ್ವಿಚಾರಕ ಎನ್.ಎಂ.ರಮೇಶ್, ಎಂ.ಮನು, ಎನ್.ಮಮತ ಸೇರಿದಂತೆ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಮಿಸ್ಟೇಕ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಡ್ರೀಮ್ ಗರ್ಲ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕೌಶಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಖುಷಿ (ತೆ)	4 ಪ್ರದರ್ಶನಗಳು
ಸಂಗಂ	
ಟೋಬಿ (ಕ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ಜೈಲರ್ (ತ): ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ಕಿಂಗ್ ಆಫ್ ಕೋಥಾ (ಮ): ರಾ.10.25ಕ್ಕೆ.
ಸ್ಕ್ರೀನ್ 2	ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಬೆ.9.50ಕ್ಕೆ, ಜೈಲರ್ (ಕ): ಮ.1ಕ್ಕೆ, ಗದರ್ 2 (ಹಿಂ): ಸಂ.4.10ಕ್ಕೆ, ಡ್ರೀಂ ಗರ್ಲ್ (ಹಿಂ): ರಾ.7.25ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 3	ರಾಮಚಂದ್ರ ಬಾಸ್ & ಕೋ (ಮ): ಬೆ.10ಕ್ಕೆ, ಗ್ರ್ಯಾನ್ ಟುರಿಸ್ಮೋ (ಇಂ): ಮ.1.30ಕ್ಕೆ, ರಾ.7.20ಕ್ಕೆ, ಗಾಂಢೀವಧಾರಿ ಅರ್ಜುನ (ತೆ): ಸಂ.4.30ಕ್ಕೆ, ಅಖೇಲಿ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟೋಬಿ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಬನ್ನೂರಿನಲ್ಲಿ ಶುಕ್ರವಾರ ಶ್ರೀ ಗುರುರಾಘವೇಂದ್ರರ 352ನೇ ಆರಾಧನೆಯ ಪ್ರಯುಕ್ತ ಯುವಕರಿಂದ ರಾಯರ ಮೆರವಣಿಗೆ ಕಾರ್ಯಕ್ರಮ ನಡೆಯಿತು. ಎಲ್ಲಾ ಯುವಕ ಮಿತ್ರರು ಉಪಸ್ಥಿತರಿದ್ದರು.

ರಂಗಸ್ವಾಮಿ ನಿಧನ



ಮಲ್ಕುಂಡಿ, ಸೆ.1– ನಂಜನಗೂಡು ತಾಲೂಕು ಮಲ್ಕುಂಡಿ ಗ್ರಾಮದ ನಿವಾಸಿ ರಂಗಸ್ವಾಮಿ(48) ಅವರು ಅನಾರೋಗ್ಯದಿಂದ ಗುರುವಾರ ತಡರಾತ್ರಿ ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮವಾದ ಮಲ್ಕುಂಡಿಯಲ್ಲಿ ನೆರವೇರಿತು.

ಲಕ್ಷ್ಮಮ್ಮ



ಕೆ.ಆರ್.ನಗರ: ಪಟ್ಟಣದ ನಿವಾಸಿ ಲಕ್ಷ್ಮಮ್ಮ(54), ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಪತಿ ಲೋಕೋಪಯೋಗಿ ಇಲಾಖೆಯ ನೌಕರ ಬಸವರಾಜು, ಮೂವರು ಪುತ್ರರು ಸೇರಿದಂತೆ ಬಂಧು ವರ್ಗವನ್ನು ಅಗಲಿದ್ದಾರೆ.

ಸೆ.2ರಂದು ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ. ಅಂತಿಮ ದರ್ಶನಕ್ಕಾಗಿ ಪುರಸಭೆ ಕಛೇರಿ ಹಿಂಭಾಗ ಇರುವ ಲೋಕೋಪಯೋಗಿ ಇಲಾಖೆಯ ವಸತಿ ಗೃಹ(ಮೃತರ ನಿವಾಸದಲ್ಲಿ) ಇರಿಸಲಾಗಿದೆ. ಶಾಸಕ ಡಿ.ರವಿಶಂಕರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಅರುಣ್‌ಕುಮಾರ್, ಪೋಟೋಗ್ರಾಫರ್ ಅಸೋಸಿಯೇಸನ್ ಅಧ್ಯಕ್ಷ ವಿಶ್ವನಾಥ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಕಾವೇರಿ ನದಿ ನೀರು ಹಂಚಿಕೆ ವಿವಾದ: ವಿಚಾರಣೆ ಸೆ.6ಕ್ಕೆ ಮುಂದೂಡಿದ ಸುಪ್ರೀಂ

ನವದೆಹಲಿ: ಕಾವೇರಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿ ತಮಿಳುನಾಡು ಸಲ್ಲಿಸಿರುವ ಅರ್ಜಿಯನ್ನು ಶುಕ್ರವಾರ ಪರಿಗಣಿಸಿದ ಸುಪ್ರೀಂಕೋರ್ಟ್, ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 6 ಬುಧವಾರಕ್ಕೆ ಮುಂದೂಡಿದೆ.

ನಾವು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ಪಾಲಿಸಿದ್ದೇವೆ ಎಂದು ಕರ್ನಾಟಕ ಪರ ವಕೀಲ ಶ್ಯಾಮ್ ದಿವಾನ್ ಸುಪ್ರೀಂ ಕೋರ್ಟ್‌ಗೆ ತಿಳಿಸಿದರು. ಆದರೆ, 5000 ಕ್ಯುಸೆಕ್ ನೀರು ಸಾಕಾಗುವುದಿಲ್ಲ. ಕರ್ನಾಟಕವು ಹೆಚ್ಚು ನೀರು ಹರಿಸಬೇಕು ಎಂದು ತಮಿಳುನಾಡು



ಪರ ವಕೀಲ ಮುಕುಲ್ ರೋಹಟಗಿ ವಾದ ಮಂಡನೆ ಮಾಡಿದರು.

ಸೆ.11ರಂದು ವಿಚಾರಣೆ ನಡೆಸುವಂತೆ ಕರ್ನಾಟಕದ ವಕೀಲರು ಒತ್ತಾಯಿಸಿದರು. ಆದರೆ, ಸೋಮವಾರ ವಿಚಾರಣೆ ನಡೆಸುವಂತೆ ತಮಿಳುನಾಡು ವಕೀಲರು ಆಗ್ರಹಿಸಿದರು. ಕೊನೆಯದಾಗಿ ಸುಪ್ರೀಂಕೋರ್ಟ್ ಸೆ.6ಕ್ಕೆ ವಿಚಾರಣೆಯನ್ನು ಮುಂದೂಡಿತು. ಶುಕ್ರವಾರ ವಿಚಾರಣೆ ನಡೆಯುವುದೇ ಅನುಮಾನವಾಗಿತ್ತು. ನ್ಯಾಯಮೂರ್ತಿ ಗವಾಯಿ ನೇತೃತ್ವದ ಪೀಠದ ವಿಚಾರಣಾ ಪಟ್ಟಿಯಲ್ಲಿ ಪ್ರಕರಣದ ಬಗ್ಗೆ ಉಲ್ಲೇಖಿಸದೇ ಇರುವುದರಿಂದ ವಿಚಾರಣೆ ನಡೆಯುವುದು ಅನುಮಾನ ಎಂದು ವರದಿಯಾಗಿತ್ತು.

ಸುಪ್ರೀಂಕೋರ್ಟ್ ಮೊರೆ ಹೋದ ನಂತರ ಕರ್ನಾಟಕ ಹೆಚ್ಚುವರಿ ನೀರು ಹರಿಸಿದೆ. ಕರ್ನಾಟಕದ ಡ್ಯಾಂಗಳಲ್ಲಿ ನೀರಿನ ಲಭ್ಯತೆ ಮಾಹಿತಿ ಆಧಾರದಲ್ಲಿ ನೀರು ಹರಿಸಲಿ ಎಂದು ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿತ್ತು. ಜೂನ್, ಜುಲೈ, ಆಗಸ್ಟ್ ತಿಂಗಳಲ್ಲಿ ಕರ್ನಾಟಕವು 80 ಟಿಎಂಸಿ ನೀರು ಹರಿಸಬೇಕಿತ್ತು. ಆದರೆ ಕೇವಲ 30 ಟಿಎಂಸಿ ನೀರು ಮಾತ್ರ ಹರಿಸಲಾಗಿದೆ. ಕರ್ನಾಟಕದ ಜಲಾಶಯಗಳಲ್ಲಿ ಸಾಕಷ್ಟು ನೀರು ಸಂಗ್ರಹವಾಗಿದ್ದರೂ ಮಳೆ ಕೊರತೆ ನೆಪ ಹೇಳಿ ಪೂರ್ಣಪ್ರಮಾಣದ ನೀರು ಬಿಡುಗಡೆ ಮಾಡಿಲ್ಲ ಎಂದು ಅಫಿಡವಿಟ್‌ನಲ್ಲಿ ತಮಿಳುನಾಡು ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು.

ಇಂದು ಭಾರತ–ಪಾಕ್ ಹೈವೋಲ್ಟೇಜ್ ಪಂದ್ಯ



ಪಲ್ಲೆಕೆಲೆ (ಶ್ರೀಲಂಕಾ): ಕ್ರೀಡಾಭಿಮಾನಿಗಳ ಕಾತರದಿಂದ ಕಾಯುತ್ತಿರುವ ಭಾರತ–ಪಾಕಿಸ್ತಾನ ಕ್ರಿಕೆಟ್ ಪಂದ್ಯ ನಾಳೆ (ಶನಿವಾರ) ನಡೆಯಲಿದೆ. ಪಂದ್ಯಕ್ಕೆ ಮಳೆ ಅಡ್ಡಿಯಾಗುವ ಮುನ್ಸೂಚನೆ ಇದೆ. ಹವಾಮಾನ ಇಲಾಖೆಯ ಪ್ರಕಾರ, ನಾಳೆ ಶೇ70ರಿಂದ 90 ರಷ್ಟು ಮಳೆ ಸುರಿಯುವ ಸಾಧ್ಯತೆ ಇದೆ. ಹೀಗಾಗಿ ಪಂದ್ಯ ನಡೆಯುವ ಸಂಭವ ಕಡಿಮೆ ಎನ್ನಲಾಗುತ್ತಿದೆ.

ಕಳೆದ ವರ್ಷ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿ ಆಗಿದ್ದವು. ಪಂದ್ಯದಲ್ಲಿ ವಿರಾಟ್ ಕೊಹ್ಲಿ 82 ರನ್‌ಗಳ ಏಕಾಂಗಿ ಆಟದಿಂದ ಪಾಕಿಸ್ತಾನ ನೀಡಿದ್ದ 160 ರನ್‌ಗಳ ಗುರಿಯನ್ನು 4 ವಿಕೆಟ್‌ಗಳಿಂದ ಭಾರತ ಗೆದ್ದು ಬೀಗಿತ್ತು. ಈ ಪಂದ್ಯದ ಮೂಲಕ ಎರಡು ವರ್ಷಗಳ ಕಾಲ ಫಾರ್ಮ್ ಕಳೆದುಕೊಂಡಿದ್ದ ವಿರಾಟ್ ಲಯಕ್ಕೆ ಮರಳಿದ್ದರು. ಇದಾದ ನಂತರ ಸಾಂಪ್ರದಾಯಿಕ ಎದುರಾಳಿಗಳು ನಾಳೆ (ಸೆಪ್ಟೆಂಬರ್ 2) ಮತ್ತೆ ಎದುರಾಗುತ್ತಿದ್ದಾರೆ. ಹೀಗಾಗಿ ಪಂದ್ಯದ ರೋಚಕತೆ ಹೆಚ್ಚಾಗಿದೆ.

ಅಂಕಿಅಂಶಗಳ ಪ್ರಕಾರ, ಏಷ್ಯಾಕಪ್‌ನಲ್ಲಿ ಒಟ್ಟು 17 ಬಾರಿ ಉಭಯ ತಂಡಗಳು ಮುಖಾಮುಖಿ ಆಗಿದ್ದು, 9 ಬಾರಿ ಭಾರತ ಜಯಿಸಿದರೆ, ಪಾಕ್ 6 ಬಾರಿ ಗೆದ್ದಿದೆ. ಎರಡು ಪಂದ್ಯಗಳು ಫಲಿತಾಂಶ ರಹಿತವಾಗಿವೆ. ನಾಳಿನ ಪಂದ್ಯ ಮತ್ತೊಂದು ಫಲಿತಾಂಶರಹಿತ ಪಂದ್ಯವಾಗುತ್ತಾ ಎಂಬ ಅನುಮಾನ ಕಾಡುತ್ತಿದೆ. ಮಳೆಯಿಂದ ಪಂದ್ಯ ರದ್ದಾದಲ್ಲಿ ವಿಶ್ವದಾದ್ಯಂತ ಈ ಪಂದ್ಯಕ್ಕಾಗಿ ಕಾದಿರುವ ಅಭಿಮಾನಿಗಳ ನಿರೀಕ್ಷೆಗಳಿಗೆ ತಣ್ಣೀರೆರಚಿದಂತಾಗಲಿದೆ.

ಶ್ರೀಲಂಕಾ ಮೈದಾನದಲ್ಲಿ ಭಾರತ ಮತ್ತು ಪಾಕಿಸ್ತಾನ ಮೂರು ಪಂದ್ಯ ಆಡಿದ್ದು, ತಲಾ ಒಂದೊಂದು ಗೆದ್ದುಕೊಂಡರೆ, ಒಂದು ಪಂದ್ಯ ಫಲಿತಾಂಶ ರಹಿತವಾಗಿದೆ.

ಪಲ್ಲೆಕೆಲೆ ಮೈದಾನದಲ್ಲಿ ಇಲ್ಲಿಯತನಕ 33 ಏಕದಿನ ಪಂದ್ಯಗಳು ನಡೆದಿವೆ. ಈ ಪೈಕಿ 3 ಪಂದ್ಯ ಮಾತ್ರ ಈ ಕಾಲಘಟ್ಟ ಅಂದರೆ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ನಡೆದಿದೆ. ಈ ಸಮಯದಲ್ಲಿ ಮುಂಗಾರು ಮಳೆ ಇರುವ ಕಾರಣ ಇಲ್ಲಿ ಶ್ರೀಲಂಕಾ ಕ್ರಿಕೆಟ್ ಮಂಡಳಿ ಕಡಿಮೆ ಪಂದ್ಯಗಳನ್ನು ಆಯೋಜಿಸುತ್ತದೆ.

ನಾಳೆ ಕನಿಷ್ಠ 20 ಓವರ್‌ಗಳ ಪಂದ್ಯವನ್ನಾದರೂ ನಡೆಸಲು ಎಸಿಸಿ ಪ್ರಯತ್ನಿಸುತ್ತದೆ. ಚುಟುಕು ಪಂದ್ಯಕ್ಕೂ ಮಳೆ ಅವಕಾಶ ನೀಡದೇ ಹೋದಲ್ಲಿ ಉಭಯ ತಂಡಕ್ಕೂ ತಲಾ ಒಂದೊಂದು ಅಂಕ ಹಂಚಲಾಗುತ್ತದೆ. ಹೀಗಾದಲ್ಲಿ ಪಾಕಿಸ್ತಾನ ತಂಡಕ್ಕೆ ಸೂಪರ್ ಫೋರ್‌ಗೆ ಸ್ಥಾನ ಸಿಕ್ಕಂತೆ. ಭಾರತ ಆಗಸ್ಟ್ 4ರಂದು ನೇಪಾಳದ ವಿರುದ್ಧದ ಪಂದ್ಯ ಗೆಲ್ಲಲೇ ಬೇಕಿದೆ. ಈ ಪಂದ್ಯವೂ ಮಳೆಯಿಂದ ರದ್ದಾದಲ್ಲಿ ಭಾರತ ಎರಡು ಅಂಕದಿಂದ ಸೂಪರ್ ಫೋರ್ ಪ್ರವೇಶಿಸುತ್ತದೆ. ಈ ಹಿಂದೆ ಪಲ್ಲೆಕಲೆ ಕ್ರೀಡಾಂಗಣದಲ್ಲಿ ಭಾರತ ಮೂರು ಪಂದ್ಯಗಳನ್ನು ಆಡಿದ್ದು, ಮೂರರಲ್ಲೂ ಗೆದ್ದಿದೆ. ನಾಳೆ ಪಂದ್ಯ ನಡೆದಲ್ಲಿ ಈ ಅಂಕಿಅಂಶಗಳಂತೆ ಭಾರತ ಗೆಲ್ಲುವ ಫೇವ್‌ರೇಟ್ ತಂಡ.

ನಟ ಗಣೇಶ್ ಮನೆ ನಿರ್ಮಾಣ ಮುಂದುವರಿಕೆಗೆ ಹೈಕೋರ್ಟ್ ಅಸ್ತು

ಬೆಂಗಳೂರು, ಸೆ1– ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮ ವಲಯದಲ್ಲಿ ಚಿತ್ರನಟ ಗಣೇಶ್ ತಮ್ಮ ವಾಸದ ಮನೆ ನಿರ್ಮಾಣ ಮುಂದುವರಿಸಲು ಹೈಕೋರ್ಟ್ ಅನುಮತಿ ನೀಡಿದೆ. ಆದರೆ, "ಈ ಅನುಮತಿಯು ಅರ್ಜಿ ವಿಚಾರಣೆ ನಂತರ ಹೊರಹೊಮ್ಮುವ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ" ಎಂದು ಆದೇಶಿಸಿದೆ.



ಈ ಕುರಿತಂತೆ ನಟ ಗಣೇಶ್ ಸಲ್ಲಿಸಿದ್ದ ರಿಟ್ ಅರ್ಜಿ ಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಸುಪ್ರೀಂಕೋರ್ಟ್ ನೀಡಿರುವ ಆದೇಶದಂತೆ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಜೀವನ ನಡೆಸುವುದಕ್ಕಾಗಿ ಶಾಶ್ವತ ಕಟ್ಟಡ ನಿರ್ಮಾಣ ಮಾಡಬಹುದು ಎಂದು ತಿಳಿಸಿದೆ. ಆದರೆ, ವಾಣಿಜ್ಯ ಬಳಕೆಗೆ ಅವಕಾಶವಿಲ್ಲ. ಈ ಪ್ರಕರಣದಲ್ಲಿ, ಅರ್ಜಿದಾರರು ವಾಸದ ಮನೆ ನಿರ್ಮಾಣ ಮಾಡುತ್ತಿದ್ದಾರೆ. ಹೀಗಾಗಿ ಮನೆ ನಿರ್ಮಾಣಕ್ಕೆ ಅನುಮತಿ ನೀಡಬೇಕು. ಒಂದು ವೇಳೆ ಅಂತಿಮ ಆದೇಶ ಗಣೇಶ್ ಅವರ ವಿರುದ್ಧ ಬಂದಲ್ಲಿ ನ್ಯಾಯಾಲಯದ ಆದೇಶಕ್ಕೆ ಬದ್ಧವಾಗಿರುತ್ತಾರೆ' ಎಂಬ ಭರವಸೆ ನೀಡಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, "ಅರ್ಜಿಯು ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ" ಎಂದು ತಿಳಿಸಿತು. 'ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹಂಗಳ ಹೋಬಳಿಯ ಜಕ್ಕಳಿ ಗ್ರಾಮದ ಸರ್ವೇ ನಂಬರ್ 105ರಲ್ಲಿ ಗಣೇಶ್ 1 ಎಕರೆ 24 ಗುಂಟೆ ಜಮೀನು ಖರೀದಿಸಿದ್ದಾರೆ. ಈ ಸ್ವತ್ತಿನಲ್ಲಿ ಅವರು ಜೆಸಿಬಿ ಯಂತ್ರದ ಸಹಾಯದಿಂದ ಭೂಮಿಯನ್ನು ಸಮತಟ್ಟು ಮಾಡಿ, ಬೃಹತ್ ಕಟ್ಟಡ ನಿರ್ಮಾಣಕ್ಕೆ ತಯಾರಿ ನಡೆಸುತ್ತಿರುವುದು ಕಂಡು ಬಂದಿದೆ ಎಂದು ಆಕ್ಷೇಪಿಸಿದ್ದ ಅರಣ್ಯ ಅಧಿಕಾರಿಗಳು, ಷರತ್ತುಗಳನ್ನು ಉಲ್ಲಂಘಿಸಿ ಬೃಹತ್ ಶಾಶ್ವತ ಕಟ್ಟಡ ನಿರ್ಮಾಣ ಮಾಡಲು ತಯಾರಿ ನಡೆಸುತ್ತಿರುವುದರಿಂದ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಬೇಕು ಎಂದು ಸೂಚಿಸಿದ್ದರು. ಈ ಸಂಬಂಧ ಬಂಡೀಪುರ ಸೂಕ್ಷ್ಮ ಪರಿಸರ ವಲಯದ ಉಸ್ತುವಾರಿ ಸಮಿತಿ, ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಬಂಡೀಪುರ ಹುಲಿ ಯೋಜನೆಯ ಕ್ಷೇತ್ರ ನಿರ್ದೇಶಕರು 2023ರ ಆಗಸ್ಟ್ 14ರಂದು ಗಣೇಶ್‌ಗೆ ನೋಟಿಸ್ ನೀಡಿದ್ದರು.

ಆರು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿ 'ಜಿಎಸ್‌ಟಿ ಲಕ್ಕಿ ಡ್ರಾ' ಯೋಜನೆ ಪ್ರಾರಂಭ

30 ಕೋಟಿ ರೂ. ಮೀಸಲು

ಗುರುಗ್ರಾಮ, ಸೆ.1– ಜಿಎಸ್‌ಟಿ ಲಕ್ಕಿ ಡ್ರಾ 'ಮೇರಾ ಬಿಲ್ ಮೇರಾ ಅಧಿಕಾರ್' ಯೋಜನೆಯನ್ನು ಆರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಾರಂಭಿಸಲಾಗಿದ್ದು, ಈ ಬಹುಮಾನ ಯೋಜನೆಗಾಗಿ ಕೇಂದ್ರ ಮತ್ತು ರಾಜ್ಯಗಳು ಈ ಹಣಕಾಸು ವರ್ಷಕ್ಕೆ 30 ಕೋಟಿ ರೂಪಾಯಿಯನ್ನು ಮೀಸಲಿಟ್ಟಿವೆ.


ಈ ಯೋಜನೆಯ ಆಪ್‌ನ್ನು ಇಲ್ಲಿಯವರೆಗೂ 50,000ಕ್ಕೂ ಹೆಚ್ಚು ಜನರು ಡೌನ್‌ಲೋಡ್ ಮಾಡಿಕೊಂಡಿದ್ದಾರೆ ಎಂದು ಹರಿಯಾಣ ಉಪ ಮುಖ್ಯಮಂತ್ರಿ ದುಶ್ಯಂತ್ ಚೌತಾಲಾ ಹೇಳಿದ್ದಾರೆ.

'ಮೇರಾ ಬಿಲ್ ಮೇರಾ ಅಧಿಕಾರ್' ಜಿಎಸ್‌ಟಿ ಲಕ್ಕಿ ಡ್ರಾ ಯೋಜನೆಯನ್ನು ಪ್ರಾಯೋಗಿಕವಾಗಿ ಆರು ರಾಜ್ಯಗಳಲ್ಲಿ ಪ್ರಾರಂಭಿಸಲಾಗುತ್ತಿದ್ದು, ಬಹುಮಾನದ ಹಣವನ್ನು ಕೇಂದ್ರ ಮತ್ತು ರಾಜ್ಯಗಳು ಸಮಾನವಾಗಿ ನೀಡಲಿವೆ ಎಂದು ಕಂದಾಯ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಜಿಎಸ್‌ಟಿಯು ನಾಗರಿಕರು, ಗ್ರಾಹಕರು ಮತ್ತು ಸರ್ಕಾರಗಳಿಗೆ ಪ್ರಯೋಜನಕಾರಿಯಾಗಿದೆ. ಆದಾಯವು ಪ್ರತಿ ತಿಂಗಳು ಹೆಚ್ಚುತ್ತಿದೆ ಮತ್ತು ಜಿಎಸ್‌ಟಿಯಡಿ ತೆರಿಗೆ ದರ ಕಡಿಮೆಯಾಗುವುದನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯಗಳು ಒಗ್ಗೂಡಿವೆ ಎಂದು ಅವರು ತಿಳಿಸಿದ್ದಾರೆ.


ಈ ಹಣಕಾಸು ವರ್ಷದಲ್ಲಿ ಪ್ರತಿ ತಿಂಗಳು ಸರಾಸರಿ ಜಿಎಸ್‌ಟಿ ಸಂಗ್ರಹ 1.60 ಲಕ್ಷ ಕೋಟಿ ರೂ. ಆಗಿದ್ದು, ಅಸ್ಸಾಂ, ಗುಜರಾತ್ ಮತ್ತು ಹರಿಯಾಣ ಮತ್ತು ಪುದುಚೇರಿ, ದಾದ್ರಾ ನಗರ ಹವೇಲಿ, ದಮನ್ ಮತ್ತು ದಿಯು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇಂದಿನಿಂದ ಪ್ರಾಯೋಗಿಕ ಆಧಾರದ ಮೇಲೆ ಮೇರಾ ಬಿಲ್ ಮೇರಾ ಅಧಿಕಾರ್ ಯೋಜನೆಯನ್ನು ಸರ್ಕಾರ ಶುಕ್ರವಾರ ಪ್ರಾರಂಭಿಸಿದೆ. ಪ್ರತಿ ತಿಂಗಳು 810 ಲಕ್ಕಿ ಡ್ರಾಗಳು ನಡೆಯುತ್ತವೆ. ಪ್ರತಿ ತ್ರೈಮಾಸಿಕದಲ್ಲಿ 2 ಬಂಪರ್ ಲಕ್ಕಿ ಡ್ರಾಗಳು ಇರುತ್ತವೆ.

ಮಾಸಿಕ ಡ್ರಾಗಳಲ್ಲಿ ತಲಾ 10,000 ರೂಪಾಯಿಗಳ ಮೌಲ್ಯದ ಜಿಎಸ್‌ಟಿ ಇನ್‌ವಾಯ್ಸ್‌ಗಳ 800 ಲಕ್ಕಿ ಡ್ರಾಗಳು ಮತ್ತು ತಲಾ 10 ಲಕ್ಷ ರೂ. ಬಹುಮಾನಗಳೊಂದಿಗೆ 10 ಡ್ರಾಗಳು ಸೇರಿವೆ. ಪ್ರತಿ ತ್ರೈಮಾಸಿಕದಲ್ಲಿ ತಲಾ 1 ಕೋಟಿ ರೂ. ಬಂಪರ್ ಡ್ರಾ ಸಿಗಲಿದೆ. ಜಿಎಸ್‌ಟಿ ಇನ್ ವಾಯ್ಸ್ ತಮ್ಮ ಹಕ್ಕು ಎಂದು ಜನರು ತಿಳಿದಿರಬೇಕು, ಮಾರಾಟದ ನಂತರದ ಸೇವೆಗೆ ಇದು ಅಗತ್ಯವಿದೆ ಮತ್ತು ಜನರಿಗೆ ಅರಿವು ಮೂಡಿಸಲು ನಾವು ಈ ಯೋಜನೆಯನ್ನು ಪ್ರಾರಂಭಿಸಿದ್ದೇವೆ ಎಂದು ಮಲ್ಹೋತ್ರಾ ಹೇಳಿದರು.



ಭಾರತದ ಕ್ಯಾನ್ಸರ್ ತಜ್ಞ ರವಿ ಕಣ್ಣನ್ ಅವರಿಗೆ ಮ್ಯಾಗ್ಸೆಸೆ ಪ್ರಶಸ್ತಿ

ಗುವಾಹಟಿ, ಸೆ1– ಭಾರತದ ಕ್ಯಾನ್ಸರ್ ತಜ್ಞ ರವಿ ಕಣ್ಣನ್ (Dr. Ravi Kannan R) ಅವರು ಪ್ರತಿಷ್ಠಿತ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿಗೆ ಭಾಜನರಾಗಿದ್ದಾರೆ. 2023ನೇ ಸಾಲಿನ ಮ್ಯಾಗ್ಸೆಸೆ ಪ್ರಶಸ್ತಿ ನಾಲ್ವರಿಗೆ ಹಂಚಿಕೆಯಾಗಿದ್ದು ಅದರಲ್ಲಿ ರವಿ ಕಣ್ಣನ್ ಕೂಡ ಒಬ್ಬರು. ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಏಷ್ಯಾದ ಅತ್ಯುನ್ನತ ಪ್ರಶಸ್ತಿಯಾಗಿದ್ದು ಏಷ್ಯಾದ ನೋಬೆಲ್ ಎಂದು ಗುರುತಾಗಿದೆ. 2007 ರಿಂದ ಅಸ್ಸಾಂನ Cachar Cancer Hospital and Research Centre (CCHRC) ನಿರ್ದೇಶಕರಾಗಿರುವ ರವಿ ಕಣ್ಣನ್, ಅಸ್ಸಾಂ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಬಡ ರೋಗಿಗಳಿಗೆ ಉಚಿತ ಹಾಗೂ ಗುಣಮಟ್ಟದ ಚಿಕಿತ್ಸೆ ನೀಡುವಲ್ಲಿ ಪ್ರಮುಖರಾಗಿದ್ದಾರೆ. 2007ರ ಮೊದಲು ರವಿ ಕಣ್ಣನ್ ಅವರು ಚೆನ್ನೈನ ಅಡ್ಯಾರ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಸರ್ಜನ್ ಆಗಿದ್ದರು.



ರವಿ ಕಣ್ಣನ್ ಜೊತೆ EUGENIO LEMOS, MIRIAM CORONEAL ಹಾಗೂ KORVI RAKSHAND ಅವರಿಗೆ ಮ್ಯಾಗ್ಸೆಸೆ ಪ್ರಶಸ್ತಿ ಲಭಿಸಿದೆ. ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ Ramon Magsaysay Award Foundation ವತಿಯಿಂದ 1958ರಿಂದ ಕೊಡಲಾಗುತ್ತಿದೆ. ಏಷ್ಯಾದಲ್ಲಿ ಸರ್ಕಾರಿ, ಸಮುದಾಯ, ವಿದೇಶಿ ಬಾಂಧವ್ಯ, ಆರೋಗ್ಯ, ಸಾಹಿತ್ಯ, ಕಲೆ, ಪತ್ರಿಕೋದ್ಯಮ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಈ ಪ್ರಶಸ್ತಿ ಕೊಡಲಾಗುತ್ತದೆ.

ಲೋಕಸಭಾ ಚುನಾವಣೆಯಲ್ಲಿ ಒಟ್ಟಾಗಿ ಹೋರಾಡಲು 'ಇಂಡಿಯಾ' ಮೈತ್ರಿಕೂಟ ನಿರ್ಣಯ

ಶೀಘ್ರದಲ್ಲೇ ಸೀಟು ಹಂಚಿಕೆಗೆ ನಿರ್ಧಾರ

ಮುಂಬೈ, ಸೆ1–ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಸಾಧ್ಯವಾದಷ್ಟೂ ಒಟ್ಟಾಗಿ ಹೋರಾಡಲು INDIA ಮೈತ್ರಿಕೂಟ ಶುಕ್ರವಾರ ನಿರ್ಧರಿಸಿದೆ ಮತ್ತು ಕೊಟ್ಟು–ತೆಗೆದುಕೊಳ್ಳುವ ಉತ್ಸಾಹದಲ್ಲಿ ಸೀಟು ಹಂಚಿಕೆ ವ್ಯವಸ್ಥೆಯನ್ನು ಶೀಘ್ರವಾಗಿ ಮುಕ್ತಾಯಗೊಳಿಸಲಾಗುವುದು ಎಂದು ಹೇಳಿದೆ. ಇದನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಲು ನಿರ್ಣಯವೊಂದನ್ನು ಅಂಗೀಕರಿಸಲಾಗಿದೆ.

ಜುಡೇಗಾ ಭಾರತ್, ಜೀತೇಗ ಭಾರತ, (ಭಾರತ ಒಗ್ಗೂಡುತ್ತದೆ, ಭಾರತ ಗೆಲ್ಲುತ್ತದೆ) ಚುನಾವಣೆಯ ತನ್ನ ಥೀಮ್ ಎಂದು ಮೈತ್ರಿಕೂಟ ಹೇಳಿದೆ. ನಾವು ಭಾರತದ ಪಕ್ಷಗಳು, ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಸಾಧ್ಯವಾದಷ್ಟು ಒಟ್ಟಾಗಿ ಸ್ಪರ್ಧಿಸಲು ನಿರ್ಧರಿಸಿದ್ದೇವೆ. ವಿವಿಧ ರಾಜ್ಯಗಳಲ್ಲಿ ಸೀಟು ಹಂಚಿಕೆಯ ವ್ಯವಸ್ಥೆಯನ್ನು ತಕ್ಷಣವೇ ಪ್ರಾರಂಭಿಸಲಾಗುವುದು ಮತ್ತು ಕೊಟ್ಟು–ತೆಗೆದುಕೊಳ್ಳುವ ಮನೋಭಾವದಲ್ಲಿ ಶೀಘ್ರವಾಗಿ ಈ ಪ್ರಕಿಯೆಯನ್ನು ಮುಕ್ತಾಯಗೊಳಿಸಲಾಗುವುದು ಎಂದು ನಿರ್ಣಯದಲ್ಲಿ ಹೇಳಿದೆ.

ಸಾರ್ವಜನಿಕ ಕಾಳಜಿ ಮತ್ತು ಪ್ರಾಮುಖ್ಯತೆಯ ವಿಷಯಗಳ ಕುರಿತು ದೇಶದ ವಿವಿಧ ಭಾಗಗಳಲ್ಲಿ ಶೀಘ್ರವಾಗಿ ಸಾರ್ವಜನಿಕ ರ್‍ಯಾಲಿ ಆಯೋಜಿಸಲು ನಿರ್ಧರಿಸುತ್ತೇವೆ. INDIA ಪಕ್ಷಗಳು ತಮ್ಮ ಸಂವಹನ ಮತ್ತು ಮಾಧ್ಯಮ ಕಾರ್ಯತಂತ್ರಗಳನ್ನು ಸಂಘಟಿಸುತ್ತವೆ ಮತ್ತು ವಿವಿಧ ಭಾಷೆಗಳಲ್ಲಿ "ಜುಡೇಗಾ ಭಾರತ್, ಜಿತೀಗಾ ಇಂಡಿಯಾ" ವಿಷಯದೊಂದಿಗೆ ಪ್ರಚಾರಗಳನ್ನು ನಡೆಸುತ್ತವೆ ಎಂದು ಹೇಳಲಾಗಿದೆ.

ಮುಂಬರುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ತಮ್ಮ ಯೋಜನೆಗಳನ್ನು ಅಂತಿಮಗೊಳಿಸಲು ಮುಂಬೈನಲ್ಲಿ ಸುಮಾರು 28 ವಿಪಕ್ಷಗಳ ನಾಯಕರು ಸಭೆ ಸೇರಿದ್ದರು. ಗಂಟೆಗಳ ಚರ್ಚೆಯ ನಂತರ ಸಮನ್ವಯ ಸಮಿತಿ ರಚನೆಯೊಂದಿಗೆ ಸೆಪ್ಟೆಂಬರ್ ಅಂತ್ಯದೊಳಗೆ ಸೀಟು ಹಂಚಿಕೆಯ ಕೆಲಸವನ್ನು ಪ್ರಾರಂಭಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ರಾಷ್ಟ್ರವ್ಯಾಪಿ ಸೀಟು ಹಂಚಿಕೆ ನಡೆಯಲಿದೆ ಎಂದು ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕರು ಆಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ತಿಳಿಸಿದರು. ಇದೇ ವೇಳೆ ಬಿಜೆಪಿಗೆ ತಿರುಗೇಟು ನೀಡಿದ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಭ್ರಷ್ಟಾಚಾರದ ವಿರುದ್ಧ ಹೋರಾಡಲು INDIA ಮೈತ್ರಿಕೂಟ ಸಂಕಲ್ಪ ಮಾಡಿದೆ ಮತ್ತು ಮಿತ್ರ–ಪರಿವಾರಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಸಹಾಯ ಮಾಡಲು ಬಡವರ ಬದುಕನ್ನು ಹಾಳು ಮಾಡುತ್ತಿದೆ. ಹಣದುಬ್ಬರ, ನಿರುದ್ಯೋಗದ ವಿರುದ್ಧ ಹೋರಾಡಲು ನಾವೆಲ್ಲರೂ ಒಂದೇ ಗುರಿ ಹೊಂದಿದ್ದೇವೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

ನೆಹರೂ ಸ್ಮಾರಕ ಮ್ಯೂಸಿಯಂ ಇನ್ನು ಪ್ರಧಾನಮಂತ್ರಿ ಮ್ಯೂಸಿಯಂ

ನವದೆಹಲಿ, ಸೆ.1– ರಾಷ್ಟ್ರ ರಾಜಧಾನಿ ದೆಹಲಿಯ ತೀನ್ ಮೂರ್ತಿ ಭವನ ಆವರಣದಲ್ಲಿರುವ ನೆಹರೂ ಸ್ಮಾರಕ ವಸ್ತು ಸಂಗ್ರಹಾಲಯ ಮತ್ತು ಗ್ರಂಥಾಲಯ ಸಂಸ್ಥೆಯನ್ನು (ಎನ್‌ಎಂಎಂಎಲ್) 'ಪ್ರಧಾನಮಂತ್ರಿಗಳ ವಸ್ತು ಸಂಗ್ರಹಾಲಯ ಮತ್ತು ಗ್ರಂಥಾಲಯ ಸಂಸ್ಥೆ' ಎಂದು ಅಧಿಕೃತವಾಗಿ ಮರುನಾಮಕರಣ ಮಾಡಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದನೆ ನೀಡಿದ್ದಾರೆ ಎಂದು ಕೇಂದ್ರ ಕ್ಯಾಬಿನೆಟ್ ಸಚಿವಾಲಯದ ಅಧಿಸೂಚನೆ ತಿಳಿಸಿದೆ. 'ಭಾರತ ಸರ್ಕಾರದ (ವ್ಯಾಪಾರ ಹಂಚಿಕೆ) ನಿಯಮಗಳು, 1961 ರ ಎರಡನೇ ಶೆಡ್ಯೂಲ್‌ನ 'ಸಂಸ್ಕೃತಿ ಸಚಿವಾಲಯ (ಸಂಸ್ಕೃತಿ ಮಂತ್ರಾಲಯ)' ಶೀರ್ಷಿಕೆಯಡಿಯ ನಮೂದು 9 ರಲ್ಲಿ, 'ನೆಹರೂ ಸ್ಮಾರಕ ಮ್ಯೂಸಿಯಂ ಮತ್ತು ಲೈಬ್ರರಿ' ಪದಕ್ಕೆ ಬದಲಾಗಿ 'ಪ್ರಧಾನಿಗಳ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ' ಪದವನ್ನು ನೀಡಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.